# ಸರಸ್ವತೀ
# ರಹಸ್ಯೋಪನಿಷಚ್ಚಂದ್ರಿಕೆ



ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ - 573211
2005

# ಭಕ್ತರ ಪ್ರೇಮವನ್ನು ಉಕ್ಕೇರಿಸುವ
# ಕೆಲವು ಸ್ತೋತ್ರ, ಪದ, ಪದ್ಯ - ಗ್ರಂಥಗಳು

1. **ಶಿವಾನಂದಲಹರೀ:** ಹೆಸರಿಗೆ ತಕ್ಕಂತೆ ಭಕ್ತರ ಹೃದಯದಲ್ಲಿ ಆನಂದದ ಹೆದ್ದೆರೆಗಳನ್ನು ಎಬ್ಬಿಸುವ ಭಕ್ತಪರವಾದ ಸ್ತೋತ್ರವಿದು. ಪರಮೇಶ್ವರನ ಮೂರ್ತಿದರ್ಶನ, ಪೂಜೆ, ಮಂತ್ರ, ಜಪ, ಸ್ತುತಿ, ಕೀರ್ತನೆ, ಸೇವೆ, ಧ್ಯಾನ- ಮುಂತಾದ ವಿಧಾನಗಳಿಂದ ಭಕ್ತನು ಹೇಗೆ ಆ ಪರವಸ್ತುವನ್ನು ತನ್ನ ಹೃದಯದಲ್ಲಿಟ್ಟುಕೊಂಡು ಸಂತತವಾಗಿ ಆನಂದಪಡಿಸಬಹುದು ಎಂಬುದನ್ನು ತಿಳಿಸಿಕೊಡುತ್ತದೆ.
(ಮೂರನೆಯ ಮುದ್ರಣ ಪುಟಗಳು ಡೆಮ್ಮಿ 4+78)

2. **ಶಿವನಾಮ ಅಷ್ಟೋತ್ತರ ಶತಕ:** ಶಿವರಹಸ್ಯದಲ್ಲಿರುವ ಗೌರೀ-ನಾರಾಯಣ ಸಂವಾದ ರೂಪವಾದ ಸ್ತೋತ್ರವಿದು. ಅರ್ಥ ವಿವರಣೆ ಸಹಿತವಾಗಿದೆ. ಅಷ್ಟೋತ್ತರ ಶತನಾಮಾವಳಿಯನ್ನು ಕೊಟ್ಟಿದೆ. (ಮೂರನೆಯ ಮುದ್ರಣ : 1992. ಪು. ಕ್ರೌನ್ 4+42)

3. **ಶಿವಮಹಿಮ್ನ ಸ್ತೋತ್ರ:** ಶಿವಭಕ್ತರಿಗೆಲ್ಲ ಪ್ರಿಯವಾಗಿರುವ ಪುಷ್ಪದಂತೆ ವಿರಚಿತವಾದ ಈ ಸ್ತೋತ್ರದ ಮೂಲ ಪ್ರತಿಪದಾರ್ಥ, ತಾತ್ಪರ್ಯ್ಯ ವಿವರಣೆಗಳೊಡನೆ ಕೂಡಿದೆ.
(ಎರಡನೆಯ ಮುದ್ರಣ: 1974 ಪು. ಕ್ರೌನ್ 6+72)

4. **ಶಿವಕವಚ:** ಭದ್ರಾಯುವೆಂಬ ರಾಜಕುಮಾರನಿಗೆ ಋಷಭಯೋಗೀಶ್ವರರೆಂಬ ಮಹಾತ್ಮರು ಉಪದೇಶಿಸಿದ ಸ್ತೋತ್ರವಿದು. ಸ್ಕಾಂದಪುರಾಣದ ಬ್ರಹ್ಮೋತ್ತರ ಖಂಡದಿಂದ ಆರಿಸಿದ ಈ ಸುಪ್ರಸಿದ್ಧ ಸ್ತೋತ್ರವನ್ನು ಮೂಲ ಅರ್ಥ, ವಿವರಣೆ-ಗಳ ಸಮೇತವಾಗಿ ಪ್ರಕಟಿಸಿದೆ.
(ಐದನೆಯ ಮುದ್ರಣ 1999 ಪು. ಕ್ರೌನ್ 4+56)

5. **ಮುಕುಂದಮಾಲಾ:** ಕುಲಶೇಖರಾಚಾರ್ಯರಿಂದ ವಿರಚಿತವಾದ ಈ ಭಕ್ತಿಪ್ರಧಾನ ಸ್ತೋತ್ರವು ವಿಷ್ಣುಭಕ್ತರಿಗೆಲ್ಲ ಪ್ರಿಯವಾಗಿರುತ್ತದೆ. ಭಗವದ್ಭಕ್ತಿಯ ಮರ್ಮವನ್ನು ವಿವರಿಸುವ ಈ ಪದ್ಯಗಳು ಹಾಡಿ ನಲಿಯಲು ಯೋಗ್ಯವಾಗಿವೆ. ಮೂಲ, ಅರ್ಥ, ಪಾಠಾಂತರಗಳನ್ನು ಕೊಟ್ಟಿದೆ.
(ಐದನೆಯ ಮುದ್ರಣ: 1991 ಪು. ಕ್ರೌನ್ 4+20)

6. **ಭೀಷ್ಮಸ್ತವರಾಜ:** (ಸ್ತೋತ್ರಮಾಲಾಭಾಗ 1) ಮಹಾಭಾರತದಿಂದ ಆರಿಸಿದ ಸ್ತೋತ್ರ. ಸುಪ್ರಸಿದ್ಧ ಜ್ಞಾನಿಗಳೂ ಭಕ್ತರೂ ಉಪಾಸಕರೂ ಆದ ಭೀಷ್ಮಾಚಾರ್ಯರು ದೇಹವನ್ನು ಬಿಡುವ ಕಾಲದಲ್ಲಿ ಶ್ರೀ ಕೃಷ್ಣನು ಎದುರಿಗೆ ಇದ್ದಾಗ ಮಾಡಿದ ಉತ್ತಮ ಸ್ತೋತ್ರವಿದು. ಪಾಠಾಂತರ ಸಮೇತ ಮೂಲ ಭಾವಾರ್ಥಗಳನ್ನೊಳಗೊಂಡಿದೆ. (ಎರಡನೆಯ ಮುದ್ರಣ: 1999 ಪು. ಡೆಮ್ಮಿ 8+95)

7. **ಮೂಲರಾಮಾಯಣ :** ಶ್ರೀಮದ್ವಾಲ್ಮೀಕಿರಾಮಾಯಣದ ಬಾಲಕಾಂಡದ ಮೊದಲನೆಯ ಸರ್ಗವನ್ನು ಮೂಲ, ಕನ್ನಡ ಅನುವಾದ ಸಮೇತ ಕೊಡಲಾಗಿದೆ. ರಾಮಾಯಣದ ಪೂರ್ಣ ಕಥೆಯು

---

ರಕ್ಷಾಪುಟದ ಮರುಹಾಳೆಯಲ್ಲಿ ಮುಂದುವರೆದಿದೆ.

ಅಧ್ಯಾತ್ಮ ಗ್ರಂಥಾವಳಿ

# ಸರಸ್ವತೀ
# ರಹಸ್ಯೋಪನಿಷಚ್ಚಂದ್ರಿಕೆ

(ಬಾವಾರ್ಥ - ವಿವರಣೆಗಳೊಡನೆ)

ಬರೆದವರು :
ಅಧ್ಯಾತ್ಮವಿದ್ಯಾಪ್ರವೀಣ, ವೇದವಿದ್ಯಾಭೂಷಣ
**ಹೆಚ್. ಎಸ್ . ಲಕ್ಷ್ಮೀನರಸಿಂಹಮೂರ್ತಿ**

**ಕ್ರಮಾಂಕ. ೧೮೯**

ಪ್ರಕಾಶಕರು :
**ಅಧ್ಯಾತ್ಮಪ್ರಕಾಶಕಾರ್ಯಾಲಯ**
ಹೊಳೆನರಸೀಪುರ - 573211
**2005**

ಪ್ರಥಮ ಮುದ್ರಣ 1985 ೧೦೦೦ ಪ್ರತಿಗಳು
ದ್ವಿತೀಯ ಮುದ್ರಣ 2005 ೧೦೦೦ ಪ್ರತಿಗಳು

ಪುಟಗಳು : 4 + 70

**ಬೆಲೆ : ರೂ. 20/-**

**ಇದರ ಹಕ್ಕುಗಳೆಲ್ಲವೂ**
**ಅಧ್ಯಾತ್ಮ ಪ್ರಕಾಶ ಕಾರ್ಯಾಲಯದವು**

ಅಕ್ಷರ ಜೋಡಣೆ :
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ.45, ನಾಗಸಂದ್ರ,
ತ್ಯಾಗರಾಜನಗರ ಪೋಸ್ಟ್, ಬೆಂಗಳೂರು-28
ದೂರವಾಣಿ : 26764650

ಮುದ್ರಣ ಸ್ಥಾನ :
**ಶ್ರೀಗಣೇಶಮಾರುತಿ ಪ್ರಿಂಟರ್ಸ್**
ನಂ. 76, 6ನೇ ಮುಖ್ಯರಸ್ತೆ
3ನೇ ಬ್ಲಾಕ್, ತ್ಯಾಗರಾಜನಗರ
ಬೆಂಗಳೂರು - 560 028
ದೂ. : 26766342

# ಮುನ್ನುಡಿ

1982ನೆಯ ದುಂದುಭಿಸಂವತ್ಸರದ ಶರನ್ನವರಾತ್ರಿಯ ಉತ್ಸವಕಾಲದಲ್ಲಿ ಹೊಳೆನರಸೀಪುರದ ಕೋಟೆಯಲ್ಲಿರುವ ಶ್ರೀಶಂಕರಾಚಾರ್ಯ-ಶಾರದಾಂಬಾ ದೇವಾಲಯದಲ್ಲಿ ನೆರವೇರಿದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನನ್ನ ವಿದ್ಯಾಗುರುಗಳಾದ ಪೂಜ್ಯ ಪಂಡಿತ ವೇ|| ಬ್ರ|| ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳು **''ಸರಸ್ವತೀರಹಸ್ಯೋಪನಿಷತ್ತನ್ನು''** ಕುರಿತು ನೀಡಿದ ಬೋಧಪ್ರದವಾದ ಉಪನ್ಯಾಸಗಳು ನನಗೆ ಬಹಳ ಪರಿಣಾಮವನ್ನುಂಟುಮಾಡಿದವು. ಅವುಗಳನ್ನು ಗ್ರಂಥರೂಪದಲ್ಲಿ ಹೊರತರಬೇಕೆಂದು ನಾನು ಪ್ರಾರ್ಥಿಸಿಕೊಂಡೆನು. ಪೂಜ್ಯರಿಗೆ ಅನೇಕ ಕಾರ್ಯಗೌರವಗಳ ನಿಮಿತ್ತ, ಕೂಡಲೇ ಈ ಗ್ರಂಥವನ್ನು ಸಿದ್ಧಗೊಳಿಸುವದು ಸಾಧ್ಯವಾಗಲಿಲ್ಲ. ಆಗಾಗ್ಗೆ ನಾನು ಅವರಿಗೆ ನೆನಪು ಕೊಡುತ್ತಲೇ ಇದ್ದೆನು. ಅವರು ಈ ಗ್ರಂಥವನ್ನು ಬರೆಯಲಾಂರಭಿಸಿದ ಮೇಲೆ ಪರಸ್ಥಳಗಳಲ್ಲಿ ಉಪನ್ಯಾಸ ಕಾರ್ಯಕ್ರಮಗಳಿಗಾಗಿ ಓಡಾಡಬೇಕಾಗಿ ಬಂತು. ಆ ಸಂದರ್ಭಗಳಲ್ಲಿ ಅವರಿಗೆ ಅಗತ್ಯವಾದ ಗ್ರಂಥಭಂಡಾರವು ಒದಗುತ್ತಿರಲಿಲ್ಲ. ಹೀಗಾಗಿ ಬರವಣಿಗೆಯು ವಿಳಂಬವಾಗಿ ಸಾಗುತ್ತಾ ಇದ್ದು ಕಟ್ಟಕಡೆಗೆ 1985ನೇ ಮಾರ್ಚಿ ಮಾಹೆಗೆ ಈ ಗ್ರಂಥವು ಪೂರ್ಣವಾಗಿ ಸಿದ್ಧವಾಯಿತು. ಆನಂತರ ಮುದ್ರಣದ ವ್ಯವಸ್ಥೆಯನ್ನು ಮಾಡಲಾಗಿ ಈಗ ಗ್ರಂಥವು ವಾಚಕರ ಕರಕಮಲವನ್ನು ಅಲಂಕರಿಸಿದೆ.

ಗ್ರಂಥಕರ್ತರು ಪರಮಪೂಜ್ಯ ಬ್ರಹ್ಮೀಭೂತ **ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀಮಹಾಸ್ವಾಮಿಗಳ ಮುಖ್ಯಶಿಷ್ಯರಾಗಿದ್ದು** ಅವರಿಂದಲೇ ಅಧ್ಯಾತ್ಮವಿದ್ಯಾ ದೀಕ್ಷೆಯನ್ನು ಪಡೆದು ವ್ಯಾಸಂಗಮಾಡಿ ಪ್ರವಚನ-ಲೇಖನಾದಿಗಳ ಮೂಲಕವೂ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯ ಮೂಲಕವೂ ವಾಚಕರಿಗೆ ಚಿರಪರಿಚಿತ ರಾಗಿರುತ್ತಾರೆ. ಅವರು ಶಾಂಕರವೇದಾಂತವನ್ನು ವಿಶೇಷವಾಗಿ ಅಧ್ಯಯನ ಮಾಡಿದ್ದು ಕರ್ಮ-ಜ್ಞಾನಕಾಂಡಗಳ ಸಮನ್ವಯವನ್ನೂ ಆಚಾರವಿಚಾರಗಳನ್ನೂ ಅಧ್ಯಾತ್ಮ ವಿದ್ಯೆಯ ಸಾಧನ - ಸಿದ್ಧಾಂತಗಳ ರಹಸ್ಯವನ್ನೂ ಬಲ್ಲವರಾಗಿದ್ದು ಸಾಂಪ್ರದಾಯಿಕ ವೈದಿಕಾಚಾರಸಂಪನ್ನರಾದ ಸಭ್ಯಗೃಹಸ್ಥರಾಗಿದ್ದಾರೆ. ಇಂಥ ಮಹನೀಯರು ಅಧ್ಯಾತ್ಮಪ್ರಕಾಶಕಾರ್ಯಾಲಯದ ಜೀವನಾಡಿಯಾಗಿದ್ದು ಗುರುಸೇವೆಯನ್ನು ಅತ್ಯಂತ ಶ್ರದ್ಧೆಯಿಂದ ನೆರವೇರಿಸುತ್ತಿದ್ದು ಸಂಸ್ಥೆಯ ಪುರೋಭಿವೃದ್ಧಿಗೂ ಕಾರಣರಾಗಿದ್ದಾರೆ. ನನ್ನ ಪ್ರಾರ್ಥನೆಯನ್ನು ಮನ್ನಿಸಿ ಈ ಗ್ರಂಥರಚನೆಯನ್ನು ಮಾಡಿಕೊಟ್ಟಿದ್ದಕ್ಕಾಗಿ ನಾನು ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಈ ಮೂಲಕ ಅವರಿಗೆ ಅರ್ಪಿಸುತ್ತೇನೆ.

ನನ್ನ ಪೂಜ್ಯ ಮಾತೃಶ್ರೀಯವರಾದ ಶ್ರೀಮತಿ ಭಾಗೀರಥಮ್ಮನವರು ಈ ಗ್ರಂಥಪ್ರಕಟನೆಗೆ ತಕ್ಕ ಧನಸಹಾಯವನ್ನು ಅವರ ಪೂಜ್ಯ ಪತಿವರ್ಯರೂ ನಮ್ಮ ತೀರ್ಥರೂಪುರವರೂ ಆದ ದಿವಂಗತ ಅರಕಲಗೂಡು ಶ್ರೀಕಂಠಯ್ಯನವರ ನೆನಪಿಗಾಗಿ

ಸಮರ್ಪಿಸಿರುತ್ತಾರೆ. ಈ ಸತ್ಕಾರ್ಯಕ್ಕೆ ನನ್ನ ಸಹೋದರರುಗಳೂ ಸಹಕರಿಸಿದ್ದಾರೆ. ಇವರೆಲ್ಲರಿಗೂ ಭಗವತೀ ಶಾರದಾಂಬೆಯೂ ಜಗದ್ಗುರು ಶ್ರೀಶಂಕರಾಚಾರ್ಯರೂ ಸಕಲವಿಧವಾದ ಶ್ರೇಯಸ್ಸನ್ನೂ ಉಂಟುಮಾಡಲೆಂದು ಪ್ರಾರ್ಥಿಸುವೆನು.

ಅಧ್ಯಾತ್ಮಪ್ರಕಾಶಕಾರ್ಯಾಲಯದವರು ಈ ಗ್ರಂಥಪ್ರಕಟನೆಯ ಕಾರ್ಯವನ್ನು ನಿರ್ವಹಿಸಿ ನಮ್ಮ ಸೇವೆಯನ್ನು ಸ್ವೀಕರಿಸಿ ನಮಗೆಲ್ಲರಿಗೂ ಗುರುಕೃಪೆಗೆ ಪಾತ್ರರಾಗುವ ಅವಕಾಶವನ್ನು ಒದಗಿಸಿಕೊಟ್ಟದ್ದಕ್ಕಾಗಿ ಕೃತಜ್ಞತೆಗಳನ್ನು ಅರ್ಪಿಸುವೆನು.

ಇತಿ ತಮ್ಮ ವಿಧೇಯ

ಹೊಳೆನರಸೀಪುರ — ಅರಕಲಗೂಡು ತಾಂಡವೇಶ್ವರ

ತಾ. 10-4-85 — ಅಡ್ವೋಕೇಟ್

## ಎರಡನೆಯ ಮುದ್ರಣಕ್ಕೆ ಮುನ್ನುಡಿ

ಕಾರ್ಯಾಲಯದ ಪಂಡಿತರಾದ ವೇ|| ಬ್ರ|| ಶ್ರೀ ಲಕ್ಷ್ಮೀನರಸಿಂಹಮೂರ್ತಿಗಳವರು ಬರೆದ **ಸರಸ್ವತೀರಹಸ್ಯೋಪನಿಷಚ್ಚಂದ್ರಿಕೆ** ಗ್ರಂಥವನ್ನು, ಕಾರ್ಯಾಲಯದ ಈಗಿನ ಛೇರ್‌ಮನ್‌ರಾದ ಮ||ರಾ|| ಅರಕಲಗೂಡು ತಾಂಡವೇಶ್ವರರವರು ತಮ್ಮ ತಂದೆಯವರಾದ ಅರಕಲಗೂಡು ಶ್ರೀಕಂಠಯ್ಯನವರ ಸ್ಮರಣಾರ್ಥವಾಗಿ ಧನಸಹಾಯ ಮಾಡಿ 1985ರಲ್ಲಿ **ಮೊದಲನೆಯ ಬಾರಿಗೆ**, ಅಧ್ಯಾತ್ಮ ಪ್ರಕಾಶ ಕಾರ್ಯಾಲಯದ ಮೂಲಕ ಪ್ರಕಟಿಸಿದ್ದರು, ಮಾರಾಟದಿಂದ ಬಂದ ಹಣವನ್ನೆಲ್ಲಾ ಕಾರ್ಯಾಲಯದ ಗ್ರಂಥಗಳ ಪ್ರಕಟನೆಗೆ ಉಪಯೋಗಿಸಬಹುದೆಂದು ತಿಳಿಸಿದ್ದರು. ಈಗ ಎಲ್ಲಾ ಪುಸ್ತಕಗಳೂ ಮಾರಾಟವಾದ್ದರಿಂದ ಪುನಃ ತಪ್ಪುಗಳನ್ನೆಲ್ಲಾ ತಿದ್ದಿ ಪರಿಷ್ಕರಿಸಿ **ಎರಡನೆಯ** ಬಾರಿಗೆ ಮುದ್ರಿಸಲಾಗಿದೆ.

ಪಾರಾಯಣಕ್ಕೆ ಅನುಕೂಲವಾಗುವಂತೆ ಮೂಲ ಉಪನಿಷದ್ ಮಂತ್ರಗಳನ್ನು ಕೊನೆಯಲ್ಲಿ ಕೊಟ್ಟಿರುತ್ತದೆ.

ಎಂದಿನಂತೆ ಭಕ್ತ ಮಹಾಶಯರು ಈ ಗ್ರಂಥವನ್ನು ಪ್ರೀತಿಯಿಂದ ಬರಮಾಡಿಕೊಂಡು ಓದಿ ಕೃತಾರ್ಥರಾಗಿ, ಪ್ರಕಟನಾಕಾರ್ಯಕ್ಕೆ ಪ್ರೋತ್ಸಾಹವನ್ನು ನೀಡಬೇಕಾಗಿ ಕೋರುತ್ತೇವೆ.

3-1-2005 — **ಇತಿ ಪ್ರಕಾಶಕರು**

ತಾರಣನಾಮ ಸಂವತ್ಸರ

ಮಾರ್ಗಶಿರ ಬಹುಳ ಅಷ್ಟಮಿ, ಸೋಮವಾರ

॥ ಓಮ್ ॥

॥ ಶ್ರೀ ಗುರುಭ್ಯೋ ನಮಃ ॥

# ಸರಸ್ವತೀರಹಸ್ಯೋಪನಿಷಚ್ಚಂದ್ರಿಕೆ

ಸರ್ವಚೈತನ್ಯರೂಪಾಂ ತಾಂ ಆದ್ಯಾಂ ವಿದ್ಯಾಂ ಚ ಧೀಮಹಿ ।
ವಾಗೀಶ್ವರೀ ವೇದಮಾತಾ ಬುದ್ಧಿಂ ಯಾ ನಃ ಪ್ರಚೋದಯಾತ್ ॥

## ಪೀಠಿಕೆ

ಭರತಖಂಡದ ಅಕ್ಷಯನಿಧಿಗಳಲ್ಲಿ ಉಪನಿಷತ್ತುಗಳಿಗೆ ಅಗ್ರಸ್ಥಾನವಿದೆ. ನಾಲ್ಕು ವೇದಗಳ ಆರಣ್ಯಕಭಾಗಗಳಲ್ಲಿಯೂ ಸಾರಭೂತವಾದ ಈ ಉಪನಿಷತ್ತುಗಳ ವಾಙ್ಮಯವಿದೆ. ಸುಪ್ರಸಿದ್ಧವಾದ ದಶೋಪನಿಷತ್ತುಗಳಿಗೆ ಶ್ರೀಆದಿಶಂಕರಾಚಾರ್ಯರು ತಮ್ಮ ಭಾಷ್ಯವನ್ನು ಬರೆದಿರುತ್ತಾರೆ. ಉಳಿದವುಗಳಲ್ಲಿ ನಾಲ್ಕೈದು ಉಪನಿಷತ್ತುಗಳ ಕೆಲವು ವಾಕ್ಯಗಳನ್ನು ತಮ್ಮ ಗ್ರಂಥಗಳಲ್ಲಿ ಪ್ರಮಾಣವಾಗಿ ಅವರು ಉದಾಹರಿಸಿರುತ್ತಾರೆ. ಆದರೆ ಆಚಾರ್ಯರ ಕಾಲಕ್ಕೆ ಉಪನಿಷತ್ತುಗಳ ಸಂಖ್ಯೆ ಎಷ್ಟಿತ್ತೆಂಬುದನ್ನು ಹೇಳಲಾಗುವಂತಿಲ್ಲ. ಈಗ ಉಪಲಬ್ಧವಿರುವ ಮುದ್ರಿತಗ್ರಂಥವಾದ **"ಅಷ್ಟೋತ್ತರಶತೋಪನಿಷದಃ"** ಎಂಬ ಪುಸ್ತಕದಲ್ಲಿ ಈಶಾವಾಸ್ಯೋಪನಿಷತ್ತಿನಿಂದಾರಂಭಿಸಿ ಮುಕ್ತಿಕೋಪನಿಷತ್ತಿನವರೆಗಿನ ೧೦೮ ಉಪನಿಷತ್ತುಗಳು ಕಂಡುಬಂದಿವೆ. ಇವುಗಳಲ್ಲಿ ಯಾವ ಯಾವವು ಯಾವ ಯಾವ ವೇದಕ್ಕೆ ಸೇರಿದ್ದೆಂಬುದನ್ನು ಮುಕ್ತಿಕೋಪನಿಷತ್ತಿನಲ್ಲಿಯೇ ತಿಳಿಸಿದೆ. ಇವುಗಳ ಪ್ರಾಚೀನತೆ ಹಾಗೂ ಅಪೌರುಷೇಯತ್ವಗಳ ವಿಷಯಕ್ಕೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಸಂಶೋಧಕರುಗಳೂ ಒಮ್ಮತವುಳ್ಳವರಾಗಿಲ್ಲ. ಆದ್ದರಿಂದ ಈ ಉಪನಿಷತ್ತುಗಳ ಇತಿಹಾಸದ ವಿಷಯವನ್ನು ಸಂಶೋಧನಕರಿಗೂ ಧೀಮಂತರಿಗೂ ಬಿಟ್ಟು ನಾನು ಕೇವಲ ಗ್ರಂಥಭಾಗದಲ್ಲಿರುವ ವಿಷಯಗಳ ವಿಚಾರಕ್ಕೆ ಮಾತ್ರ ಕೈಹಾಕಿರುತ್ತೇನೆ. ಈಗ ನಾನು ವಿಚಾರಕ್ಕೆ ಆರಿಸಿಕೊಂಡಿರುವ **"ಸರಸ್ವತೀರಹಸಹ್ಯೋಪನಿಷತ್ತು"** ಎಂಬುದು ಋಗ್ವೇದಕ್ಕೆ ಸೇರಿದ್ದು. ಉಪನಿಷನ್ಮಾಲೆಯಲ್ಲಿ ೧೦೬ನೆಯದೆಂದು ಪರಿಗಣಿಸಲ್ಪಟ್ಟಿದೆ. ಇದರಲ್ಲಿ ಅಡಗಿರುವ ವಿಚಾರಗಳಿಂದ ಆಕರ್ಷಿತನಾದ ನಾನು ಕನ್ನಡದಲ್ಲಿ ಒಂದು ವಿವರಣೆಯನ್ನು ಬರೆಯಬೇಕೆಂದು ಉಪಕ್ರಮಿಸಿರುತ್ತೇನೆ.

ಶ್ರೀಶಂಕರಾಚಾರ್ಯರ ಪ್ರಸ್ಥಾನತ್ರಯಭಾಷ್ಯಗಳನ್ನು ತಕ್ಕಮಟ್ಟಿಗೆ ಓದಿರುವ ನನಗೆ ಈ ಉಪನಿಷತ್ತಿನ ಗ್ರಂಥಶರೀರದಲ್ಲಿ ಹೆಣೆದುಕೊಂಡಂತೆ ಕೆಲವು ಋಗ್ವೇದ ಮಂತ್ರಗಳೂ ಜನಪ್ರಿಯವಾಗಿರುವ ಶೈಲಿಯಲ್ಲಿ ರಚಿತವಾದ ಸ್ತುತಿ ರೂಪವಾದ ಪದ್ಯಗಳೂ ಕಡೆಯಭಾಗದಲ್ಲಿ ವ್ಯಾಖ್ಯಾನಪ್ರಸ್ಥಾನಗಳಲ್ಲಿ ವರ್ಣಿತವಾಗಿರುವ ಆಧುನಿಕವೇದಾಂತ ಪ್ರಕ್ರಿಯೆಗಳೂ ಯೋಗದರ್ಶನದ ಪರಾಮರ್ಶವೂ ಕಂಡು ಬಂದಿರುತ್ತವೆ. ಆದರೂ ಸರಸತ್ವತೀದೇವಿಯ ಮಹಿಮೆಯನ್ನೂ ಆಕೆಯ ಬ್ರಹ್ಮವಿದ್ಯಾರೂಪವಾದ ವಿಭೂತಿಯನ್ನೂ ಎತ್ತಿ ವರ್ಣಿಸಿರುವ ಕೆಲವು ಭಾಗಗಳು ಬಹಳ ಮನಮೋಹಕವೂ ಅನುಸಂಧಾನಯೋಗ್ಯವೂ ಆಗಿದ್ದು ಕನ್ನಡದಲ್ಲಿ ಈ ಉಪನಿಷತ್ತಿಗೆ ವಿವರಣೆಯನ್ನು ಬರೆಯಲು ಪ್ರಚೋದಿಸಿರುತ್ತವೆ ಮತ್ತು ನನ್ನ ಉದ್ದೇಶವು ಈ ವಿವರಣೆಯನ್ನೋದುವವರಿಗೆ ವಾಗ್ದೇವಿಯಲ್ಲಿ ಭಕ್ತಿಶ್ರದ್ಧೆಗಳು ಉಂಟಾಗುವಂತಿರಬೇಕೆಂದೇ ಇರುವದರಿಂದ ನಾನು ಇದರಲ್ಲಿರುವ ಯಾವ ವಾದಗ್ರಸ್ತ ವಿಷಯಗಳನ್ನಾಗಲೀ, ವೇದಾಂತಪ್ರಕ್ರಿಯೆಗಳನ್ನಾಗಲೀ ಪರಾಮರ್ಶಿಸಲು ಇಚ್ಛಿಸುವುದಿಲ್ಲ , ಹಾಗೂ ಖಂಡಿಸುವುದಕ್ಕಾಗಲಿ ಮಂಡಿಸುವದಕ್ಕಾಗಲಿ ಬಯಸುವದಿಲ್ಲ. ಜನಸಾಮಾನ್ಯರಿಗೆ ಉಪಯೋಗುವಾಗುವಂಥ ಶೈಲಿಯಲ್ಲಿಯೇ ಬರವಣಿಗೆಯನ್ನು ಒಯ್ಯಲು ಪ್ರಯತ್ನ ಮಾಡಿರುತ್ತೇನೆ. ಆದರೂ ವಿದ್ವಾಂಸರೂ ಸಜ್ಜನರೂ ಒಮ್ಮೆ ಈ ಗ್ರಂಥವನ್ನು ಪರಾಂಬರಿಸುವಂತೆ ಕೋರುತ್ತೇನೆ.

ಈಗ ಸರಸ್ವತೀತತ್ತ್ವವನ್ನು ಒಮ್ಮೆ ಸ್ಥೂಲವಾಗಿ ಅನುಸಂಧಾನ ಮಾಡೋಣ. ಸಾಮಾನ್ಯವಾಗಿ ಸರಸ್ವತೀ ಎಂದರೆ ತಟ್ಟನೆ ಬ್ರಹ್ಮನ ರಾಣಿ, ವಿದ್ಯಾದಿದೇವತೆ - ಎಂಬ ನೆನಪು ಬರುತ್ತದೆ. ಅನಂತರ ಆಕೆಯ ಮಹಿಮೆಯನ್ನು ಕೊಂಡಾಡುವಾಗ ಪುರಾಣಗಳ ವರ್ಣನೆಯಂತೆ ಅವಳು ಶಕ್ತಿದೇವಿಯ ಅವತಾರಳೂ, ಶಕ್ತಿಮಾತೆಯೂ ಆಗಿರುತ್ತಾಳೆ - ಎಂದೂ ಕಂಡುಬರುತ್ತದೆ. ಶರನ್ನವರಾತ್ರಿಯಲ್ಲಿ ನಾವು ಮಾಡುವ ಸರಸ್ವತೀಪೂಜೆಯು ಪ್ರಸಿದ್ಧವಾಗಿದೆ. ನವರಾತ್ರಿಯ ಪ್ರತಿಯೊಂದು ದಿನದಲ್ಲಿಯೂ ಆಕೆಯು ಮಾಡಿದ ಅವತಾರಗಳು ರಾಕ್ಷಸರ ವಧೆಗೂ ದೇವತೆಗಳ ಪರಿಪಾಲನೆಗೂ ಅವಶ್ಯವಾಗಿದ್ದುದು ಗೊತ್ತಾಗುತ್ತದೆ. ದೇವೀಮಾಹಾತ್ಮ್ಯ (ಸಪ್ತಶತೀ) ಹಾಗೂ ದೇವೀಭಾಗವತಾದಿಗಳಲ್ಲಿ ತಿಳಿಸಿರುವಂತೆ ಒಬ್ಬಳೇ ಶಕ್ತಿಮಾತೆಯು ಸರಸ್ವತೀ, ಲಕ್ಷ್ಮೀ, ದುರ್ಗಾ - ಮುಂತಾದ ಹೆಸರುಗಳಿಂದ ಪೂಜಿಸಲ್ಪಡುತ್ತಾಳೆಂದೂ ಆಕೆಯ ಅನುಗ್ರಹ ಪ್ರಾಪ್ತಿಗಾಗಿ

ಕುಂಕುಮಾದಿದ್ರವ್ಯಗಳಿಂದ ಸಹಸ್ರಾರ್ಚನೆ, ಹೋಮಾದಿಗಳು ನಡೆಯಸಲ್ಪಡುತ್ತವೆ ಎಂಬಿದು ಆಸ್ತಿಕ ಮಹಾಶಯರಿಗೆಲ್ಲ ವಿದಿತವಾಗಿರುತ್ತವೆ. ಪೀಠಾಧಿಪತಿಗಳಾದ ಸಂನ್ಯಾಸಿಗಳು ಕೂಡ ದೇವೀಮೂಲಮಂತ್ರಜಪ, ನವಾವರಣಾರ್ಚನಾದಿ ತಾಂತ್ರಿಕವಿಧಿಗಳಿಂದ ಶ್ರೀಚಕ್ರಾರ್ಚನೆ, ಚಂಡೀಹೋಮ -ಮುಂತಾದ ಶ್ರೇಷ್ಠಕರ್ಮಗಳಿಂದ ದೇವಿಯನ್ನು ತೃಪ್ತಿಗೊಳಿಸುವ ಅನುಷ್ಠಾನಗಳನ್ನು ನಡೆಯಿಸುತ್ತಾರೆ. ಮಹಾಜನರೂ ಬಹು ಮಟ್ಟಿಗೆ ಇಂಥ ಸತ್ಕಾರ್ಯಗಳಲ್ಲಿ ಭಾಗಿಗಳಾಗಿ ಇಷ್ಟ ಪ್ರಾಪ್ತಿ, ಅನಿಷ್ಟ ಪರಿಹಾರಗಳನ್ನು ಮಾಡಿಕೊಳ್ಳುತ್ತಾರೆ. ದೇವಿಯ ಆರಾಧನೆಗೆ ಶ್ರೀಚಕ್ರ, ಯಂತ್ರ - ಬೀಜಾಕ್ಷರಾದಿಗಳು, ತಾಂತ್ರಿಕಮುದ್ರಾನ್ಯಾಸಾದಿಗಳು, ಕಲ್ಪೋಕ್ತವಾದ ಉಪಚಾರಗಳು ಮುಂತಾದ ನಾನಾ ರೀತಿಯ ಸಾಂಪ್ರದಾಯಿಕ ಆಚಾರ - ಪದ್ಧತಿಗಳನ್ನು ಬಲ್ಲವರು ಬಳಸುತ್ತಾರೆ. ಹೀಗೆ ಭಗವತಿಯ ಉಪಾಸಕರುಗಳು ಭಾರತದ ನಾನಾ ಪ್ರದೇಶಗಳಲ್ಲಿ ನೆಲೆಸಿದ್ದು, ಭಕ್ತರಿಗೂ ಭಾವುಕರಿಗೂ ಮಾರ್ಗದರ್ಶಕರಾಗಿರುತ್ತಾರೆ. ರಾಮೇಶ್ವರದಿಂದ ಕಾಶ್ಮೀರದವರೆಗೂ ಅಲ್ಲಲ್ಲಿ ಶಕ್ತಿಪೀಠಗಳೂ ಸ್ಥಾಪಿತವಾಗಿದ್ದು ಈಗಲೂ ಆಯಾ ಸ್ಥಳೀಯ ಸಾಂಪ್ರದಾಯಿಕ ರೀತಿಯಿಂದ ದೇವಿಯ ಪೂಜೆ, ಉತ್ಸವಾದಿಗಳು ನಡೆಯುತ್ತಿವೆ. ಇದೆಲ್ಲವೂ ದೇವಿಯ ವಿಭೂತಿಯ ಒಂದು ಅಂಶವಾಯಿತು - ಎನ್ನಬಹುದು.

ಆದರೆ ಸರಸ್ವತೀದೇವಿಯ ಮತ್ತೊಂದು ಮಹಾವಿಭೂತಿಯು ಜಗದ್ವ್ಯಾಪಕವಾಗಿ ಶಾಶ್ವತವಾಗಿ ಇದ್ದುಕೊಂಡಿದೆ. ಇದನ್ನು ಅರಿತುಕೊಳ್ಳಲು ಋಷಿಗಳು ಹಾಗೂ ಮುನಿಗಳು ಮಾತ್ರ ಸಮರ್ಥರು - ಎಂದು ಹೇಳಬಹದು. ಸ್ವಲ್ಪ ಮಟ್ಟಿಗಾದರೂ ತಿಳಿದುಕೊಳ್ಳಬೇಕೆಂದರೆ ಈಗಿನ ನಾಗರಿಕಪ್ರಪಂಚದಲ್ಲಿರುವ ವಿದ್ಯಾವಂತರೆಲ್ಲರೂ ಅಧಿಕಾರಿಗಳು ಎನ್ನಬಹುದು. ಆದರೆ ಇಂಥ ಅಧಿಕಾರಿಗಳು ಶೇಕಡ ಹತ್ತಕ್ಕಿಂತ ಹೆಚ್ಚು ಸಿಗಲಾರರು. ಉಳಿದ ತೊಂಭತ್ತು ಜನರಿಗೆ ದೇವಿಯೆಂದರೆ ಮೇಲೆ ತಿಳಿಸಿರುವಂತೆ ವಿಭೂತಿಗುಣವಿಶಿಷ್ಟಳಾದ ಶಕ್ತಿಮಾತೆಯಷ್ಟೇ ಆಗಿರುತ್ತಾಳೆ. ಅವರ ತಿಳಿವಳಿಕೆಯೆಲ್ಲವೂ ದೇವಿಯ ಪೂಜಾದಿಗಳಷ್ಟರಲ್ಲಿಯೇ ಸೀಮಿತವಾಗಿರುತ್ತದೆ. ಜೀವಮಾನವೆಲ್ಲ ಉಪಾಸನೆ ಮಾಡಿದರೂ ಅಂಥವರ ಭಕ್ತಿಶ್ರದ್ಧೆಗಳು ಇನ್ನೂ ಹೆಚ್ಚಿನ ಮಟ್ಟಕ್ಕೇರಲಾರವು. ಆದರೂ ಅಂಥವರೇನೂ ಕಡಿಮೆಯೆಂದು ತಿಳಿಯಬಾರದು. ಜನಸಾಮಾನ್ಯರಿಗಿಂತ ಎಷ್ಟೋ ಪಾಲು ಶ್ರೇಷ್ಠರೇ ಆಗಿರುತ್ತಾರೆ. ಆದರೆ ಋಷಿಮುನಿಗಳಿಗೆ ಹೋಲಿಸಿದರೆ ಮಾತ್ರ ಅವರು ಸೂರ್ಯನ ಮುಂದಿರುವ ದೀಪದಂತಾಗುವರು. ಆದ್ದರಿಂದ ಈಗ ನಾವು

ಋಷಿಮುನಿಗಳು ಕಂಡುಕೊಂಡ ವಾಗ್ದೇವಿಯಾದ ಸರಸ್ವತಿಯ ಸ್ವರೂಪಜ್ಞಾನದ ಕಡೆಗೆ ನಮ್ಮ ಚಿತ್ತವನ್ನು ಹೊರಳಿಸೋಣ. ಏಕೆಂದರೆ ಈ **ಉಪನಿಷತ್ತಿನಲ್ಲಿ ಸರಸ್ವತಿಯನ್ನು ವಾಗ್ದೇವಿಯೆಂದೇ ದರ್ಶನ ಮಾಡಿಸಿರುತ್ತದೆ.** ಸರಸ್ವತಿಯ ಮತ್ತೊಂದು ಹೆಸರೇ ವಾಗ್ದೇವಿ - ಎಂಬುದು, ಎಂದಿಷ್ಟೇ ತಿಳಿದರೆ ಸಾಲದು. ವಾಗ್ದೇವಿಯೆಂದೇ ಆಕೆಯನ್ನು ಆಳವಾಗಿ ಚಿಂತಿಸಿದಂತೆಲ್ಲ ಅದೇ ಆಕೆಯ ಮೂಲ ರೂಪವೆಂದೂ ಸರಸ್ವತೀ, ದುರ್ಗಾ, ಲಕ್ಷ್ಮೀ- ಇತ್ಯಾದಿಗಳು ಆಕೆಯ ವಿಭೂತಿ ರೂಪಗಳೆಂದೂ ಗೊತ್ತಾಗುತ್ತದೆ. ವಾಗೀಶ್ವರಿಯಾದ ಈ ದೇವಿಯು ವಾಣೀ, ಸರಸ್ವತೀ, ಬ್ರಾಹ್ಮೀ, ಭಾರತೀ, ಗೀಃ, ಭಾಷಾ - ಮುಂತಾದ ಹೆಸರುಗಳಿಂದಲೂ ಪ್ರಸಿದ್ಧಳಾಗಿದ್ದಾಳೆ. ಇಂಥ ಮಹಾಮಾತೆಯನ್ನು ಈ ಉಪನಿಷತ್ತಿನಲ್ಲಿಯೇ ವಿಸ್ತಾರವಾಗಿ ಕೊಂಡಾಡಿರುವುದರಿಂದ ಈಗ ಉಪನಿಷತ್ತಿನ ಆಧಾರದಿಂದಲೇ ವಿಚಾರಧಾರೆಯನ್ನು ಮುಂದುವರಿಸೋಣ.

ಸಂಪ್ರಯಾದಂತೆ ಈ ಉಪನಿಷತ್ತಿಗೂ ಶಾಂತಿಪಾಠವು ಇರುತ್ತದೆ. ಇದು ಋಗ್ವೇದದ ಉಪನಿಷತ್ತುಗಳಿಗೆಲ್ಲ ಸರ್ವಸಾಧಾರಣವಾಗಿದ್ದುಕೊಂಡಿರುವುದೇ ಆಗಿರುತ್ತದೆ. ಈಗ ಶಾಂತಿಪಾಠವನ್ನು ಅನುಸಂಧಾನ ಮಾಡೋಣ.

### (ಶಾಂತಿಪಾಠ)

**ಓಂ॥ ವಾಙ್ಮೇ ಮನಸಿ ಪ್ರತಿಷ್ಠಿತಾ ಮನೋ ಮೇ ವಾಚಿ ಪ್ರತಿಷ್ಠಿತ - ಮಾವಿರಾವೀರ್ಮ ಏಧಿ ವೇದಸ್ಯ ಮ ಆಣೀಸ್ಥಃ ಶ್ರುತಂ ಮೇ ಮಾ ಪ್ರಹಾಸೀರನೇನಾಧೀತೇನಾಹೋರಾತ್ರಾನ್ ಸಂದಧಾಮಿ ಋತಂ ವದಿಷ್ಯಾಮಿ ಸತ್ಯಂ ವದಿಷ್ಯಾಮಿ ತನ್ಮಾಮವತು ತದ್ವಕ್ತಾರಮವತು ಅವತು ಮಾಮವತು ವಕ್ತಾರಮವತು ವಕ್ತಾರಮ್ ॥**

**ಓಂ. ಶಾಂತಿಃ ಶಾಂತಿಃ ಶಾಂತಿಃ**

'ನನ್ನ ವಾಕ್ಕು ಮನಸ್ಸಿನಲ್ಲಿ ನಿಂತಿರಲಿ, ನನ್ನ ಮನಸ್ಸು ವಾಕ್ಕಿನಲ್ಲಿ ನಿಂತಿರಲಿ, ಪ್ರಕಟಸ್ವರೂಪನೆ, ನನಗೆ ಪ್ರಕಟನಾಗು. ಎಲೈ ವಾಙ್ಮನಸ್ಸುಗಳೇ, ವೇದವನ್ನು ನನ್ನಲ್ಲಿಗೆ ತರುವವರಾಗಿರಿ । ನಾನು ಶ್ರವಣಮಾಡಿದ್ದು ಬಿಟ್ಟು ಹೋಗದಿರಲಿ ! ಈ ಅಧ್ಯಯನಮಾಡಿದ್ದರಿಂದ ನಾನು ಹಗಲನ್ನೂ ಇರುಳನ್ನೂ ಕೂಡಿಸುವಂತಾಗಲಿ !

ಋತವನ್ನು ಹೇಳುವಂತಾಗಲಿ ! ಸತ್ಯವನ್ನೇ ನುಡಿಯುವಂತಾಗಲಿ ! ಅದು ನನ್ನನ್ನು ಕಾಪಾಡಲಿ ! ಅದು ಆಚಾರ್ಯನನ್ನು ಕಾಪಾಡಲಿ ! ನನ್ನನ್ನು ಕಾಪಾಡಲಿ! ಆಚಾರ್ಯನನ್ನು ಕಾಪಾಡಲಿ !

ಶಾಂತಿಮಂತ್ರದ ಸರಳವಾದ ಅರ್ಥವನ್ನು ಮೇಲೆ ಕೊಡಲಾಗಿದೆ. ಬ್ರಹ್ಮವಿದ್ಯೆಯನ್ನು ತಿಳಿಸುವ ವೇದವನ್ನು ಅಧ್ಯಯನ ಮಾಡುವಾಗ ವಾಕ್ಕೂ ಮನಸ್ಸೂ ಒಂದುಗೂಡಿರಬೇಕು. ಮನಸ್ಸೊಂದುಕಡೆ, ಮಾತೊಂದುಕಡೆ - ಹೀಗೆ ಆಗದಿರಬೇಕು. ಯಾವ ಇಂದ್ರಿಯವೂ ನಮ್ಮನ್ನು ಹೊರಮುಖವಾಗಿ ಮಾಡಿ ವಾಗಿಂದ್ರಿಯಕ್ಕೂ ಮನಸ್ಸಿಗೂ ಇರಬೇಕಾದ ಸಂಬಧವನ್ನು ತಪ್ಪಿಸದಂತೆ ನಾವು ಎಚ್ಚರಿಕೆಯಿಂದಿರಬೇಕು. ಈ ವಿಷಯದಲ್ಲಿ ಪರಮೇಶ್ವರನು ನಮಗೆ ಅನುಗ್ರಹಮಾಡಲಿ ! ಎಂಬುದೇ ಇಲ್ಲಿ ಮಾಡಿರುವ ಪ್ರಾರ್ಥನೆ. ಪರಮಾತ್ಮತತ್ತ್ವವು ತನ್ನ ರೂಪದಿಂದ ಸ್ವಯಂಪ್ರಕಾಶವಾಗಿರುವುದರಿಂದ ಅದಕ್ಕೆ ಪ್ರಕಟ, ಅಪ್ರಕಟ - ಎಂಬ ರೂಪಭೇದಗಳಿರುವದಿಲ್ಲ. ಆದರೂ ನಾವು ವಿಷಯ ತೃಷ್ಣೆಯ ಪ್ರಮಾದದಿಂದ ಅಜ್ಞಾನವಶರಾಗಿರುತ್ತೇವೆ. ಈ ಅಜ್ಞಾನವು ತೊಲಗಿ ಪರಮಾತ್ಮನ ಸ್ವರೂಪವು ನಮಗೆ ತೋರಿಕೊಳ್ಳಲಿ ! ಎಂಬುದು ಇಲ್ಲಿರುವ ಇನ್ನೊಂದು ಪ್ರಾರ್ಥನೆ. ಮನೋವಾಕ್ಕುಗಳ ಹೊಂದುಗೆಯಿಂದ ಮನಸ್ಸಿನಲ್ಲಿ ನಮಗೆ ತೋರುವ ಋತವೆಂಬ ಪರಮಾರ್ಥರೂಪವೇ ವಾಕ್ಕಿನ ಮೂಲಕ ಸತ್ಯವನ್ನು ಹೊರಗೆಡವಲಿ, ಇದ್ದದ್ದು ಇದ್ದಂತೆ ಮಾತಿನಿಂದ ನಾವು ನುಡಿಯುವಂತಾಗಲಿ ! ಎಂಬುದು ಇಲ್ಲಿರುವ ಮೂರನೆಯ ಪ್ರಾರ್ಥನೆ. ಹೀಗೆ ಮನೋವಾಕ್ಕುಗಳ ಹೊಂದುಗೆಯಿಂದ ಆಚಾರ್ಯರು ಉಪದೇಶಮಾಡಿ ಶಿಷ್ಯನು ಗ್ರಹಿಸುವಂತಾದರೆ ಇಬ್ಬರೂ ಪರಮಾತ್ಮನ ಕೃಪೆಗೆ ಪಾತ್ರರಾದಂತೆಯೇ ಸರಿ. ಹಾಗೆ ನಮ್ಮಿಬ್ಬರನ್ನೂ ಅನುಗ್ರಹಿಸಿ ಭಗವಂತನು ರಕ್ಷಿಸಲಿ ! ಎಂದು ಕಡೆಯಲ್ಲಿ ಪ್ರಾರ್ಥಿಸಿರುತ್ತದೆ. ಈಗ ಉಪನಿಷತ್ತನ್ನು ಆರಂಭಿಸೋಣ.

(ಉಪನಿಷತ್ತು)

**ಓಂ ॥ ಋಷಯೋ ಹ ವೈ ಭಗವನ್ತಮಾಶ್ವಲಾಯನಂ ಸಂಪೂಜ್ಯ ಪಪ್ರಚ್ಛುಃ ಕೇನೋಪಾಯೇನ ತತ್ ಜ್ಞಾನಂ ತತ್ಪದಾರ್ಥಾವಭಾಸಕಂ ಯದುಪಾಸನಯಾ ತತ್ತ್ವಂ ಜಾನಾಸಿ ಭಗವಾನ್ ವದ ॥**

ಋಷಿಗಳೆಲ್ಲರೂ ಒಂದುಗೂಡಿ ಒಮ್ಮೆ ಪೂಜ್ಯರಾದ ಆಶ್ವಲಾಯನರನ್ನು ಬಳಿಸಾರಿ ಪೂಜಿಸಿ, ಹೀಗೆಂದು ಕೇಳಿದರು. ''ಭಗವಂತನೇ, ನೀನು ಯಾವ ಉಪಾಯದಿಂದ ತತ್ತ್ವವನ್ನು ಬಲ್ಲವನಾಗಿರುವೆಯೋ - ಎಂದರೆ 'ತತ್' ಎಂಬ ಪದಾರ್ಥವನ್ನು ಬೆಳಗುವ ಆ ಜ್ಞಾನವು ನಿನಗೆ ಹೊಳೆದಿದೆಯೋ - ಅದನ್ನು ನನಗೆ ಹೇಳು''- ಎಂಬಿದು ಈ ಮಂತ್ರದ ಸರಳವಾದ ಅರ್ಥವು. ಉಪನಿಷತ್ತುಗಳಲ್ಲೆಲ್ಲ **'ಯ ಏವಂ ವೇದ'** ಎಂಬ ಪಲ್ಲವಿಯು ಬರುತ್ತಲೇ ಇರುತ್ತದೆ. ವಿದ್ ಧಾತುವಿಗೆ ಅರಿಯದವು - ಎಂದೇ ಮುಖ್ಯಾರ್ಥವಿದೆ. ಆದರೆ ಕೆಲವು ಕಡೆಗಳಲ್ಲಿ ಉಪಾಸನೆಗೂ ಈ ಕ್ರಿಯಾಪದಪ್ರಯೋಗವನ್ನೇ ಮಾಡಿರುತ್ತಾರೆ. ಉಪಾಸನೆಯು ಭಾವನಾರೂಪವಾಗಿದ್ದು ಕರ್ತೃತಂತ್ರವಾಗಿರುತ್ತದೆ. ಹೇಗೆಂದರೆ 'ಸಾಲಿಗ್ರಾಮವನ್ನು ವಿಷ್ಣುವೆಂದು ತಿಳಿಯಬೇಕು' ಎಂಬಿದು ಇದಕ್ಕೆ ಉದಾಹರಣೆಯು. ಇಲ್ಲಿ ಸಾಲಿಗ್ರಾಮವೆಂಬುದು ಒಂದು ಕರಿಯ ಕಲ್ಲಾಗಿದ್ದರೂ ನಾವು ಮನಸ್ಸಿನಲ್ಲಿ ಅದನ್ನು ವಿಷ್ಣುವೆಂದು ಭಾವಿಸಬೇಕು - ಎಂದರ್ಥ. ಹೀಗೆ ಭಾವನೆ ಮಾಡುವವನಿಗೆ ಅಧೀನವಾಗಿರುವ ಮನೋವೃತ್ತಿಯು ಕರ್ತೃತಂತ್ರವೆನಿಸುವದು. ಉಪಾಸನೆಗಳೆಲ್ಲ ಈ ತರಗತಿಗೇ ಸೇರಿದ್ದಾಗಿವೆ. ಜ್ಞಾನವೆಂಬುದು ಹಾಗಲ್ಲ. ಅದು ವಸ್ತುತಂತ್ರವಾಗಿರುತ್ತದೆ. 'ಬೆಟ್ಟವು ನಿಂತಿದೆ' ಎಂಬಿದು ಇದಕ್ಕೆ ಉದಾಹರಣೆಯು. ಇಲ್ಲಿ ಯಾವದೊಂದು ಬೇರೆಯ ವಸ್ತುವನ್ನೂ ನಾವು ಬೆಟ್ಟವೆಂದು ಭಾವಿಸಬೇಕಾಗಿಲ್ಲ. ಯಾರು ನೋಡಿದರೂ ಎದುರಿಗೆ ಕಾಣಿಸುವ ಬೆಟ್ಟವು ಯಾವಾಗಲೂ ತಾನಿದ್ದಂತೆಯೇ ಇರುವದರಿಂದ ಅದನ್ನು ಇದೆ - ಅಥವಾ ನಿಂತಿದೆ ಎಂದು ಶಬ್ದಪ್ರಯೋಗದಿಂದ ತಿಳಿಸಿದ್ದಾಗಿದೆ. ಅದನ್ನು ಒಬ್ಬೊಬ್ಬರು ಒಂದೊಂದು ವಸ್ತುವೆಂದು ಕಲ್ಪಿಸುವ ಹಾಗಿಲ್ಲ. ಆದ್ದರಿಂದ ಆ ವಸ್ತುವು ಹೇಗಿದೆಯೋ ಅದನ್ನನುಸರಿಸಿಯೇ ಎಲ್ಲರೂ ಅರಿತುಕೊಳ್ಳಬೇಕು. ಇದನ್ನು ಜ್ಞಾನವೆನ್ನುವರು. ಜ್ಞಾನದ ಕೆಲಸವೇನೆಂದರೆ ಇದ್ದ ವಸ್ತುವನ್ನು ಜ್ಞಾಪಕಮಾಡಿ ಕೊಡುವದೇ ಹೊರತು ಇಲ್ಲದ್ದನ್ನು ಸೃಷ್ಟಿಸುವದಲ್ಲ. ಅಥವಾ ಇರತಕ್ಕ ವಸ್ತುವನ್ನೇ ನಾವು ಕಾಣಲು ಏನಾದರೂ ಅಡ್ಡಿಗಳಿದ್ದರೆ ಅದನ್ನು ಹೋಗಲಾಡಿಸುವುದು ಜ್ಞಾನದ ಕೆಲಸವೆನ್ನಬಹುದು . ಹೀಗೆ ಇರತಕ್ಕ ವಸ್ತುವನ್ನು ಪ್ರಕಾಶಗೊಳಿಸುವ ಜ್ಞಾನವು 'ವೇದ' ಎಂಬ ಕ್ರಿಯಾಪದದ ಮುಖ್ಯಾರ್ಥವಾಗಿದೆ. ಋಷಿಗಳು ತತ್ತ್ವ ಚಿಂತಕರೂ ಶೋಧಕರೂ ಆಗಿದ್ದವರು ; ಅಷ್ಟೇ ಹೊರತು ಯಾವದೊಂದು ಸತ್ಯದ

ಸೃಷ್ಟಿಕರ್ತರಲ್ಲ. ಹೊಸದಾಗಿ ಸೃಷ್ಟಿಯಾದದ್ದು ಪರಮಾರ್ಥಸತ್ಯವಾಗಿರುವದೂ ಸಾಧ್ಯವಿಲ್ಲ. ಆದ್ದರಿಂದ ಅವರುಗಳು ಇಲ್ಲಿ ಆಶ್ವಲಾಯನರನ್ನು ಕೇಳುವುದೇನೆಂದರೆ - ''ಪೂಜ್ಯರೆ, ನೀವು ಕಂಡುಕೊಂಡಿರುವ 'ತತ್ ' ಎಂಬ ಪದಾರ್ಥದ ಅರಿವು ಯಾವುದು ? ಅದು ನಿಮಗೆ ಹೇಗೆ ಲಭ್ಯವಾಯಿತು ? ನನಗೂ ತಿಳಿಸಿರಿ'' - ಎಂದು ಪ್ರಶ್ನಿಸಿದ್ದಾರೆ. ವೇದಗಳ ಪರಮತಾತ್ಪರ್ಯವೆಲ್ಲವೂ ಈ 'ತತ್' ಪದಾರ್ಥದಲ್ಲಿಯೇ ಒಂದಾಗಿರುವುದು. ಅದನ್ನು ಸಮನ್ವಯದಿಂದ ತಿಳಿಸಿಕೊಡುವುದೇ ವೇದದ ಕೆಲಸವು. ಆದ್ದರಿಂದಲೇ 'ಯೇನ ವೇತ್ತಿ ಸ ವೇದಃ ಸ್ಯಾತ್' (ಯಾವದರಿಂದ ವಸ್ತುವನ್ನು ಅರಿತುಕೊಳ್ಳುವರೋ ಅದನ್ನೇ ವೇದವೆನ್ನುವರು) ಎಂದು ಬಲ್ಲವರು ತಿಳಿಸುತ್ತಾರೆ. ಹೀಗೆ ಉಪನಿಷತ್ತುಗಳಲ್ಲಿ ವಸ್ತುತಂತ್ರವಾದ ಜ್ಞಾನಕ್ಕೇ ಮುಖ್ಯ ತಾತ್ಪರ್ಯವಿದೆ. ಉಪಾಸನೆಯನ್ನೂ ಮಂದಮಧ್ಯಮಾಧಿಕಾರಿಗಳಿಗಾಗಿ ಕೃಪೆಯಿಂದ ವೇದವು ಹೇಳುತ್ತದೆ. ಪ್ರಕೃತದಲ್ಲಿ ಋಷಿಗಳು ಜ್ಞಾನಪಿಪಾಸುಗಳಾಗಿ 'ತತ್' ಪದಾರ್ಥದ ಜ್ಞಾನವನ್ನು ಉಪದೇಶಿಸಬೇಕೆಂದು ಕೇಳಿರುತ್ತಾರೆ. ಉಪನಿಷದಧ್ಯಯನ ಶೀಲರು ಮೊಟ್ಟ ಮೊದಲು ಈ ಜ್ಞಾನೋಪಾಸನೆಗಳ ವೈಲಕ್ಷಣ್ಯವನ್ನೇ ತಿಳಿದಿರಬೇಕು. ಇಲ್ಲವಾದರೆ ವೇದಾಂತಸಮನ್ವಯವು ಮುಖ್ಯಾರ್ಥದಲ್ಲಿ ಲಭ್ಯವಾಗಲಾರದು.

ಈಗ 'ತತ್ಪದಾರ್ಥಾವಭಾಸಕಮ್' ಎಂಬಿದನ್ನು ವಿಚಾರಮಾಡೋಣ. ತತ್ ಎಂಬಿದು ಸರ್ವನಾಮವು. ಸರ್ವವೂ ಬ್ರಹ್ಮವೇ. ಅದರ ಹೆಸರೇ 'ತತ್' ಎಂದಿರುತ್ತದೆ. ಆದ್ದರಿಂದ ಯಾವ ತಿಳಿವಳಿಕೆಯಿಂದ ಆ 'ತತ್' ಪದಾರ್ಥವು ಸಾಕ್ಷಾದಪರೋಕ್ಷವಾಗಿ ಅನುಭವಾರೂಢವಾಗುವದೋ ಅಂಥ ಜ್ಞಾನವನ್ನು ಬಯಸಿ ಋಷಿಗಳು ಆಶ್ವಲಾಯನರನ್ನು ಬಳಿಸಾರಿರುತ್ತಾರೆ. ನಿಜವಾಗಿ ತತ್ ಎಂಬುದೂ ಬ್ರಹ್ಮದ ಹೆಸರಲ್ಲ. ಆದರೂ ಅದನ್ನು ಬಳಸಿಕೊಂಡು ಪ್ರತ್ಯಗಾತ್ಮ ಸ್ವರೂಪದ ಕಡೆಗೆ ಜಿಜ್ಞಾಸುವನ್ನು ಒಯ್ಯಲು ಉಪನಿಷತ್ತುಗಳಲ್ಲಿ ಪ್ರಯತ್ನ ಮಾಡಿರುತ್ತದೆ. ಇನ್ನು 'ಅವಭಾಸನೆ'ಯೆಂದರೆ ನಿತ್ಯಪ್ರಕಾಶರೂಪವಾಗಿರುವ ಬ್ರಹ್ಮಕ್ಕೆ ಔಪಾಧಿಕವಾಗಿ ಅಡ್ಡಿಯಾಗಿರುವ ದ್ವೈತ ಬುದ್ಧಿಯನ್ನು ಕಳೆಯುವದು ಮಾತ್ರವೇ. 'ತಸ್ಯಭಾಸಾ ಸರ್ವಮಿದಂ ವಿಭಾತಿ' ಎಂಬಂತೆ ಬ್ರಹ್ಮದ ಬೆಳಕಿನಿಂದಲೇ ಎಲ್ಲವೂ ಬೆಳಗುತ್ತಿರುವದು. ಅದನ್ನು ಮತ್ತೊಂದು ಬೆಳಕು ಬೆಳಗುವದೆಂಬುದೇ ಇರುವದಿಲ್ಲ. ಆದರೂ ನಮ್ಮ ಕಣ್ಣಿಗೆ ಒಂದು ಚಿಕ್ಕ ಬಟ್ಟೆಯನ್ನು ಮರೆಮಾಡಿದರೂ ಎದುರಿಗೆ ಕಾಣುತ್ತಿರುವ ದೊಡ್ಡ ಬೆಟ್ಟವು ಕೂಡ ಕಾಣದೆ ಹೋಗುವಂತೆ ಅಜ್ಞಾನ

ಸ್ಥಿತಿಯಲ್ಲಿ ಬ್ರಹ್ಮವು ಕಾಣದೆ ಹೋಗಿರುತ್ತದೆ. ಅಂಥ ಅಜ್ಞಾನವನ್ನು ಯಾವ ಉಪಾಯದಿಂದ ಕಳೆದುಕೊಳ್ಳಬೇಕು ? ನೀವು ಹೇಗೆ ಕಳೆದುಕೊಂಡಿರಿ ? ನಿಜತತ್ತ್ವವನ್ನು ಕಂಡುಕೊಂಡಿರಿ ? ಅದನ್ನು ನಮಗೂ ಹೇಳಿರಿ ಎಂದು ಋಷಿಗಳು ಕೇಳಿರುತ್ತಾರೆ.

(ಉಪನಿಷತ್ತು)

ಆಶ್ವಲಾಯನ ಉವಾಚ -

ಸರಸ್ವತೀದಶಶ್ಲೋಕ್ಯಾ ಸಋಚಾ ಬೀಜಮಿಶ್ರಯಾ ।
ಸ್ತುತ್ವಾ ಜಪ್ತ್ವಾ ಪರಾಂ ಸಿದ್ಧಿಮಲಭಂ ಮುನಿಪುಂಗವಾಃ ॥

ಆಶ್ವಲಾಯನರಿಂತೆದರು : ''ಬೀಜಾಕ್ಷರವಿಶಿಷ್ಟವಾದ ಹಾಗೂ ಋಕ್ ಸಹಿತವಾದ ಸರಸ್ವತೀದಶಶ್ಲೋಕೀ - ಎಂಬ ವಿದ್ಯೆಯಿಂದ ನಾನು ಸಿದ್ಧಿಯನ್ನು ಪಡೆದಿರುತ್ತೇನೆ. ಆ ಪವಿತ್ರವಾದ ವಿದ್ಯೆಯನ್ನು ಜಪಿಸಿ ಸ್ತೋತ್ರ ಮಾಡಿದ್ದಂತೆಲ್ಲ ಜ್ಞಾನಪ್ರಾಪ್ತಿಯಾಗುವದು. ಸಿದ್ಧಿಗಳಲ್ಲೆಲ್ಲ ಜ್ಞಾನಸಿದ್ಧಿಯೇ ದೊಡ್ಡದು'' ಹೀಗೆಂದು ಋಷಿಪುಂಗವರು ಅಪ್ಪಣೆಕೊಡಿಸಿದ್ದಾರೆ. ಈಗ ಸರಸ್ವತೀ ಎಂದರೆ ಯಾರೆಂಬುದನ್ನು ನಾವು ವಿಚಾರ ಮಾಡಬಹುದು. ವಾಗ್ರೂಪಳಾದ ಅದರಲ್ಲಿಯೂ ವೇದರೂಪಳಾದ ಶಬ್ದಬ್ರಹ್ಮಳಾದ ದೇವಿಯೇ ಸರಸ್ವತಿಯು. ಶಬ್ದವಿಲ್ಲದೆ ಜಗದ್ವ್ಯಾಪಾರವಿಲ್ಲ ; ಶಬ್ದದ ಮೂಲಕವೇ ನಾವು ಅರ್ಥವನ್ನು ಅರಿತುಕೊಳ್ಳುವೆವು. ಅರ್ಥವೆಂಬುದೇ ವಸ್ತುವು. ಅದೇ ಸತ್ - ತತ್ ಎಂದೆಲ್ಲ ಶಬ್ದಗಳಿಂದ ನಿರ್ದೇಶಿಸಲ್ಪಡುವದು. ಆದ್ದರಿಂದ ಮೊದಲು ಶಬ್ದಶಾರದೆಯನ್ನು ನಾವು ಪರಿಚಯಮಾಡಿಕೊಳ್ಳಬೇಕು.

(ಉಪನಿಷತ್ತು)

ಋಷಯ ಊಚುಃ -

ಕಥಂ ಸಾರಸ್ವತಪ್ರಾಪ್ತಿಃ ಕೇನ ಧ್ಯಾನೇನ ಸುವ್ರತ ।
ಮಹಾಸರಸ್ವತೀ ಯೇನ ತುಷ್ಟಾ ಭಗವತೀ ವದ ॥

ಪುನಃ ಋಷಿಗಳಿಂತೆಂದರು : 'ಎಲೈ ಸುವ್ರತರೇ, ಯವ ಧ್ಯಾನದಿಂದ ನಮಗೆ ಸಾರಸ್ವತಸಿದ್ಧಿಯಾದೀತು ? ಪೂಜ್ಯಳಾದ ಮಹಾಸರಸ್ವತಿಯು ಯಾವ ಸಾಧನದಿಂದ ಸಂತುಷ್ಟಳಾಗುವಳು ? - ಎಂದು ಪ್ರಶ್ನಿಸಿದರು. ಇಲ್ಲಿ ಧ್ಯಾನವೆಂದರೆ

ಅಧ್ಯಾತ್ಮವಾಗಿ ಮಾಡುವ ಚಿಂತನೆ ಅಥವಾ ಏಕಾಗ್ರತೆಯೆಂದಭಿಪ್ರಾಯ. ವಿದ್ಯೆಯನ್ನು ವಶಪಡಿಸಿಕೊಳ್ಳುವವನು ಧ್ಯಾನವೆಂಬ ತಪಸ್ಸನ್ನೇ ಮಾಡಬೇಕು. ಆ ತಪಸ್ಸೆಂಬುದೇ ಜ್ಞಾನಪ್ರಾಪ್ತಿಗೆ ಉಪಾಯವು. ವರುಣನು ಭೃಗುವಿಗೆ ತಪಸ್ಸಿನಿಂದ ಬ್ರಹ್ಮವನ್ನರಿತುಕೊ - ಎಂದೇ ಉಪದೇಶಿಸಿದ್ದಾನೆ. ಮತ್ತು ವಿದ್ಯೆಯು ಸಿದ್ಧಿಯಾಗ ಬೇಕಾದರೆ ಆತ್ಮಗುಣಗಳೂ ಅವಶ್ಯ. ಶಮದಮಾದಿಗಳು, ಅಮಾನಿತ್ವಾದಿಗಳೇ ಮುಂತಾದ ಸಾಧನಸಾಮಗ್ರಿಗಳಿಲ್ಲದವನಿಗೆ ನಿಜವಾದ ವಿದ್ಯೆಯು ಸಿಗಲಾರದು. ಆದ್ದರಿಂದ ಸರಸ್ವತೀಪ್ರಾಪ್ತಿಗೆ ಉಪಾಯವಾಗಿರುವ ಸಾಧನವನ್ನು ಹೇಳೋಣವಾಗಲಿ - ಎಂದು ಋಷಿಗಳು ಕೇಳಿದ್ದಾರೆ. ಋಷಿಗಳಂಥ ಅಧ್ಯಾತ್ಮಸಾಧಕರಿಗೆ ಸಾಕ್ಷಾತ್ತಾಗಿ ಶ್ರವಣಮನನನಿದಿಧ್ಯಾಸನಗಳು ಬ್ರಹ್ಮಪ್ರಾಪ್ತಿಗೆ ಪ್ರಯೋಜನಕರವಾಗಿರುತ್ತವೆ. ಸಾಮಾನ್ಯರಿಗೆ ಶ್ರವಣಾಧಿಕಾರವು ಕೂಡ ದಕ್ಕಿರುವುದಿಲ್ಲ. ಹೇಗೆಂದರೆ ಗುರುಗಳು ಹೇಳಿದ್ದನ್ನು ನಿಶ್ಚಲಮನಸ್ಸಿನಿಂದ ಆಲೈಸಿ ಕೇಳಿ ಗ್ರಹಣಮಾಡುವದು ಎಲ್ಲರಿಗೂ ಸಾಧ್ಯವಿಲ್ಲ. ಮನಸ್ಸು ಎಲ್ಲರಿಗೂ ವಿದ್ಯಾ ಸಾಧನವಾಗಿರಬಹುದಾದರೂ ಅದಕ್ಕೆ ತಕ್ಕ ಸಂಸ್ಕಾರವೂ ಶಿಕ್ಷಣವೂ ಇಲ್ಲವಾದಾಗ ಎಂದಿಗೂ ಅದು ಶ್ರವಣಕ್ಕೆ ಒಲಿಯಲಾರದು. ಆದ್ದರಿಂದಲೇ ಅನೇಕರಿಗೆ ಅಧ್ಯಾತ್ಮವಿಚಾರಗಳನ್ನು ಕೇಳಿದರೂ ರುಚಿಸದೆ ಹೋಗುವದು. ಬಲವಂತವಾಗಿ ಶ್ರವಣಕ್ಕೆ ಕುಳಿತಾಗ ನಿದ್ರೆಯೇ ಬರುವದು. ರಜೋಗುಣವು ಹೆಚ್ಚಾಗಿದ್ದರೆ ಮನಸ್ಸು ಎಲ್ಲೆಲ್ಲೋ ಸಂಚರಿಸುತ್ತಿರುವದು. ಇಂಥವರು ಹೇಗೆ ತಾನೆ ಸರಸ್ವತಿಯ ಅನುಗ್ರಹಕ್ಕೆ ಪಾತ್ರರಾದಾರು ? ವಿದ್ಯಾರ್ಥಿಯಾಗಲಿ, ಗೃಹಸ್ಥನಾಗಲಿ, ಸರಸ್ವತಿಯನ್ನು ಒಲಿಸಿಕೊಳ್ಳಬೇಕಾದರೆ ಮನಸ್ಸನ್ನು ಸಂಸ್ಕರಿಸಿಕೊಳ್ಳಲೇಬೇಕು. ಹೀಗೆ ಋಷಿಗಳು ತಾವು ಸುಸಂಸ್ಕೃತರೂ, ತಪಸ್ವಿಗಳೂ ಆಗಿದ್ದುದರಿಂದ ಶ್ರವಣಕ್ಕೆ ಅಧಿಕಾರಿಗಳಾಗಿದ್ದರು. ಅಂಥವರಿಗೆ ಉಪದೇಶಿಸಿದ ವಿದ್ಯೆಯೂ ಸಾರ್ಥಕವಾಗುವದೆಂದು ಭಾವಿಸಿ ಈಗ ಆಶ್ವಲಾಯನರು ಉಪದೇಶವನ್ನು ಆರಂಭಿಸುತ್ತಿದ್ದಾರೆ.

(ಉಪನಿಷತ್ತು)

**ಸ ಹೋವಾಚಾಶ್ವಲಾಯನಃ -**

**ಓಂ॥ ಅಸ್ಯ ಶ್ರೀ ಸರಸ್ವತೀದಶಶ್ಲೋಕೀ ಮಹಾ ಮಂತ್ರಸ್ಯ । ಅಹಮಾಶ್ವ ಲಾಯನ ಋಷಿಃ । ಅನುಷ್ಟುಪ್ ಛಂದಃ । ಶ್ರೀವಾಗೀಶ್ವರೀ ದೇವತಾ । ಯದ್ವಾಗಿತಿ**

ಬೀಜಮ್ । ದೇವೀಂ ವಾಚಮಿತಿ ಶಕ್ತಿಃ । ಪ್ರಣೋ ದೇವೀತಿ ಕೀಲಕಮ್ । ವಿನಿಯೋಗಸ್ತತ್ಪ್ರೀತ್ಯರ್ಥೇ । ಶ್ರದ್ಧಾಮೇಧಾಪ್ರಜ್ಞಾಧಾರಣಾವಾಗ್ದೇವತಾ ಮಹಾ ಸರಸ್ವತೀತ್ಯೇತೈರಂಗನ್ಯಾಸಃ ॥

ಈಗ ಆಶ್ವಲಾಯನರು ಹೇಳುತ್ತಾರೆ : ಇನ್ನು ಸರಸ್ವತೀದಶಶ್ಲೋಕೀ ಎಂಬ ಮಹಾಮಂತ್ರವನ್ನು ವಿವರಿಸಲಾಗುವದು. ಮಂತ್ರಕ್ಕೆ ಆಶ್ವಲಾಯನನೆಂಬ ಹೆಸರಿನ ನಾನೇ ಋಷಿಯು. ಅನುಷ್ಟುಪ್‌ಛಂದವು. ವಾಗೀಶ್ವರಿಯೇ ಆರಾಧ್ಯದೇವತೆಯು. 'ಯದ್ವಾಗ್ವದಂತಿ' ಎಂಬ ಮಂತ್ರವೇ ಬೀಜವು. 'ದೇವೀಂ ವಾಚಮಜನಯಂತ ದೇವಾಃ' ಎಂಬುದೇ ಶಕ್ತಿಯು. 'ಪ್ರಣೋ ದೇವೀ ಸರಸ್ವತೀ' ಎಂಬುದೇ ಕೀಲಕವು. ವಾಗ್ದೇವಿಯ ಪ್ರಸಾದಸಿದ್ಧಿಯು ಹಾಗೂ ಆಕೆಯು ಸುಪ್ರೀತಳಾಗಲೆಂಬುದೇ ವಿನಿಯೋಗವು. ಈ ರೀತಿಯಾಗಿ ವಾಗ್ದೇವೀ ಮಂತ್ರದ ಪೂರ್ವಾಂಗಗಳನ್ನು ತಿಳಿಯಬೇಕು. ಅನಂತರ ನ್ಯಾಸಮಾಡಿಕೊಳ್ಳಬೇಕು. ನ್ಯಾಸಕ್ಕೆ ಶ್ರದ್ಧಾದಿನಾಮಗಳನ್ನು ಬಳಸಬೇಕು. ಹೇಗೆಂದರೆ ಶ್ರದ್ಧಾಯೈ - ಅಂಗುಷ್ಠಾಭ್ಯಾಂ ನಮಃ । ಮೇಧಾಯೈ ತರ್ಜನೀಭ್ಯಾಂ ನಮಃ - ಹೀಗೆಯೇ -ಪ್ರಜ್ಞಾ - ಧಾರಣಾ - ವಾಗ್ದೇವತಾ - ಸರಸ್ವತೀ - ಎಂಬ ನಾಮಗಳಿಂದ ನ್ಯಾಸವನ್ನು ಮಾಡಿಕೊಂಡು ಧ್ಯಾನಕ್ಕೆ ಸಿದ್ಧನಾಗಬೇಕು. ಧ್ಯಾನಮಂತ್ರವು ಹೀಗಿದೆ.

(ಉಪನಿಷತ್ತು)

ನೀಹಾರಹಾರಘನಸಾರಸುಧಾಕರಾಭಾಂ
ಕಲ್ಯಾಣದಾಂ ಕನಕಚಂಪಕದಾಮಭೂಷಾಮ್ ।
ಉತ್ತುಂಗಪೀನಕುಚಕುಂಭಮನೋಹರಾಂಗೀಂ
ವಾಣೀಂ ನಮಾಮಿ ಮನಸಾ ವಚಸಾಂ ವಿಭೂತ್ಯೈ ॥

"ಮಂಜಿನ ಮಾಲೆಯಂತೆ ಬಿಳುಪಾದ, ಘನ (ಗಟ್ಟಿ)ವಾದ ಅಮೃತದ ಸಾರದಂತಿರುವ ಚಂದ್ರನಂತೆ - ಕಾಂತಿಯುಳ್ಳವಳೂ ಮಂಗಳವನ್ನುಂಟು ಮಾಡುವವಳೂ ಚಿನ್ನದಂತೆ ಹೊಂಬಣ್ಣವಾದ ಸಂಪಿಗೆಯ ಹೂವಿನಹಾರವನ್ನು ಧರಿಸಿರುವವಳೂ ಆದ, ಉಬ್ಬಿದ ಸ್ಥೂಲವಾದ ಕುಚಕುಂಭಗಳಿಂದ ಮನೋಹರವಾದ ಶರೀರವುಳ್ಳವಳೂ ಆದ ವಾಣೀ ಎಂಬ ದೇವಿಯನ್ನು ವಾಕ್ಕುಗಳೆಂಬ ಐಶ್ವರ್ಯಸಿದ್ಧಿಗಾಗಿ ಮನಸ್ಸಿನಿಂದ ನಮಸ್ಕರಿಸುವೆನು" ಎಂದು ಈ ಧ್ಯಾನಶ್ಲೋಕದ ಸರಳವಾದ ಅರ್ಥವು.

ಇಲ್ಲಿ ದೇವಿಯನ್ನು ಬಿಳುಪಾದ ಶುಭ್ರವರ್ಣದವಳೆಂದು ಸ್ತುತಿಸಲಾಗಿದೆ. ಉಪಮಿತೋಪಮಾನಗಳ ಮೂಲಕ ಬಿಳುಪನ್ನು ವಿಶ್ಲೇಷಿಸಲಾಗಿದೆ. ಬಿಳುಪು ಸತ್ತ್ವಗುಣದ ಕುರುಹಾಗಿದೆ. ಸತ್ತ್ವಗುಣದಿಂದ ಜ್ಞಾನವು ಉಂಟಾಗುವದೆಂದು ಗೀತಾವಚನವಿದೆ. ಚಂದ್ರ, ಅಮೃತ, ಹಿಮ - ಈ ಮೂರು ವಸ್ತುಗಳನ್ನು ನೆನಪುಮಾಡಿ ಕೊಟ್ಟು ಅವುಗಳಂತೆ ಬಿಳುಪಾಗಿರುವಳೆಂದು ದೇವಿಯನ್ನು ಭಾವಿಸಿಕೊಂಡು ಧ್ಯಾನಿಸಬೇಕು. ಮತ್ತು ದೇವಿಯು ದಿವ್ಯವಾದ ಸಂಪಿಗೆ ಹೂವಿನ ಮಾಲೆಯನ್ನು ಧರಿಸಿರುವಳು ; ಮಂಗಳಪ್ರದಳಾಗಿರುವಳೆಂದೂ ಚಿಂತಿಸಬೇಕು. ಮತ್ತು ದೇವಿಯ ವಕ್ಷಸ್ಥಲವನ್ನೂ ಕುಂಭವೆಂಬ ಉಪಮಾನದಿಂದ ಬಣ್ಣಿಸಲಾಗಿದೆ. ಇದು ಶೃಂಗಾರಪ್ರಧಾನವಾದ ವರ್ಣನೆಯಾಗಿ ಕಂಡು ಬಂದರೂ ದೇವಿಯ ವಕ್ಷಸ್ಥಲದಲ್ಲಿ ಸಕಲ ವಿದ್ಯೆಗಳೂ ನೆಲಸಿರುವವವೆಂಬುದರ ದ್ಯೋತಕವಾಗಿದೆ. ಕುಚಗಳ ಪೀನತ್ವವು ವಿದ್ಯೆಗಳ ಗುಂಪನ್ನು ಪ್ರತಿನಿಧಿಸುತ್ತದೆ. ಹೇಗೆ ಗಣಪತಿಯ ಹೊಟ್ಟೆಯನ್ನು ದೊಡ್ಡದಾಗಿರುವದೆಂದು ವರ್ಣಿಸುತ್ತಾರೋ - ಅಲ್ಲಿಯೂ ಗಣಪತಿಯು ಅಧಿಗತ ಸಕಲಶಾಸ್ತ್ರ ಸಂಪನ್ನನೆಂಬುದೇ ದೊಡ್ಡ ಹೊಟ್ಟೆಯ ಅಂತರಾರ್ಥವೋ ಹಾಗೆಯೇ ಇಲ್ಲಿಯೂ ಪೀನವಾಗಿರುವ ದೇವಿಯ ಕುಚಗಳು - ತಾಯಿಯು ಮಗುವಿಗೆ ಮೊಲೆಹಾಲಿನ ಭೋಜನವನ್ನು ನೀಡುವಂತೆ - ಭಕ್ತರಿಗೆ ವಿದ್ಯಾಮೃತವನ್ನು ಉಣಿಸುವವು - ಎಂಬರ್ಥದಲ್ಲಿ ಪ್ರಯುಕ್ತವಾಗಿದೆ. ಇಂಥ ಮಹಾಮಾತೆಯಾದ ವಾಗ್ದೇವಿಯನ್ನು ಮಾತುಗಳ ಸಿದ್ಧಿಗಾಗಿ ಮನಸ್ಸಿನಲ್ಲೇ ನಮಸ್ಕರಿಸುವೆನು -ಎಂಬುದು ಧ್ಯಾನಶ್ಲೋಕದ ಅಭಿಪ್ರಾಯವು. ವಾಕ್‌ಸಿದ್ಧಿಯೆಂಬುದು ದೇವಿಯು ಕೊಡಬಹುದಾದ ಒಂದು ವರವು. ಇದು ಋಷಿಮುನಿಗಳಿಗೆ ಇದ್ದಿತಾದ್ದರಿಂದಲೇ ಅವರು ಆಡಿದ್ದೆಲ್ಲ ಹಾಗೆಯೇ ನಡೆಯುತ್ತಿತ್ತು. ಈಗಲೂ ಕಿರಿಯರು ಹಿರಿಯರಿಗೆ ನಮಸ್ಕಾರ ಮಾಡಿದಾಗ ಆಶೀರ್ವಾದ ಮಾಡುವ ಪದ್ಧತಿಯಿದೆಯಷ್ಟೇ. ಆದರೆ ಆಶೀರ್ವದಿಸುವವರು ವಾಕ್ಸಿದ್ಧಿಯುಳ್ಳವರಾಗಿದ್ದು ಬಿಟ್ಟರೆ ಎಂಥ ಲಾಭವಾದೀತು ? ಅಂಥವರ ಬಾಯಿಂದ "ನಿನಗೆ ತೇರ್ಗಡೆಯಾಗಲಿ, ನಿನಗೆ ವಿವಾಹವಾಗಲಿ, ನಿನಗೆ ಕೆಲಸ ಸಿಕ್ಕಲಿ" ಎಂಬಂಥ ಆಶೀರ್ವಾದಗಳು ಹೊರಬಿದ್ದಲ್ಲಿ ಈಗಿನ ಕಾಲದವರಿಗೂ ಉಪಯೋಗವಾಗುವದಲ್ಲವೆ? ಇವೇನೂ ವಾಗ್ದೇವಿಯ ಉಪಾಸನೆಯ ಪರಮ ಫಲಗಳಲ್ಲವೆಂಬುದು ನಿಜ. ಆದರೆ ಜನಸಾಮಾನ್ಯರನ್ನು ದೇವರಕಡೆಗೆ ತಿರುಗಿಸುವದಕ್ಕೆ ಇವು ಖಂಡಿತ ಉಪಯೋಗವಾಗುವವು. ಹೀಗೆ ವಾಗ್ವಿಭೂತಿಗಾಗಿ ದೇವಿಯನ್ನು ನಮಸ್ಕರಿಸಬೇಕೆಂದು ಇಲ್ಲಿ ತಿಳಿಸಿದೆ.

(ಉಪನಿಷತ್ತು)

ಓಂ॥ ಪ್ರಣೋ ದೇವೀತ್ಯಸ್ಯ ಮಂತ್ರಸ್ಯ । ಭರದ್ವಾಜ ಋಷಿಃ । ಗಾಯತ್ರೀ ಛಂದಃ । ಶ್ರೀಸರಸ್ವತೀ ದೇವತಾ । ಪ್ರಣವೇನ ಬೀಜಶಕ್ತಿಕೀಲಕಂ । ಇಷ್ಟಾರ್ಥೇ ವಿನಿಯೋಗಃ । ಮಂತ್ರೇಣ ನ್ಯಾಸಃ ॥

ಯಾ ವೇದಾಂತಾರ್ಥತತ್ತ್ವೈಕಸ್ವರೂಪಾ ಪರಮಾರ್ಥತಃ ।
ನಾಮರೂಪಾತ್ಮನಾ ವ್ಯಕ್ತಾ ಸಾ ಮಾಂ ಪಾತು ಸರಸ್ವತೀ ।

ಓಂ ॥ ಪ್ರಣೋದೇವೀ ಸರಸ್ವತೀ ವಾಜೇಭಿರ್ವಾಜಿನೀವತೀ ।
ಧೀನಾಮವಿತ್ರ್ಯವತು ॥೧॥

ಈಗ ಮೂಲಮಂತ್ರಗಳನ್ನೂ ಶ್ಲೋಕಗಳನ್ನೂ ಆಶ್ವಲಾಯನರು ಉಪದೇಶಿಸುತ್ತಾರೆ. ಋಗ್ವೇದದಲ್ಲಿ (೪-೮-೩೦) ಸರಸ್ವತೀಸೂಕ್ತವೆಂಬ ಪ್ರಸಿದ್ಧವಾದ ಭಾಗವಿದೆ. ಈ ಮಂತ್ರಗಳ ದ್ರಷ್ಟಾರರು ಭಗವಂತರಾದ ಭರದ್ವಾಜ ಮಹರ್ಷಿಗಳು. ಈ ಮಂತ್ರಗಳಲ್ಲಿ ಒಂದಾದ 'ಪ್ರಣೋ ದೇವಿ' ಎಂಬಿದನ್ನು ಈಗ ವಿವರಿಸಲಾಗುವದು. ವೇದಮಂತ್ರಗಳಿಗೆಲ್ಲ ಋಷಿದೇವತಾಛಂದಸ್ಸುಗಳನ್ನು ಪಠಿಸಿಯೇ ಉಚ್ಚರಿಸಬೇಕೆಂಬ ನಿಯಮವಿದೆ. ಅದರಂತೆ ಭರದ್ವಾಜರು ಕಂಡು ಹಿಡಿದ ಈ ಮಂತ್ರಭಾಗಗಳು ಗಾಯತ್ರೀ ಛಂದಸ್ಸಿನಲ್ಲಿವೆ. ಸರಸ್ವತೀದೇವಿಯೇ ಈ ಮಂತ್ರಗಳ ಅಧಿದೇವತೆಯು. ಓಂಕಾರವೇ ಬೀಜಶಕ್ತಿಕೀಲಕಗಳು. ನಾವು ಯಾವದೇ ಇಷ್ಟಾರ್ಥಗಳನ್ನು ಬಯಸಿ ಕಾಮ್ಯವಾಗಿಯೂ ಈ ಮಂತ್ರಗಳನ್ನು ಜಪಿಸಬಹುದು - ಎಂದು ಇಲ್ಲಿ ತಿಳಿಸಿರುತ್ತದೆ. ಮಂತ್ರಾಕ್ಷರಪದಗಳಿಂದಲೇ ನ್ಯಾಸವನ್ನು ಮಾಡಿಕೊಳ್ಳಬೇಕು. ನ್ಯಾಸವೆಂದರೆ ಆಯಾ ಮಂತ್ರವನ್ನು ನಮ್ಮ ಶರೀರದ ಅವಯವಗಳಲ್ಲಿಯೇ ಇಟ್ಟುಕೊಳ್ಳುವದು. ಇದರಿಂದ ಮಂತ್ರ ಜಾಪಕನಿಗೆ ಬೇಗನೆ ಸಿದ್ಧಿಯಾಗುವದು. ಸಾಧಕನು ಮಂತ್ರಮಯನಾಗಲು ಈ ನ್ಯಾಸವು ಅವಶ್ಯವಾಗಿದೆ. ಇದು ತಾಂತ್ರಿಕವು. ಋಷಿದೇವತಾಚ್ಛಂದಸ್ಸುಗಳ ಸ್ಮರಣೆಯು ವೈದಿಕರವು. ವೇದಮಂತ್ರಗಳಿಗೆ ತಾಂತ್ರಿಕನ್ಯಾಸಗಳ ಅಪೇಕ್ಷೆಯೇನೂ ಇಲ್ಲ. ಹಾಗೆ ಪಠಿಸಬಹುದು. ಆದರೆ ನ್ಯಾಸದಿಂದ ಮಂತ್ರಸಿದ್ಧಿಪುರಶ್ಚರಣೆಗಳಿಗೆ ಸಹಾಯ ವಾಗುವದರಿಂದ ಬಲ್ಲವರು ಅದನ್ನು ಸೇರಿಸಿದ್ದಾರೆ.

ಈಗ ಸರಸ್ವತೀಸೂಕ್ತದ ಅಲ್ಪ ಪರಿಚಯವನ್ನು ಮಾಡಿಕೊಳ್ಳೋಣ. ಏಕೆಂದರೆ ಈಗ ವಿವರಣೆಮಾಡಬೇಕಾಗಿರುವ ಮಂತ್ರವು ಆ ಸೂಕ್ತದಲ್ಲಿದೆ. ಋಗ್ವೇದದ ನಾಲ್ಕನೆಯ ಅಷ್ಟಕದ ಎಂಟನೆಯ ಅಧ್ಯಾಯದ ಮೂವತ್ತನೆಯ ವರ್ಗವಾಗಿರುವ ಈ ಸೂಕ್ತವೂ ಹದಿನಾಲ್ಕು ಋಕ್ಕುಗಳುಳ್ಳದ್ದಾಗಿದೆ. ಇವುಗಳಲ್ಲಿ ಒಂದರಿಂದ ಮೂರು ಹಾಗೂ ಹದಿಮೂರನೆಯ ಋಕ್ಕುಗಳು ಜಗತೀ ಛಂದಸ್ಸಿನಲ್ಲಿಯೂ ಹದಿನಾಲ್ಕನೆಯದು ತ್ರಿಷ್ಟುಪ್ ಛಂದಸ್ಸಿನಲ್ಲಿಯೂ ಉಳಿದವುಗಳು ಗಾಯತ್ರೀ ಛಂದಸ್ಸಿನಲ್ಲಿಯೂ ಇವೆ. 'ಇಯಮದದಾತ್.....' ಎಂಬ ಋಕ್ಕಿನಿಂದ ಇದರ ಆರಂಭವು. 'ಪ್ರಣೋ ದೇವೀ' ಎಂಬಿದು ನಾಲ್ಕನೆಯ ಮಂತ್ರವು. ಈ ಸೂಕ್ತದ ವಿಷಯಕ್ಕೆ ಶೌನಕರ ಅಭಿಪ್ರಾಯವು ಹೀಗಿದೆ.

ಇಯಮಿತ್ಯೇತದಾದ್ಯಂ ತು ಸೂಕ್ತಂ ಸಾರಸ್ವತಂ ಜಪೇತ್ ।
ದ್ವಿಜಃ ಪ್ರಾತಃ ಶುಚಿರ್ಭೂತ್ವಾ ವಾಗ್ಮೀ ಭವತಿ ಬುದ್ಧಿಮಾನ್ ॥

''ಇಯಮ್ - ಎಂಬಿದೇ ಮುಂತಾಗಿ ಪ್ರಾರಂಭವಾಗುವ ಸಾರಸ್ವತ ಸೂಕ್ತವನ್ನು ಬ್ರಾಹ್ಮಣನು ಬೆಳಗಿನ ವೇಳೆಯಲ್ಲಿ ಶುಚಿಭೂರ್ತನಾಗಿ ಜಪಿಸಿದ್ದೇ ಆದರೆ ವಾಚಾಳಿಯೂ ಬುದ್ಧಿವಂತನೂ ಆಗುವನು'' ಎಂದು ಶ್ಲೋಕಾಭಿಪ್ರಾಯವು. ಈಗ ಪ್ರಕೃತವಾದ ನಾಲ್ಕನೆಯ ಮಂತ್ರಾರ್ಥವನ್ನು ನೋಡೋಣ.

'' ಪ್ರಣೋ ದೇವಿ..... '' ಎಂಬಿದು ಸ್ವರಸಹಿತವಾದ ವೇದಮಂತ್ರವು.

'' ಯಾ ವೇದಾಂತಾರ್ಥ....'' ಎಂಬಿದು ಸ್ವರವಿಲ್ಲದ ಮಂತ್ರವು. ಸ್ವರಮಂತ್ರದ ಅಭಿಪ್ರಾಯವು ಹೀಗಿದೆ -

''ದೇವೀ ಎಂದರೆ ದಾನಾದಿ ಗುಣಯುಕ್ತಳಾದ ಹಾಗೂ ಅನ್ನವನ್ನುಂಟು ಮಾಡುವಂಥ ಯಜ್ಞಾದಿ ವೈದಿಕ ಕರ್ಮಗಳಿಂದ ಭೂಷಿತಳಾದ ಮತ್ತು ಧ್ಯಾನಮಾಡುವವರನ್ನು ಕಾಪಾಡುವವಳಾದ ಸರಸ್ವತಿಯು ನಮ್ಮನ್ನು ವಿಶೇಷವಾಗಿ ರಕ್ಷಿಸಲಿ'' ಎಂದು ತಾತ್ಪರ್ಯವು. ಇಲ್ಲಿರುವ 'ಧೀನಾಮವಿತ್ರೀ' ಎಂಬುದನ್ನು ಪ್ರಧಾನವಾಗಿ ಪರಿಗಣಿಸಿ ಸ್ವರರಹಿತಮಂತ್ರಗಳಲ್ಲಿ ಹೀಗೆ ಸ್ತುತಿಸಿದೆ.

''ಯಾವ ದೇವಿಯು ಪರಮಾರ್ಥವಾಗಿ ಉಪನಿಷತ್ ಪ್ರತಿಪಾದ್ಯವಾದ ತತ್ತ್ವವೇ ತಿರುಳಾಗಿ ಉಳ್ಳ ಸ್ವರೂಪಳಾಗಿರುವಳೋ, ಸೃಷ್ಟಿಕಾಲಕ್ಕೆ ಅವಳೇ

ನಾಮರೂಪಗಳಾಗಿ ಕಂಡುಬರುವಳೋ ಆ ಸರಸ್ವತಿಯು ನನ್ನನ್ನು ಕಾಪಾಡಲಿ'' - ಎಂದು ಶ್ಲೋಕಾಭಿಪ್ರಾಯ. ಸ್ವರಮಂತ್ರದಲ್ಲಿ ವಾಜೀನೀವತೀ ಎಂಬುದಾಗಿ ದೇವಿಯನ್ನು ಅನ್ನಪ್ರದಳೆದು ಕರೆದಿರುವದನ್ನೂ ಗಮನಿಸಬೇಕು. ಅನ್ನದಿಂದಲೇ ಶರೀರಪ್ರಾಣಧಾರಣೆಗಳುಂಟಾಗಿ ಅನಂತರ ವಿದ್ಯಾ ಸಿದ್ಧಿಯಾಗುವದು. ಹೊಟ್ಟೆಯಲ್ಲಿ ಆಹಾರವಿಲ್ಲವಾದರೆ ಮಾತು ಚೆನ್ನಾಗಿ ಹೊರಡಲಾರದು. ವಾಗ್ರೂಪಳಾದ ದೇವಿಯು ಅನ್ನಪ್ರದಳಾಗಿರುವದೂ ಲೋಕಪ್ರಸಿದ್ಧವಾಗಿದೆ. ಬುದ್ಧಿಜೀವಿಗಳೆಲ್ಲ ವಾಕ್‌ನ್ನು ಬಳಸಿಯೇ ಜೀವನಮಾಡುತ್ತಾರೆ. ಉಪಾಧ್ಯಾಯರುಗಳು, ಲಾಯರುಗಳು, ಸಂಗೀತಗಾರರು, ವೈದಿಕರು, ಉಪನ್ಯಾಸ - ಹರಿಕಥೆಗಳನ್ನು ನಡೆಸುವವರೆಲ್ಲರಿಗೂ ವಾಕ್ಕೇ ಜೀವನಾಧಾರವು. ಅಂಥವರಿಗೆಲ್ಲ ವಾಕ್ಕು ಅನ್ನರೂಪದಿಂದ ಅನುಗ್ರಹಮಾಡಿದರೆ ಮಾತ್ರ ಬದುಕಲು ಸಾಧ್ಯ. ಇನ್ನು ಋಷಿಮುನಿಗಳು ತಮ್ಮ ಅನ್ನಮಯಶರೀರವನ್ನು ದಾಟಿ ಕೇವಲ ಪ್ರಾಣಮನೋಬುದ್ಧಿ ತತ್ತ್ವಗಳನ್ನು ಆಶ್ರಯಿಸಿರುವದರಿಂದ ಅಂಥವರು ದೇವಿಯ ಪರಮಾರ್ಥಸ್ವರೂಪದ ಉಪಾಸಕರೆನಿಸುತ್ತಾರೆ. ಅವರ ದೃಷ್ಟಿಯಲ್ಲಿ ದೇವಿಯು ಕೇವಲ ತತ್ತ್ವರೂಪಳು. ಆ ರೂಪವು ಸೂಕ್ಷ್ಮವೂ ಅವ್ಯಕ್ತವೂ ಆಗಿದ್ದು ಧ್ಯಾನಗೋಚರವಾಗಿರುವದೇ ಹೊರತು ವಾಗ್ಗೋಚರವಲ್ಲ. ಹೀಗೆ ಸರಸ್ವತಿಯು ವ್ಯಕ್ತಾವ್ಯಕ್ತಾತ್ಮಳಾಗಿ ಜಗತ್ತೆಲ್ಲವನ್ನೂ ವ್ಯಾಪಿಸಿಕೊಂಡಿರುವಳು - ಎಂದು ಇಲ್ಲಿ ಸ್ತುತಿಸಲಾಗಿದೆ. ದೇವಿಯ ವ್ಯಕ್ತರೂಪವೇ ನಾಮರೂಪಗಳೆನಿಸಿವೆ. ನಾಮವೆಂಬುದು ಪದಾರ್ಥಗಳ ಹೆಸರು. ಹೆಸರನ್ನು ಉಚ್ಚಾರಣೆ ಮಾಡುವಾಗ ದೇವಿಯ ವ್ಯಕ್ತರೂಪವು ಕಂಡುಬರುವದು. ನಾವು ಮಾತುಗಳನ್ನು ಬಳಸುತ್ತೇವಾದರೂ ಅವುಗಳ ಬೆಲೆಯನ್ನು ತಿಳಿದಿಲ್ಲ. ಅವುಗಳೆಲ್ಲ ದೇವಿಯ ವ್ಯಕ್ತರೂಪಗಳೆಂದಾದರೆ ಪ್ರಿಯ - ಹಿತ - ಸತ್ಯವಾದ ವಾಕ್ಕುಗಳನ್ನೇ ಆಡಬೇಕಾದೀತು. ಇದೊಂದು ರೀತಿಯ ತಪಸ್ಸೆಂದೇ ಗೀತೆಯಲ್ಲಿ ತಿಳಿಸಿದೆ. ಈ ಅರ್ಥದಲ್ಲಿ ನಾವು ತಪಸ್ವಿಗಳಾಗಲು ಸಾಧ್ಯವಿದೆ. ಹಾಗಾದಲ್ಲಿ ದೇವಿಯ ಕೃಪಾಪಾತ್ರರಾಗಬಹುದಾಗಿದೆ. ಅಂತೂ ವಾಗ್ದೇವಿಯ ವ್ಯಕ್ತರೂಪವನ್ನು ಮಾನವರಾದ ನಾವು ಬಳಸುತ್ತಿರುವೆವು - ಎಂದಾಯಿತು. ಇಂಥ ದೇವಿಯು ನನ್ನನ್ನು ಕಾಪಾಡಲಿ - ಎಂದು ಇಲ್ಲಿ ತಿಳಿಸಿದೆ.

ಈಗ ವಾಕ್ಕಿಗೂ ಬುದ್ಧಿಗೂ ಇರುವ ಸಂಬಂಧವನ್ನು ಚಿಂತಿಸೋಣ. ಬುದ್ಧಿಯು ವಾಕ್ಕಿಗಿಂತ ಸೂಕ್ಷ್ಮತತ್ತ್ವವು. ಅದು ಪ್ರಸನ್ನವಾಗಿ ಸ್ವಚ್ಛವಾಗಿದ್ದರೆ ವಾಕ್ಕು

ಕವಿತೆ, ಪದ್ಯ, ಗ್ರಂಥಾದಿಗಳ ರೂಪದಿಂದ ಪ್ರಕಟವಾಗಬಲ್ಲದು. ಆದರೆ ಆ ಬುದ್ಧಿಯೂ ಜಡವಾದ್ದರಿಂದ ಅದನ್ನು ಪ್ರಚೋದನೆಮಾಡುವ ಶಕ್ತಿಯು ಬೇರೆಯೇ ಇರಬೇಕೆಂಬುದು ನಿಶ್ಚಯವು. ಈ ಪರಾಶಕ್ತಿಯೇ ಸರಸ್ವತಿಯು. ಗಾಯತ್ರೀ ಮಂತ್ರದಲ್ಲಿಯೂ ಈ ಪರಾಶಕ್ತಿಯನ್ನೇ ಪರಾಮರ್ಶಿಸಿದೆ. ಅದು ಆಧಿದೈವಿಕವಾದ ಆದಿತ್ಯಮಂಡಲಾಂತರ್ಗತವಾಗಿದೆಯೆಂದು ತಿಳಿಸಿ ಅದೇ ತೇಜಸ್ಸೇ ನಮ್ಮ ಬುದ್ಧಿವೃತ್ತಿಗಳನ್ನು ಪ್ರೇರಿಸಲೆಂದು ಪ್ರಾರ್ಥನೆ ಮಾಡಲಾಗಿದೆ. ಹೀಗೆ ವೇದದಲ್ಲಿ ಒಂದು ಕಡೆ 'ಧಿಯೋ ಯೋ ನಃ ಪ್ರಚೋದಯಾತ್' ಎಂಬುದಾಗಿಯೂ ಇನ್ನೊಂದು ಕಡೆ 'ದೀನಾಮವಿತ್ರ್ಯವತು' ಎಂದೂ ಪ್ರಾರ್ಥಿಸಲಾಗಿದೆ. ಸರಸ್ವತಿಯೆಂದರೂ ಗಾಯತ್ರಿಯೆಂದರೂ ಒಂದೇ ಪರಾಶಕ್ತಿಯೆಂದೂ ಆ ಪರಶಕ್ತಿ ದೇವತೆಯೇ ಉಪನಿಷತ್ ಪ್ರತಿಪಾದ್ಯಳಾದ ಚಿಚ್ಛಕ್ತಿಯೆಂದೂ ಈಗ ವಾಚಕರು ಮನಗಾಣ ಬಹುದಾಗಿದೆ. ಈ ರೀತಿಯಾಗಿ ಸರಸ್ವತೀತತ್ತ್ವವನ್ನು ಆಶ್ವಲಾಯನರು ಒಂದನೆಯ ಮಂತ್ರದಲ್ಲಿ ತಿಳಿಸಿದ್ದಾರೆ. ಈಗ ಎರಡೆಯ ಮಂತ್ರವನ್ನು ವಿಚಾರಮಾಡೋಣ -

**ಓಂ ॥ ಆನೋ ದಿವ ಇತಿ ಮಂತ್ರಸ್ಯ । ಅತ್ರಿ ಋಷಿಃ । ತ್ರಿಷ್ಟುಪ್ ಛಂದಃ । ಸರಸ್ವತೀ ದೇವತಾ । ಹ್ರೀಮಿತಿ ಬೀಜಶಕ್ತಿಕೀಲಕಮ್ । ಇಷ್ಟಾರ್ಥೇ ವಿನಿಯೋಗಃ । ಮಂತ್ರೇಣ ನ್ಯಾಸಃ ॥**

**ಯಾ ಸಾಂಗೋಪಾಂಗವೇದೇಷು ಚತುರ್ಷ್ವೇಕೈವ ಗೀಯತೇ ।**
**ಅದ್ವೈತಾ ಬ್ರಹ್ಮಣಃ ಶಕ್ತಿಃ ಸಾ ಮಾಂ ಪಾತು ಸರಸ್ವತೀ ॥**

**ಓಂ॥ ಹ್ರೀಂ। ಆನೋ ದಿವೋ ಬೃಹತಃ ಪರ್ವತಾದಾ ಸರಸ್ವತೀ ಯಜತಾಗಂತು ಯಜ್ಞಮ್ । ಹವಂ ದೇವೀ ಜಜುಷಾಣಾ ಘೃತಾಚೀ ಶಗ್ಮಾಂ ನೋ ವಾಚಮುಶತೀ ಶೃಣೋತು ॥೨॥**

ಇಲ್ಲಿ ಋಗ್ವೇದದ ೨-೨-೨೨ರಲ್ಲಿರುವ ಸ್ವರಮಂತ್ರವನ್ನು ಋಷಿದೇವತಾ ಛಂದಸ್ಸಿನೊಡನೆ ಕೊಡಲಾಗಿದೆ. ಮತ್ತು ಸ್ವರರಹಿತಮಂತ್ರವನ್ನೂ ಜೋಡಿಸಲಾಗಿದೆ. ಅದರ ಅಭಿಪ್ರಾಯವೇನೆಂದರೆ : ಯಾವ ದೇವಿಯು ಅಂಗೋಪಾಂಗ ಸಹಿತವಾದ ನಾಲ್ಕು ವೇದಗಳಲ್ಲಿಯೂ ತಾನೊಬ್ಬಳೇ ಸ್ತುತಿಸಲ್ಪಡುತ್ತಿರುವಳೋ ಅದ್ವೈತಳೂ, ಬ್ರಹ್ಮಶಕ್ತಿಯೂ ಆಗಿರುವ ಆ ಸರಸ್ವತಿಯು ನನ್ನನ್ನು ಕಾಪಾಡಲಿ ! ಎಂದರ್ಥ. ವೇದಾಂಗಗಳೆಂದರೆ ಶಿಕ್ಷೆ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪ -

ಎಂಬಿವುಗಳು. ವೇದಗಳನ್ನು ಹೇಗೆ ಹೇಳಬೇಕೆಂಬುದನ್ನು ನಿಯಮಗೊಳಿಸುವ ಶಾಸ್ತ್ರ **ಶಿಕ್ಷೆಯು.** ವೇದಗಳಲ್ಲಿರುವ ಪದ ಪದಾರ್ಥಗಳನ್ನೂ ಪ್ರಕೃತಿ ಪ್ರತ್ಯಯಗಳನ್ನೂ ಎಂಗಡಿಸಿ ಉಚ್ಚರಿಸಲು ಹಾಗೂ ಅರ್ಥ ಮಾಡಲು ಸಹಾಯ ಮಾಡುವ ಶಬ್ದಶಾಸ್ತ್ರವೇ **ವ್ಯಾಕರಣವು.** ವೇದಮಂತ್ರಗಳಿಗೆ ವಿನಿಯೋಗವನ್ನು ತಿಳಿಸುವ ಶಾಸ್ತ್ರವೇ **ಕಲ್ಪವು.** ವೈದಿಕ ಶಬ್ದಗಳ ಅರ್ಥವನ್ನು ತಿಳಿಸುವ ಕೋಶವೇ **ನಿರುಕ್ತವು.** ಕಾಲಸೂಚಕವೂ ವೈದಿಕಕರ್ಮಗಳ ಅನುಷ್ಠಾನಕ್ಕೆ ಸಮಯವನ್ನು ಗೊತ್ತುಮಾಡುವ ಶಾಸ್ತ್ರವೇ **ಜ್ಯೋತಿಷವು.** ವೇದಮಂತ್ರಗಳ ಅಕ್ಷರಾನುಗುಣ ವಾಗಿ ಅವುಗಳನ್ನು ಎಂಗಡಿಸುವಶಾಸ್ತ್ರವೇ **ಛಂದಸ್ಸು.** ಹೀಗೆ ಆರು ಅಂಗ ಗಳಿಂದಲೂ ಇನ್ನೂ ಕೆಲವು ವಿವರಣೆಗಳನ್ನು ನೀಡುವ ಉಪಾಂಗಗಳಿಂದಲೂ ಕೂಡಿದ ಎಲ್ಲಾ ವೇದಗಳಲ್ಲಿಯೂ ಸರಸ್ವತೀದೇವಿಯೊಬ್ಬಳೇ ಸ್ತುತಿಸಲ್ಪಡುತ್ತಿರು ವಳು. ಉಪಾಂಗಗಳೆಂದರೆ ವೇದಾರ್ಥಗಳನ್ನು ವಿವರಿಸುವ ಇತಿಹಾಸಗಳು, ಪುರಾಣಗಳೆಂದು ಅರ್ಥಮಾಡಬಹುದು. ಏಕೆಂದರೆ ವೇದಗಳಲ್ಲಿರುವ ಅನೇಕ ವಿಷಯಗಳನ್ನು ಇತಿಹಾಸಪುರಾಣಗಳು ವಿಸ್ತರಿಸಿ ತಿಳಿಸುವವು. ಆದ್ದರಿಂದ ವೇದೇತಿಹಾಸಪುರಾಣ ಧರ್ಮಶಾಸ್ತ್ರ ನ್ಯಾಯ ಮಿಮಾಂಸಾದಿ ಸಕಲ ವಾಙ್ಮಯವೂ ಸರಸ್ವತೀದೇವಿಯ ವಿಭೂತಿಗಳೇ ಆಗಿವೆ. ಹಾಗೆಯೇ ಎಲ್ಲಾ ಲೌಕಿಕವಿದ್ಯೆಗಳೂ ವಾಗ್ದೇವೀಯ ಅಂಶಗಳೇ ಆಗಿವೆ. ಏಕೆಂದರೆ ಯಾವ ವಿದ್ಯೆಯೇ ಆಗಲೀ, ಮಾನವನ ಅಂತಃಕರಣದಲ್ಲಿಯೇ ಹೊಳೆಯಬೇಕು, ಮನುಷ್ಯನ ಬುದ್ಧಿಯಲ್ಲಿ ಹೊಳೆಯದ ಶಾಸ್ತ್ರವೆಂಬುದೇ ಇಲ್ಲ. ಭೌತಿಕ, ರಸಾಯನ, ಗಣಿತ, ಜೀವಶಾಸ್ತ್ರಾದಿಗಳೆಲ್ಲವೂ ಮಾನವನ ಬುದ್ಧಿ ವಿಷಯಗಳೇ ಆಗಿವೆ. ಆ ಬುದ್ಧಿಯಾದರೋ ಸರಸ್ವತಿಯ ಪ್ರಸಾದವೇ ಸರಿ. ಹೀಗೆ ಲೌಕಿಕಶಾಸ್ತ್ರಗಳು ಕೂಡ ಸರಸ್ವತಿಯನ್ನೇ ಪರಂಪರೆಯಿಂದ ಪ್ರತಿನಿಧಿಸುವವು. ಅವುಗಳಿಗೆ ಪ್ರತಿಪಾದ್ಯವಿಷಯಗಳು ಬೇರೆಬೇರೆಯಾಗಿದ್ದರೂ ಎಲ್ಲವೂ ಮಾನವನ ಉಪಯೋಗಕ್ಕಾಗಿಯೇ ಇದ್ದುಕೊಂಡಿದ್ದು ಮಾನವನೆಂದರೆ ಮನಃ ಪ್ರಧಾನನೂ ಬುದ್ಧಿ ಜೀವಿಯೂ ಆಗಿರುವುದರಿಂದ ಬುದ್ಧಿಪ್ರದಳೇ ಶಾರದೆಯೆನಿಸಿ ಸಕಲವಿದ್ಯಾಶಾಸ್ತ್ರಗಳ ಮೂಲತತ್ತ್ವರೂಪಳಾಗಿರುವಳು. ಈಕೆಯು ಒಬ್ಬಳೇ ಆದ್ದರಿಂದ ಅದ್ವೈತಳು. ಬ್ರಹ್ಮನ ಶಕ್ತಿಯೇ ಆಗಿರುವಳು. ಬ್ರಹ್ಮನ ರಾಣಿಯೆಂದೂ ಈಕೆಯನ್ನು ಪುರಾಣಗಳಲ್ಲಿ ವರ್ಣಿಸಿದೆ. ಆದ್ದರಿಂದ ಇಬ್ಬರೆಂದಾಯಿತಲ್ಲವೇ? ಎಂದು ಸಂಶಯವನ್ನು ಹೊಂದಬಾರದು. ಬೆಂಕಿಯೂ ಬಿಸಿಯೂ (ಎರಡು

ಶಬ್ದಗಳನ್ನುಪಯೋಗಿಸಿದರೂ) ಒಂದೇ ತತ್ತ್ವವಾಗಿರುವಂತೆ ಸರಸ್ವತಿಯೆಂದರೂ ಬ್ರಹ್ಮವೆಂದರೂ ಒಂದೇ ವಸ್ತುವು. ವ್ಯವಹಾರಕಾಲಕ್ಕೆ ಭೇದಭಾವವನ್ನು ಕಲ್ಪಿಸಿ ವಿವರಿಸಲಾಗಿದೆ. ಹೇಗೂ ದೇವಿಯು ವಾಗ್ರೂಪಳಾಗಿ ತಾನೊಬ್ಬಳೇ ಸಕಲವಿದ್ಯಾರೂಪಿಣಿಯಾಗಿಯೂ ವಿರಾಜಮಾನಳಾಗಿರುವಳು.

ಈಗ ಸ್ವರಮಂತ್ರಾರ್ಥವನ್ನು ನೋಡೋಣ. ಯಜ್ಞದಿಂದ ಆರಾಧಿಸಲ್ಪಡುವ ಸರಸ್ವತೀದೇವಿಯು ಹೊಳೆಯುತ್ತಿರುವ ದ್ಯುಲೋಕದಿಂದ ಬರುವವಳಾಗಲಿ. ಹಾಗೆಯೇ ದೊಡ್ಡ ಮೇಘದಿಂದ ಇಳಿದು ಬರಲಿ. ಇಲ್ಲಿ ಪರ್ವತಾತ್ ಎಂಬುದಕ್ಕೆ ಜನರನ್ನು ಪ್ರೀತಿಗೊಳಿಸುವ ಮೋಡಗಳಿಂದ ಎಂದರ್ಥ ಮಾಡಿದೆ. ಏಕೆಂದರೆ ಮೋಡಗಳು ಜನರನ್ನು ಸಂತೋಷಗೊಳಿಸುತ್ತವೆ. ಮಳೆಯ ಮೂಲಕ ಪೋಷಿಸುತ್ತವೆ. ಮೋಡಗಳಿಂದ ಗುಡುಗಿನ ಶಬ್ದಗಳು ಹೊರಬೀಳುವವು. ಅದೇ ವಾಗ್ದೇವಿಯ ಆಗಮನವು. ಅಥವಾ ಪರ್ವಗಳುಳ್ಳದ್ದು. ಪರ್ವತವು - ಎಂದರೆ ಅಂತರಿಕ್ಷಲೋಕವೆಂದರ್ಥ. ಮಾತು ಮತ್ತೊಬ್ಬರಿಗೆ ಕೇಳಬೇಕಾದರೆ ಅಂತರಿಕ್ಷವು ಅಥವಾ ಆಕಾಶವು ಇರಬೇಕು. ಶಬ್ದತರಂಗಗಳು ಆಕಾಶವನ್ನೇ ಆಶ್ರಯಿಸಿಕೊಂಡಿರುವವು. ಆಕಾಶದ ಅಸಾಧಾರಣ ಗುಣವೇ ಶಬ್ದವು. ಶಬ್ದವೇ ಇಲ್ಲಿ ವಾಗ್ದೇವಿಯೆನಿಸಿರುತ್ತದೆ. ಈ ದೇವಿಯು ಬಂದು ನಮ್ಮನ್ನು ಅನುಗ್ರಹಿಸಲಿ ಎಂದಭಿಪ್ರಾಯ. ಆನಂತರ ಈ ವಾಗ್ದೇವಿಯು ನಮ್ಮ ಆಹ್ವಾನ(ಹವ)ವನ್ನು ಸ್ವೀಕರಿಸುವವಳಾಗಿ ಮತ್ತು ನಾವು ಮಾಡುವ ಸ್ತೋತ್ರವನ್ನು ಸೇವಿಸುವವಳಾಗಿ ಘೃತಾಚಿಯಾಗಿ ದಯಮಾಡಿಸಲಿ - ಎಂದೂ ಪ್ರಾರ್ಥಿಸಲಾಗಿದೆ. ಘೃತವೆಂದರೆ ನೀರು ಎಂದು ಇಲ್ಲಿ ಅರ್ಥಮಾಡಿದೆ. ಆಕೆಯು ನಮ್ಮ ಶರ್ಮವಾದ ಎಂದರೆ ಸುಖಕರವಾದ ಮಾತುಗಳನ್ನು ಬಯಸುವವಳಾಗಿ (ಉಶತೀ) ಜಲ ಧಾರೆಗಳನ್ನು ಪ್ರವಹಿಸುತ್ತಾ ಅಥವಾ ಜಲಧಾರೆಗಳಂತೆ ನಿರರ್ಗಳವಾಗಿ ನಮ್ಮಲ್ಲಿ ಪ್ರಕಟವಾಗುತ್ತಾ ಅನುಗ್ರಹಮಾಡಲಿ - ಎಂದಭಿಪ್ರಾಯ. ಯಾವನಿಗೆ ದೇವಿಯು ಒಲಿಯುವಳೋ ಅವನೇ ವಾಗ್ಮಿಯೆನಿಸುವನು. ಅಂಥವನ ಮುಖದಿಂದ ಪುಂಖಾನುಪುಂಖವಾಗಿ ವಾಕ್ಕುಗಳು ಪ್ರವಹಿಸವವು. ಆ ಮಾತುಗಳು ಜನರಿಗೆ ನಿಜವಾದ ಶಾಂತಿಸುಖಗಳನ್ನುಂಟು ಮಾಡುವವು. ಸತ್ಯವೂ ಪ್ರಿಯವೂ ಹಿತವೂ ಆಗಿರುವವು. ಹೇಗೆ ವಾಲ್ಮೀಕಿಗಳ ಮುಖದಿಂದ ರಾಮಾಯಣ ಕಾವ್ಯಕ್ಕೆ ಮಂಗಳಶ್ಲೋಕ ರೂಪವಾದ 'ಮಾನಿಷಾದ' ಎಂಬ ಪದ್ಯವು ಹೊರಬಂದಿತೋ ಅದು ಮುಂದೆ ಕರುಣಾರಸಪ್ರಧಾನವಾದ ರಾಮಾಯಣ ಕಾವ್ಯವನ್ನೇ ರಚಿಸಲು

ನಾಂದಿಯಾಯಿತೋ ಚತುರ್ಮುಖಬ್ರಹ್ಮನೇ ಬಂದು ವಾಲ್ಮೀಕಿಗಳಿಗೆ - ತನ್ನ ಪ್ರೇರಣೆಯಿಂದಲೇ ಸರಸ್ವತಿಯು ಋಷಿಗಳ ವದನಾರವಿಂದದಿಂದ ಹೊರ ಬಿದ್ದಿರುವದಾಗಿ ತಿಳಿಸಿದನೋ - ಅಂಥ ಸರಸ್ವತಿಯು ಈ ಮಂತ್ರದಲ್ಲಿ ಸ್ತುತಿಸಲ್ಪಟ್ಟಿರುವಳು. ತಪಃಪ್ರಭಾವವಿಲ್ಲದೆ, ಪುಣ್ಯವಿಶೇಷವಿಲ್ಲದೆ ಇಂಥ ವಾಣಿಯು ಆವಿರ್ಭೂತಳಾಗಲಾರಳು - ಎಂದು ತಿಳಿಯಬೇಕು.

ಈಗ ಮೂರನೆಯ ಮಂತ್ರವನ್ನು ವಿಚಾರಮಾಡೋಣ

(ಉಪನಿಷತ್ತು)

ಓಂ|| ಪಾವಕಾ ನ ಇತಿ ಮಂತ್ರಸ್ಯ । ಮಧುಚ್ಛಂದಾ ಋಷಿಃ । ಗಾಯತ್ರೀ ಛಂದಃ । ಸರಸ್ವತೀ ದೇವತಾ । ಶ್ರೀಮಿತಿ ಬೀಜಶಕ್ತಿಕೀಲಕಮ್ । ಇಷ್ಟಾರ್ಥೇ ವಿನಿಯೋಗಃ । ಮಂತ್ರೇಣ ನ್ಯಾಸಃ ||

ಯಾ ವರ್ಣಪಾದವಾಕ್ಯಾರ್ಥಸ್ವರೂಪೇಣೈವ ವರ್ತತೇ ।
ಅನಾದಿನಿಧನಾನಂತಾ ಸಾ ಮಾಂ ಪಾತು ಸರಸ್ವತೀ ||
ಓಂ || ಶ್ರೀಂ। ಪಾವಕಾ ನಸ್ಸರಸ್ವತೀ ವಾಜೇಭಿರ್ವಾಜಿನೀವತೀ ।
ಯಜ್ಞಂ ವಷ್ಟು ಧಿಯಾ ವಸುಃ ||೩||

ಸ್ವರರಹಿತ ಮಂತ್ರವನ್ನು ಮನನಮಾಡೋಣ. ವರ್ಣ-ಪದ-ವಾಕ್ಯಗಳ ರೂಪದಿಂದ ಶಾರದೆಯು ಜಗತ್ತಿಗೆ ಒಲಿದಿರುವಳು. ಭಾಷೆಗಳಿಗೆಲ್ಲ ವರ್ಣಗಳೇ ಮೂಲವು. ಆದ್ದರಿಂದ ವರ್ಣಗಳನ್ನು ಮಾತೃಕಾವರ್ಣಗಳೆಂದು ಕರೆಯುತ್ತಾರೆ. ಪ್ರಪಂಚದಲ್ಲಿ ಒಟ್ಟು ಎಷ್ಟು ಭಾಷೆಗಳಿವೆಯೋ ಸರಿಯಾಗಿ ತಿಳಿಯದು ಸುಪ್ರಸಿದ್ಧವಾದ ಕೆಲವೇ ಭಾಷೆಗಳನ್ನು ತೆಗೆದುಕೊಂಡಾಗಲೂ ಕೆಲವಕ್ಕೆ ಲಿಪಿಯೇ ಇರುವದಿಲ್ಲ. ಉಚ್ಚಾರಣೆ ಹಾಗೂ ಲಿಪಿಗಳು ಸ್ವತಂತ್ರವಾಗಿ ಉಳ್ಳ ಭಾಷೆಗಳನ್ನು ಪೂರ್ಣಭಾಷೆಯೆಂದು ಕರೆಯೋಣ. ಈ ಭಾಷೆಗಳಿಗೆ ಪರಸ್ಪರ ಸಂಬಂಧವಿದೆ. ಬಹಳಮಟ್ಟಿಗೆ ಎಲ್ಲಾ ಭಾಷೆಗಳಿಗೂ ಸಂಸ್ಕೃತಭಾಷೆಯು ಮೂಲವಾಗಿರುತ್ತದೆ. ಸಂಸ್ಕೃತ ಭಾಷೆಗಳಲ್ಲಿಯೂ ಸಾಹಿತ್ಯಭಾಷೆ, ವೈದಿಕಭಾಷೆಗಳೆಂಬ ಎರಡು ಭಾಗಗಳಿವೆ. ಪ್ರಕೃತ, ವರ್ಣರೂಪಳಾದ ಶಾರದೆಯು ಸಾಹಿತ್ಯರೂಪಳಾಗಿ ಆವಿರ್ಭವಿಸಿದಾಗ ಅವಳ ವಿಸ್ತಾರವನ್ನು ಅರಿತವರೇ ಇಲ್ಲ. ಹಿಂದಿನ ಕಾಲಕ್ಕೂ ಈಗಲೂ ನಾನಾ ಭಾಷೆಗಳಲ್ಲಿ ಪ್ರತಿದಿನವೂ ಸಾಹಿತ್ಯ ರಚನೆಯಾಗುತ್ತಲೆ ಇದೆ ;

ಮುಂದೆಯೂ ಈ ಕಾರ್ಯವು ಅವಿಚ್ಛಿನ್ನವಾಗಿ ನಡೆಯಲಿದೆ. ಹೀಗಿರುವಲ್ಲಿ ಈ ಶಾರದೆಯ ಶಬ್ದಸಂಸಾರದ ತುದಿಯನ್ನು ಯಾವ ಜ್ಞಾಣನೂ ಮುಟ್ಟಲಾರನು. ಹೀಗಿದ್ದೂ ಆಕೆಯ ಸ್ವರೂಪವನ್ನರಿಯಲು ಆಶ್ವಲಾಯನರು ತಿಳಿಸಿರುವ ಉಪಾಯವೇನೆಂದರೆ : ದೇವಿಯ ಮೂಲರೂಪವಾದ ವರ್ಣಗಳನ್ನು ಆಶ್ರಯಿಸಿದಲ್ಲಿ ಸಾಕು. ಅವಳ ಪರಿಚಯವು ಆಗಬಹುದಾಗಿದೆ. ಏಕೆಂದರೆ ವರ್ಣಗಳಿಲ್ಲದೆ ಪದಗಳಿಲ್ಲ. ಪದಗಳಿಲ್ಲದೆ ವಾಕ್ಯಗಳಿಲ್ಲ. ವಾಕ್ಯಗಳಿಲ್ಲದೆ ಸಾಹಿತ್ಯವಿಲ್ಲ. ಹೀಗಿರುವದರಿಂದ ಸಮಸ್ತ ಸಾಹಿತ್ಯರಾಶಿಯೂ ವರ್ಣರೂಪಳಾದ ದೇವಿಯ ವಿಸ್ತಾರವೇ ಆಗಿದೆ. ಆಕೆಯನ್ನು ವರ್ಣ - ಪದ - ವಾಕ್ಯಗಳ ರೂಪದಿಂದ ಯೋಗ್ಯತೆಯಿದ್ದಷ್ಟು ಸಾಧಕನು ಕಂಡುಕೊಳ್ಳಬೇಕು - ಎದು ತಿಳಿಸಿದ್ದಾರೆ. ಮುಂದುವರೆದು ಈಕೆಯು ಅನಾದಿನಿಧನಳು - ಅನಂತಳು - ಎಂದೂ ವಿವರಿಸಿದ್ದಾರೆ. ವಾಕ್ಕೆಂಬುದು ಪರ ಬ್ರಹ್ಮವೇ. ಬ್ರಹ್ಮಕ್ಕೆ ಹೇಗೆ ಹುಟ್ಟಿಲ್ಲವೋ - ನಾಶವಿಲ್ಲವೋ ಹಾಗೆಯೇ ವಾಗ್ದೇವಿಗೂ ಉತ್ಪತ್ತಿನಾಶಗಳಿರುವುದಿಲ್ಲ. ಆದರೆ ದೇವಿಯೆಂಬವಳು ಪರಬ್ರಹ್ಮಕ್ಕಿಂತ ಅನನ್ಯಳೇ ಆಗಿರುವದರಿಂದ ಏಕಮೇವಾ ದ್ವಿತೀಯವಾದ ಬ್ರಹ್ಮತತ್ತ್ವವೇ ಪರಮಾರ್ಥವು ಎಂಬ ಸಿದ್ಧಾಂತಕ್ಕೇನೂ ಹಾನಿಯಿರುವದಿಲ್ಲ. ಸೃಷ್ಟಿಕಾಲಕ್ಕೆ ಈ ದೇವಿಯು ಪರಬ್ರಹ್ಮದ ಶಕ್ತಿಯಾಗಿ ಹೊರ ಬರುತ್ತಾಳೆ. ಪ್ರಲಯದಲ್ಲಿ ಬ್ರಹ್ಮದಲ್ಲಿಯೇ ಒಂದಾಗುತ್ತಾಳೆ. ಆವಿರ್ಭಾವ ತಿರೋಭಾವಗಳು ದೇವಿಯ ಸ್ವರೂಪವನ್ನೇನೂ ಪರಿಣಾಮಗೊಳಿಸಲಾರವು. ಹೀಗೆ ಅದ್ವೈತಳೂ ಬ್ರಹ್ಮದ ಶಕ್ತಿರೂಪಳೂ ಆದ ದೇವೀಸರಸ್ವತಿಯು ನನ್ನನ್ನು ಕಾಪಾಡಲಿ - ಎಂದು ಇಲ್ಲಿ ಪ್ರಾರ್ಥಿಸಲಾಗಿದೆ.

ವಾಗ್ದೇವಿಯು ನಿತ್ಯಳೂ ಪರಬ್ರಹ್ಮರೂಪಳೂ ಆಗಿರುವದು ಹೇಗೆಂಬುದನ್ನು ಶ್ರೀ ಶಂಕರಾಚಾರ್ಯರು ತಮ್ಮ ತೈತ್ತೀರಿಯೋಪನಿಷದ್ಭಾಷ್ಯದಲ್ಲಿ ತಿಳಿಸಿರುವುದನ್ನು ಈಗ ಸ್ವಲ್ಪ ಮನನಮಾಡೋಣ. ಅಲ್ಲಿ ಮನೋಮಯಾತ್ಮನನ್ನು ವರ್ಣನೆಮಾಡುವಾಗ ಅವನಿಗೆ ಯಜುರಾದಿಗಳೇ ತಲೆ - ಮುಂತಾದ ಅವಯವಗಳೆಂದು ವರ್ಣಿಸಿದೆ. ಆ ಸಂದರ್ಭದಲ್ಲಿ ಯಜುಸ್ಸೆಂದು ಒಂದಾನೊಂದು ಸಂಕೇತ ವಿಶಿಷ್ಟವಾದ ಚೈತನ್ಯವನ್ನೇ ಕರೆಯಲಾಗಿದೆಯೆಂದೂ ಇದರಿಂದಲೇ ವೇದನಿತ್ಯತ್ವವು ಸಿದ್ಧವಾಗುವದೆಂದೂ ಆಚಾರ್ಯರು ತಿಳಿಸಿರುತ್ತಾರೆ. ನಿಜವೇನೆಂದರೆ, ವಾಕ್ಕು ಉಚ್ಚಾರಣೆಯಾಗುವ ಮೊದಲು ವಕ್ತೃವಿರಬೇಕು. ವಕ್ತೃವಿಲ್ಲದೆ ವಾಕ್ಕಿರುವದಿಲ್ಲ. ಆದರೆ ವಾಕ್ಕೆಂಬ ಉಪಾಧಿಯಿಂದಲೇ ವಕ್ತೃವು ವಕ್ತೃವೆನಿಸಿರುತ್ತಾನೆಂಬುದೂ

ತತ್ತ್ವವೇ ಆಗಿದೆ. ಹೀಗೆ ವಕ್ತೃವಿನ ಸ್ವರೂಪವನ್ನು ಶೋಧನೆ ಮಾಡಲು ಹೊರಟಾಗ ವಕ್ತೃತ್ವವೆಂಬ ಉಪಾಧಿಯನ್ನು ಕಳಚಿನೋಡಿದರೆ ಅದು ಶುದ್ಧಚೈತನ್ಯವೇ ಆಗಿರುವದು ಅನುಭವಸಿದ್ಧವಾಗಿರುತ್ತದೆ. ಆ ಚೈತನ್ಯವು ಇಲ್ಲವೆಂದು ಎಂದಿಗೂ ಹೇಳಬರುವದಿಲ್ಲ. ಏಕೆಂದರೆ ನಿಸ್ಸಾಕ್ಷಿಕವಾಗಿ ಶೂನ್ಯವೂ ಸಿದ್ಧವಾಗುವಂತಿಲ್ಲ. ಸಾಕ್ಷಿಯಿದ್ದರೆ ಶೂನ್ಯವೆಂಬುದೇ ಹೊಂದುವದಿಲ್ಲ. ಹೀಗೆ ಸ್ವತಃ ಸಿದ್ಧವಾಗಿರುವ ಚೈತನ್ಯವು ಆಯಾ ಸ್ಥಾನ, ನಾದ, ಸ್ವರ, ಪ್ರಯತ್ನ ವಿಶೇಷಗಳಿಂದ ವರ್ಣಗಳಾಗಿ ಆವಿರ್ಭವಿಸಿ ವಿಶ್ವರೂಪವಾಗಿ ತೋರಿಕೊಂಡಿದೆ. ಈ ಚೈತನ್ಯವು ಶಾಶ್ವತವೂ ನಿತ್ಯವೂ ಆಗಿರುತ್ತದೆ. ಇದನ್ನೇ ವಾಕ್ಕೆಂದೂ ಅನಂತರ ಭಾಷೆಯೆಂದೂ , ಮುಂದುವರೆದು ವೇದಾದಿಸಾಹಿತ್ಯಗಳೆಂದೂ ಕರೆಯಲಾಗಿದೆ. ಇಂಥ ನಿತ್ಯಳಾದ ವಾಗ್ದೇವಿಯನ್ನು ಸಾಧಕನು ಸಾಕ್ಷಾತ್ಕಾರಮಾಡಿಕೊಳ್ಳಬೇಕಾಗಿದೆ.

ಈಗ ಮಂತ್ರಾರ್ಥವನ್ನುವಿಚಾರಮಾಡೋಣ. 'ಪಾವಕಾ ನಃ' ಎಂಬ ಮಂತ್ರಕ್ಕೆ ಭಾಷ್ಯಕಾರರು ಹೀಗೆ ಅರ್ಥಮಾಡಿದ್ದಾರೆ : ''ಶೋಧಯಿತ್ರೀಯಾದ ಹಾಗೂ ಅನ್ನವನ್ನು ಕೊಡುವ ಕ್ರಿಯಾರೂಪಳಾದ ಮತ್ತು ಧಿಯಾವಸುಃ ಎಂದರೆ ಐಶ್ವರ್ಯವನ್ನು ಯಜ್ಞಕರ್ಮಗಳ ಫಲವಾಗಿ ಪಡೆದುಕೊಳ್ಳಲು ನಿಮಿತ್ತಳಾದ ಸರಸ್ವತಿಯು ನಮ್ಮ ಯಜ್ಞವನ್ನು ಬಯಸುವವಳಾಗಲಿ'' - ಎಂದು ಭಾವಾರ್ಥವನ್ನು ತಿಳಿಸಿದ್ದಾರೆ. ದೇವಿಯನ್ನು ಪಾವಕಳು (ಶೋಧಯಿತ್ರೀ) ಎಂದು ಕರೆದಿರುವುದೇಕೆಂದರೆ : ಪದ - ವರ್ಣಗಳ ಸ್ಪಷ್ಟವಾದ ಉಚ್ಚಾರಣೆಯು ಭಗವತಿಯ ಪ್ರಸಾದದಿಂದಲೇ ದೊರಕಬೇಕಾಗಿದೆ. ಎಷ್ಟೋ ಜನರಿಗೆ ಶ,ಷ, ಸ- ಎಂಬ ಅಕ್ಷರಗಳು ಸರಿಯಾಗಿ ಬಾಯಲ್ಲಿ ಹೊರಡುವುದಿಲ್ಲ. ಹ ಎಂಬುದನ್ನು ಅ ಎಂದೂ ಅಕಾರವನ್ನು ಹ ಎಂದೂ ಉಚ್ಚರಿಸುತ್ತಾರೆ. ಕನ್ನಡದಲ್ಲಿ ಇಂಥ ಉಚ್ಚಾರಣೆಯನ್ನು 'ಬಾಯಿ ತಿರುಗುವುದಿಲ್ಲ' ಎಂದು ಹೇಳುತ್ತಾರೆ. ಕೆಲವು ವೇಳೆ ಹಲ್ಲುಗಳು ಬಿದ್ದುಹೋದವರಿಗೂ ಸ್ಪಷ್ಟವಾದ ಉಚ್ಚಾರಣೆಯು ಕಷ್ಟವಾದೀತು. ಆದ್ದರಿಂದ ಸರಸ್ವತಿಯನ್ನು (ಮಾತನ್ನು) ಒಲಿಸಿಕೊಳ್ಳುವದು ಸುಲಭಸಾಧ್ಯವಲ್ಲ. ಸಕೃತ್ (ಒಮ್ಮೆ) ಎಂಬ ಶಬ್ದವನ್ನು ಶಕೃತ್ ಎಂದು ಉಚ್ಚರಿಸಿದರೆ ಸಗಣಿ - ಎಂದರ್ಥವಾಗಿ ಬಿಡುತ್ತದೆ. ಹೀಗೆಯೇ ಎಲ್ಲಾ ಭಾಷೆಯಲ್ಲಿಯೂ ಅಕ್ಷರಸ್ಖಾಲಿತ್ಯದಿಂದ ಅಪಾರ್ಥವಾಗುವುದುಂಟು. ಉದಾಹರಣೆಗೆ ಇಂಗ್ಲಿಷ ಭಾಷೆಯ 'ಷೋಕೇಸ್' ಎಂಬುದನ್ನು 'ಷೂಕೇಸ್' ಎಂದು ಉಚ್ಚರಿಸಿದರೆ ಎಷ್ಟು

ಅಪಾರ್ಥವಾಗುತ್ತದೆ ! ನೋಡಿರಿ. ಇರಲಿ. ಅಂತೂ ಯಾವ ಭಾಷೆಯೇ ಆಗಲಿ, ಭಾಷಾಸರಸ್ವತಿಯು ಪಾವಕಳಾಗಿ ಒಲಿಯದೆ ಹೋದರೆ ಬಹಳ ಕಷ್ಟ. ಕನ್ನಡದಲ್ಲಿ ಕೂಡ ಅಕ್ಕಿಯನ್ನು ಹಕ್ಕಿ ಎಂದು ಉಚ್ಚರಿಸಿದರೆ ಅಪಾರ್ಥವಾಗುತ್ತದೆ. ಆದ್ದರಿಂದ ವೈದಿಕ ಸರಸ್ವತಿಯ ಉಚ್ಚಾರಣೆಯನ್ನು ಎಚ್ಚರಿಕೆಯಿಂದ ಮಾಡಬೇಕು. ಹಾಗೆಯೇ ದೇವಿಯು ವಾಜಿನೀವತಿಯಾಗಿ ಪ್ರಸನ್ನಳಾಗಲಿ ಎಂಬುದು ಮತ್ತೊಂದು ಪ್ರಾರ್ಥನೆ ಯಾಗಿದೆ. ಯಜ್ಞದಿಂದ ಪರ್ಜನ್ಯವುಂಟಾಗಿ ಅನಂತರ ಅನ್ನವೃದ್ಧಿಯಾಗುತ್ತದೆ. ಯಜ್ಞಕ್ಕೆ ಮಂತ್ರೋಚ್ಚಾರಣೆಯೇ ಮೂಲವು. ಮಂತ್ರಪಠನವಿಲ್ಲದೆ ಯಾವ ಯಜ್ಞಗಳನ್ನು ತಾನೆ ಮಾಡಲಾದೀತು ? ಕೆಲವರು ದೇವರಿಗೆ ಮಂಗಲಾರತಿ -ಮುಂತಾದ ಉಪಚಾರಗಳನ್ನು ನಡೆಸುವಾಗ ಶಂಖ-ಜಾಗಟೆ - ಘಂಟೆಗಳನ್ನೇ ಅತಿಯಾಗಿ ಬಾರಿಸುತ್ತಾರೆ. ಇದು ಮಂತ್ರಗಳು ಬಾರದುದರ ಗುರುತೇ ಹೊರತು ಭಕ್ತಿಯೆನಿಸುವದಿಲ್ಲ. ಇಂಥ ಗದ್ದಲವು ವಾಗ್ದೇವಿಗೆ ಹಿಡಿಸುವದಿಲ್ಲ. ದೇವಿಯನ್ನು ಮಂತ್ರರೂಪದಿಂದ ಸಾಕ್ಷಾತ್ಕಾರ ಮಾಡಿಕೊಂಡವನಿಗೆ ವೇದೋಚ್ಚಾರಣೆಯು ಮಾತ್ರವೇ ಹಿತವಾಗಿರುತ್ತದೆ. ಹೀಗೆ ಭಗವತಿಯು ವಾಜಿನೀವತಿಯೂ ಆಗಿರುವಳು. ಇಂಥ ದೇವಿಯು ನಮ್ಮ ಯಜ್ಞಗಳನ್ನು ಕಾಮಿಸಲಿ ! ಎಂದರೆ ನಾವು ಮಾಡಲಿರುವ ಕರ್ಮಗಳಲ್ಲಿ ದಯಮಾಡಿ ತನ್ನ ಅನುಗ್ರಹವನ್ನು ಧಾರೆಯಾಗಿ ಹರಿಸಲಿ ಎಂದಭಿಪ್ರಾಯ. ಎಲ್ಲಿ ವಿದ್ಯಾವಂತರ ಹಾಗೂ ವೇದವಿದರ ಗೋಷ್ಠಿಯಿರುವದೋ ಆ ಯಜ್ಞವು ಪವಿತ್ರವಾಗಿದ್ದು ಸರಸ್ವತಿಯ ಸಾನ್ನಿಧ್ಯವುಳ್ಳದ್ದಾಗಿರುವದು. ಆದ್ದರಿಂದ ದೇವಿಯನ್ನು ವಾಗ್ರೂಪಳಾಗಿ ಯಜ್ಞವನ್ನು ಪಾಲಿಸಬೇಕೆಂದು ಈ ಮಂತ್ರದಲ್ಲಿ ಹೇಳಿಕೊಳ್ಳಲಾಗಿದೆ.

(ಉಪನಿಷತ್ತು)

ಓಂ ॥ ಚೋದಯಿತ್ರೀತಿ ಮಂತ್ರಸ್ಯ । ಮಧುಚ್ಛಂದಾ ಋಷಿಃ । ಗಾಯತ್ರೀ ಚ್ಛಂದಃ। ಸರಸ್ವತೀ ದೇವತಾ । ಕ್ಲೂಮಿತಿ ಬೀಜಶಕ್ತಿಕೀಲಕಮ್ । ಇಷ್ಟಾರ್ಥೇ ವಿನಿಯೋಗಃ । ಮಂತ್ರೇಣ ನ್ಯಾಸಃ ॥

ಅಧ್ಯಾತ್ಮಮಧಿದೈವಂ ಚ ದೇವಾನಾಂ ಸಮ್ಯಗೀಶ್ವರೀ ।
ಪ್ರತ್ಯಗಾಂತೇ ವದಂತೀ ಯಾ ಸಾ ಮಾಂ ಪಾತು ಸರಸ್ವತೀ ॥

ಓಂ ॥ ಕ್ಲೂಂ । ಚೋದಯಿತ್ರೀ ಸೂನೃತಾನಾಂ ಚೇತಂತೀ
ಸುಮತೀನಾಮ್ । ಯಜ್ಞಂ ದಧೇ ಸರಸ್ವತೀ ॥ ೪ ॥

ಈಗ ನಾಲ್ಕನೆಯ ಶ್ಲೋಕ ಹಾಗೂ ಮಂತ್ರಗಳನ್ನು ವಿಚಾರಮಾಡ ಬೇಕಾಗಿದೆ. ಋಷಿದೇವತಾಛಂದಸ್ಸುಗಳನ್ನು ಮಂತ್ರದ ಅಂಗವಾಗಿ ತಿಳಿದುಕೊಳ್ಳ ಬೇಕು. ಬೀಜಾಕ್ಷರವು ರಹಸ್ಯವಾದುದರಿಂದ ಅದರಲ್ಲಿ ಇಡಿಯ ಮಂತ್ರಾರ್ಥ ವೆಲ್ಲವೂ ಅಡಗಿದೆಯೆಂದಿಷ್ಟು ಮಾತ್ರ ಹೇಳಬಹುದು. ಶ್ಲೋಕದ ಅಭಿಪ್ರಾಯವನ್ನು ನೋಡೋಣ. ದೇವಿಯನ್ನು ಇಲ್ಲಿ ಅಧ್ಯಾತ್ಮ, ಅಧಿದೈವ ಎಂದು ಎರಡು ಬಹಗೆಯಾಗಿ ಪ್ರಸ್ತಾಪಿಸಲಾಗಿದೆ. ಮತ್ತು ದೇವತೆಗಳಿಗೆಲ್ಲ ಆಕೆಯು ಈಶ್ವರಿಯೆಂದೂ ತಿಳಿಸಲಾಗಿದೆ. ಮುಂದುವರೆದು ಪ್ರತ್ಯಗ್ರೂಪಳೂ ಅದಕ್ಕಿಂತಲೂ ಸೂಕ್ಷ್ಮಳೂ ಆಗಿರುವಳೆಂದು ವರ್ಣಿಸಿದೆ. ಜಗತ್ತನ್ನೆಲ್ಲ ವಿಚಾರಕರು ಅಧ್ಯಾತ್ಮ, ಅಧಿಭೂತ, ಅಧಿದೈವ - ಎಂದು ಮೂರು ಬಗೆಯಾಗಿ ವಿಂಗಡಿಸಿರುತ್ತಾರೆ. ಅಧಿಭೂತವು ಸ್ಥೂಲವೂ. ವಾಗ್ದೇವಿಯು ಅಧಿಭೂತಳಾಗಿ ಕಂಡುಬರುವದಿಲ್ಲ ವಾದರೂ ಜನರು ಆಕೆಯನ್ನು ಪ್ರತಿಮೆ, ಭಾವಚಿತ್ರ, ಗ್ರಂಥಗಳ ರೂಪದಿಂದ ಕಂಡುಕೊಂಡು ಆರಾಧಿಸುತ್ತಾರೆ. ಇದು ಸಹ ತಪ್ಪೇನಲ್ಲ. ಗ್ರಂಥಭಂಡಾರಗಳು, ಮುದ್ರಣಕಲೆ, ಕಾಗದ, ಲೇಖನಸಾಮಗ್ರಿಗಳೇ ಮುಂತಾದವುಗಳನ್ನು ಸರಸ್ವತಿಯೆಂದು ಆರಾಧಿಸಬಹುದು. ಪುಸ್ತಕವನ್ನು ನೆಲದ ಮೇಲೆ ಇಡಬಾರದು ಎಂಬು ನಿಯಮವಿದೆ. ಹಾಗೆಯೇ ಕಾಗದಗಳನ್ನು ಸುಡಬಾರದು, ಕಾಲಿನಲ್ಲಿತುಳಿಯಬಾರದು - ಎಂದೂ ಹಿರಿಯರು ಹೇಳುತ್ತಾರೆ. ಈಗಿನ ಕಾಲಕ್ಕೆ ಇಂಥ ಬೋಧನೆಗಳು ಕಣ್ಮರೆಯಾಗಿವೆ. ವರ್ತಮಾನ ಪತ್ರಿಕೆಗಳಂತೂ ಪ್ರಧಾನವಾಗಿ ಪೊಟ್ಟಣಗಳನ್ನು ಕಟ್ಟುವದಕ್ಕೆ ಉಪಯೋಗವಾಗುತ್ತಿವೆ ; ಇರಲಿ. ಉತ್ತಮವಾದ ಪ್ರಾಸಾದಿಕಗ್ರಂಥಗಳನ್ನಾದರೂ ಗೌರವಿಸುವ ನಡೆಯು ಈಗಿನ ತರುಣರಿಗೆ ಬಂದರೆ ಸಾಕಾಗಿದೆ. ಇನ್ನು ಅಧಿದೈವವಾಗಿ ವಾಗ್ದೇವಿಯು ಬ್ರಹ್ಮನ ಮಹಾರಾಣಿಯೆನಿಸಿ ಪೂಜ್ಯಳಾಗಿದ್ದಾಳೆ. ಆಕೆಯು ಚತುರ್ಭುಜಳೂ, ಹಿಮದಂತೆ ಬಿಳುಪಾದ ಶರೀರವೂ ವಸ್ತ್ರಾದಿಗಳೂ ಉಳ್ಳವಳೂ ವೀಣೆಯನ್ನು ಹಿಡಿದವಳಾಗಿಯೂ ಬೆಳ್ಳನೆಯ ಪದ್ಮದಮೇಲೆ ಕುಳಿತವಳಾಗಿಯೂ ಬ್ರಹ್ಮಾದಿದೇವತೆಗಳಿಂದಲೂ ಪೂಜ್ಯಳೂ ಆಗಿದ್ದಾಳೆ. ಈಕೆಯನ್ನು ಕುರಿತ ವರ್ಣನೆಗಳೂ ಸ್ತುತಿಗಳೂ ಮಹಿಮೆಗಳೂ ಇತರ ವಿವರಗಳೂ ಇತಿಹಾಸ ಪುರಾಣಗಳಲ್ಲಿ ಹೇರಳವಾಗಿವೆ. ಇನ್ನು ಅಧ್ಯಾತ್ಮವಾಗಿ ವಾಗ್ರೂಪಳಾಗಿ ಎಲ್ಲರ ನಾಲಗೆಯಲ್ಲಿಯೂ ನೆಲಸಿರುವದು ಪ್ರಸಿದ್ಧವೇ ಆಗಿದೆ. ದೇವತೆಗಳಿಗೆಲ್ಲ ಇವಳು

ಒಡೆಯಳೆಂದೂ ಇಲ್ಲಿ ತಿಳಿಸಿದೆ. ಎಲ್ಲಾ ದೇವತೆಗಳೂ ವಾಗ್ದೇವಿಯ ಪ್ರಭಾವದಿಂದಲೇ ಪೂಜ್ಯರಾಗಿರುವರು. ಆಯಾ ದೇವತೆಗಳ ಜ್ಞಾನಶಕ್ತಿಯೂ ಬುದ್ಧಿಶಕ್ತಿಯೂ ಈ ಸರಸ್ವತಿಯೇ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಇನ್ನು 'ಪ್ರತ್ಯಗಾಂತೇ ವದಂತೀ ಯಾ' ಎಂಬಿದರ ಅರ್ಥವನ್ನು ತಿಳಿಯೋಣ. ಪ್ರತ್ಯಕ್ ಎಂದರೆ ಒಳಗಿನ ತತ್ತ್ವವು. ಆದರ ಅಂತ ಎಂದರೆ ನಿರ್ಣಯವು. ಎಲ್ಲಕ್ಕೂ ಅಂತ್ಯಂತವಾಗಿ ಒಳಗಿರುವದು ಚಿಚ್ಛಕ್ತಿಯೆನಿಸಿರುವದು. ಚಿತ್ ಎಂದರೆ ಜ್ಞಾನವು. ಆದರೆ ಅದು ಪ್ರತ್ಯಯಾತ್ಮಕವಾದುದಲ್ಲ. ಸ್ವರೂಪ ಭೂತವಾದದ್ದು. ಇಂಥ ಚಿದ್ರೂಪವು ತಾನೇ ಅಂತವಾಗಿರುವ ಎಂದರೆ ಕಡೆಯದಾಗಿರುವ ಶಕ್ತಿತತ್ತ್ವವು ಯಾವದೆಂದರೆ ಅದೇ ಸರಸ್ವತಿಯು- ಎಂದು ಇಲ್ಲಿ ತಿಳಿಸಿದಂತಾಗಿದೆ. ಆದ್ದರಿಂದ ಪರಬ್ರಹ್ಮವನ್ನೇ ಚಿಚ್ಛಕ್ತಿಯೆಂದೂ ಸರಸ್ವತಿಯೆಂದೂ ಬೇರೆಬೇರೆಯ ಹೆಸರುಗಳಿಂದ ಕರೆದಂತೆ ಆಗಿದೆ. ಇಂಥ ದೇವಿಯಾದ ಸರಸ್ವತಿಯು ನನ್ನನ್ನು ಕಾಪಾಡಲಿ ! ಎಂದಭಿಪ್ರಾಯ.

ಈಗ ಮಂತ್ರಾರ್ಥವನ್ನು ವಿಚಾರಮಾಡೋಣ. ಈಕೆಯು ಸೂನೃತಗಳ ಚೋದಯಿತ್ರಿಯು. ಸೂನೃತವೆಂದರೆ ಪ್ರಿಯವಾದ ಮಾತುಗಳು. ಯಾವನೇ ಆಗಲಿ ಒಳ್ಳೆಯ ಮಾತುಗಳನ್ನಾಡಬೇಕಾದರೆ ದೇವಿಯ ಪ್ರೇರಣೆಯು ಬೇಕು. ಹೇಗೆ ವಾಲ್ಮೀಕರಿಗೆ ದೇವಿಯ ಪ್ರೇರಣೆಯಿಂದ ಬಾಯಿಂದ ಹೊರಬಿದ್ದ ಶೋಕಮಯ ವಾದ ಮಾತುಗಳು ಕೂಡ ಶ್ಲೋಕರೂಪವನ್ನು ಹೊಂದಿ ಮುಂದೆ ಅವರು ರಚಿಸಲಿದ್ದ ರಾಮಾಯಣಕಾವ್ಯಕ್ಕೇ ಮಂಗಳಾಶಂಸನವಾಗಿ ಪರಿಣಮಿಸಿತೋ ಹಾಗೆ ಮನುಷ್ಯನ ಬಾಯಿಂದ ಹೊರಬೀಳುವ ಮಾತುಗಳು ಭಗವತಿಯ ಕೃಪೆಯಿಂದ ಸೂನೃತಗಳೆನಿಸುವವು. ಒಳ್ಳೆಯ ಮಾತನ್ನೇ ನಾವು ಆಡುತ್ತಿದ್ದರೆ, ಕೆಟ್ಟಮಾತುಗಳು ನಮಗೆ ಭಾಸವಾಗುವುದೇ ಇಲ್ಲ. ಉದಾರಹಣೆಗೆ ಕೆಲವರಿಗೆ ಬಯ್ಗುಳದ ಮಾತುಗಳೇ ಆಡಲು ಬರುವದಿಲ್ಲ. ಏಕೆಂದರೆ ಅವರಿಗೆ ಆ ದುರುಕ್ತಿಗಳು ಅಪರಿಚಿತವಾಗಿರುತ್ತವೆ. ವಾಗ್ದೇವಿಯು ಅವರನ್ನು ಹಾಗೆ ಕಾಪಾಡಿರುತ್ತಾಳೆ. ಆದ್ದರಿಂದ ಸುಭಾಷಿತಗಳ ಪ್ರೇರಕಳಾದ ದೇವಿಯು ಇಲ್ಲಿ ಸ್ತುತಿಸಲ್ಪಟ್ಟಿರುವಳು. ಹಾಗೆಯೇ ಮುಂದುವರೆದು ಮಂತ್ರವು 'ಚೇತಂತೀ ಸುಮತೀನಾ' ಎಂದು ಹೊಗಳುತ್ತಿದೆ. ದೇವಿಯು ಸದ್ಬುದ್ಧಿಯನ್ನು ಎಚ್ಚರಗೊಳಿಸುವವಳೂ ಆಗಿರುತ್ತಾಳೆ. ಮತ್ತು ಒಳ್ಳೆಯ ಕಾರ್ಯಗಳನ್ನು ಮಾಡುವವರನ್ನು ಕೂಡ ಅನುಗ್ರಹಿಸುತ್ತಾಳೆ.

ಮನುಷ್ಯನ ಮತಿಯು ಒಳ್ಳೆಯ ಹಾಗೂ ಕೆಟ್ಟ ರೀತಿಯದಾಗಿರುವದು ಸಹಜವು. ಏಕೆಂದರೆ ಮನುಷ್ಯಜನ್ಮವೇ ಪಾಪಪುಣ್ಯಗಳ ಫಲವಾಗಿರುತ್ತದೆ. ಆದ್ದರಿಂದ ವಿವೇಕಿಯಾದವನು ದೇವಿಯನ್ನು ಬಳಿಸಾರಿ ತನ್ನ ಬುದ್ಧಿಯನ್ನು ಒಳ್ಳೆಯ ಮಾರ್ಗದಲ್ಲೇ ಪ್ರಚೋದಿಸಬೇಕೆಂದು ಕೇಳಿಕೊಳ್ಳಬೇಕು. ಆಗ ಆಕೆಯು ನಮ್ಮ ಮನಸ್ಸನ್ನು ಸನ್ಮಾರ್ಗದಲ್ಲಿ ಪ್ರೇರಿಸುವಳು.

ಸರಸ್ವತೀದೇವಿಯು ಯಜ್ಞದ ಧಾರಕಳೂ ಆಗಿರುವಳು - ಎಂದು ವೇದವು ಮತ್ತೆ ಹೊಗಳುತ್ತಿದೆ. ಮಂತ್ರಗಳಿಲ್ಲದೆ ಯಜ್ಞವಿಲ್ಲ. ಅವುಗಳೆಲ್ಲ ವಾಗ್ರೂಪವಾಗಿಯೇ ಇರುವವು. ಮಂತ್ರೋಚ್ಚಾರಣೆಯು ದೇವಿಯ ಶರೀರವೆನಿಸುವದು. ವೈಖರೀ ಎಂಬ ತನುವಿನಿಂದ ದೇವಿಯು ಯಜ್ಞಧಾರಕಳಾಗಿರುತ್ತಾಳೆ. ವೇದಮಂತ್ರಗಳ ಉಚ್ಚಾರವನ್ನು ಸರಸ್ವತೀ ಎಂದು ಭಾವಿಸಿದಲ್ಲಿ ಅದೊಂದು ಅಧ್ಯಾತ್ಮ ಸಾಧನವಾಗಲಿದೆ. ಗೀತೆಯಲ್ಲಿ 'ಸ್ವಾಧ್ಯಾಯಾಭ್ಯಸನಂ ಚೈವ ವಾಙ್ಮಯಂ ತಪ ಉಚ್ಯತೇ' - ಎಂದು ವೇದೋಚ್ಚಾರಣೆಯನ್ನು ವಾಙ್ಮಯತಪಸ್ಸೆಂದೇ ಹೊಗಳಿರುತ್ತದೆ. ಹೀಗೆ ವೇದರೂಪಳಾದ ದೇವಿಯು ಯಜ್ಞಗಳನ್ನೆಲ್ಲ ಎಂದರೆ ಪೂಜಾ - ಜಪ - ಹೋಮಾದಿಗಳನ್ನೆಲ್ಲ ನಿರ್ವಹಿಸುತ್ತಿರುವಳು - ಎಂದಭಿಪ್ರಾಯ.

ಈಗ ಐದನೆಯ ಶ್ಲೋಕವನ್ನೂ ಮಂತ್ರವನ್ನೂ ನೋಡೋಣ.

(ಉಪನಿಷತ್ತು)

ಓಂ ॥ ಮಹೋ ಅರ್ಣೇತಿ ಮಂತ್ರಸ್ಯ । ಮಧುಚ್ಛಂದಾ ಋಷಿಃ । ಗಾಯತ್ರೀ ಛಂದಃ । ಸರಸ್ವತೀ ದೇವತಾ । ಸೌರಿತಿ ಬೀಜಶಕ್ತಿಕೀಲಕಮ್ । ಇಷ್ಟಾರ್ಥೇ ವಿನಿಯೋಗಃ । ಮಂತ್ರೇಣ ನ್ಯಾಸಃ ॥

ಅಂತರ್ಯಾಮ್ಯಾತ್ಮನಾ ವಿಶ್ವಂ ತ್ರೈಲೋಕ್ಯಂ ಯಾ ನಿಯಚ್ಛತಿ ।
ರುದ್ರಾದಿತ್ಯಾದಿರೂಪಸ್ಥಾ ಸಾ ಮಾಂ ಪಾತು ಸರಸ್ವತೀ ॥

ಓಂ ॥ ಸೌಃ। ಮಹೋ ಅರ್ಣಃ ಸರಸ್ವತೀ ಪ್ರಚೇತಯತಿ ಕೇತುನಾ ।
ಧಿಯೋ ವಿಶ್ವಾ ವಿರಾಜತಿ ॥ ೫ ॥

ಇಲ್ಲಿ ದೇವಿಯನ್ನು ಅಂತರ್ಯಾಮಿ ರೂಪದಿಂದ ಮೂರು ಲೋಕಗಳನ್ನೂ ನಿಯಮನಮಾಡುವ ಶಕ್ತಿರೂಪಳೆಂದು ವರ್ಣಿಸಿದೆ. ಬೃಹದಾರಣ್ಯಕೋಪನಿಷತ್ತಿ

ನಲ್ಲಿ ಅಂತರ್ಯಾಮಿ ಬ್ರಾಹ್ಮಣವೆಂಬ ಒಂದು ವಿಭಾಗವೇ ಇದೆ. ಅದರಲ್ಲಿ ಅಧ್ಯಾತ್ಮಾಧಿಭೂತ - ಅಧಿದೈವತವಾಗಿ ಹರಡಿಕೊಂಡಿರುವ ಇಡಿಯ ಬ್ರಹ್ಮಾಂಡವನ್ನೆಲ್ಲ ವ್ಯಾಪಿಸಿಕೊಂಡು ಎಲ್ಲವೂ ತನ್ನ ಪ್ರೇರಣೆಯಿಂದ ಮಾತ್ರವೇ ನಡೆಯುವಂತೆ ಸ್ವಾಮ್ಯವನ್ನು ಹೊಂದಿರುವ ಮಹಾಶಕ್ತಿಯನ್ನು ತಿಳಿಸಿಕೊಟ್ಟಿದೆ. ಅದನ್ನು ಆತ್ಮ, ಪರಬ್ರಹ್ಮ, ನಾರಾಯಣಾದಿ ಶಬ್ದಗಳಿಂದ ಬಲ್ಲವರು ವ್ಯಾಖ್ಯಾನ ಮಾಡುತ್ತಾರೆ. ಭಗವದ್ಗೀತೆಯಲ್ಲಿಯೂ ಆ ತತ್ತ್ವವನ್ನು ಈಶ್ವರನೆಂಬ ಶಬ್ದದಿಂದ ಹೆಸರಿಸಿ ಇಡಿಯ ಜಗತ್ತಿನಲ್ಲಿರುವ ಎಲ್ಲಾ ಜೀವರುಗಳನ್ನೂ ಯಂತ್ರದ ಗೊಂಬೆಗಳಂತೆ ಆಟ ಆಡಿಸುವ ಪರಮಶಕ್ತಿಯೇ ಅದು - ಎಂದು ತಿಳಿಸಿದೆ. ಈ ಶಕ್ತಿಯನ್ನೇ ಇಲ್ಲಿ ಸರಸ್ವತಿಯೆಂದು ಕರೆಯಲಾಗಿದೆ. ಅಂತರ್ಯಾಮಿಯ ಪ್ರಶಾಸನವು ಹೇಗಿರುವುದೆಂದರೆ : ಅವನ ಅಪ್ಪಣೆಯಂತೆ ಅಗ್ನಿಯು ಜ್ವಲಿಸುವದು; ಸೂರ್ಯಚಂದ್ರರು ನಡೆಯುವರು ; ಗಾಳಿಯು ಬೀಸುವದು ; ನದಿಗಳು ಹರಿಯುವವು; ಋತ್ವಿಜರು ಯಾಗಮಾಡುವರು ; ಯಜಮಾನನು ಸಂಕಲ್ಪಿಸುವನು - ಇತ್ಯಾದಿ. ಜಗತ್ತಿನಲ್ಲಿ ಅತಿ ದೊಡ್ಡವರೆನಿಸಿದ ಅಗ್ನ್ಯಾದಿದೇವತೆಗಳೇ ಹೀಗೆ ಅಂತಾರ್ಯಮಿಯ ಪ್ರೇರಣೆಗೆ ಒಳಪಟ್ಟು ಜೀವಿಸಿದ್ದಾರೆಂದರಾದರೆ ಇನ್ನುಳಿದವರು ಆ ಮಹಾಶಕ್ತಿಗೆ ಅಧೀನರೆಂದು ಬೇರೆಯಾಗಿ ಹೇಳತಕ್ಕದ್ದೇನಿದೆ ? ಇಂಥ ಮಹಾಶಕ್ತಿದೇವಿಯೇ ಸರಸ್ವತಿಯು - ಎಂದಭಿಪ್ರಾಯವು.

ಇನ್ನು ದೇವಿಯು ರುದ್ರನೇ ಮುಂತಾದ ದೇವತೆಗಳ ರೂಪದಲ್ಲಿಯೂ ತಾನೇ ಇದ್ದುಕೊಂಡಿರುವಳೆಂಬುದೂ ಆಕೆಯ ಮಹಿಮೆಯನ್ನೇ ಪ್ರಕಟಿಸುತ್ತದೆ. ಲಲಿತಾಸಹಸ್ರ ನಾಮಾವಳಿಯಲ್ಲಿ ದೇವಿಯನ್ನು ಸೃಷ್ಟಿಕರ್ತ್ರೀ, ಬ್ರಹ್ಮರೂಪಾ, ಗೋಪ್ತ್ರೀ, ಗೋವಿಂದರೂಪಿಣಿ, ಸಂಹಾರಿಣಿ, ರುದ್ರರೂಪಾ - ಎಂಬುದಾಗಿ ತ್ರಿಮೂರ್ತಿಗಳ ನಾಮಗಳಿಂದಲೂ ಅವರ ಕಾರ್ಯಗಳಾದ ಉತ್ಪತ್ತಿಸ್ಥಿತಿಲಯ - ಕ್ರಿಯೆಗಳನ್ನು ಪ್ರಕಟಿಸುವ ಹೆಸರುಗಳಿಂದಲೂ ಸ್ತುತಿಸಲಾಗಿದೆ. ಆದ್ದರಿಂದ ರುದ್ರನೇ ಮುಂತಾದ ದೇವತೆಗಳಲ್ಲಿ ಅಡಗಿರುವ ಶಕ್ತಿಗಳ ರೂಪದಿಂದಲೂ ದೇವಿಯು ಲೋಕಪ್ರಸಿದ್ಧಳಾಗಿರುತ್ತಾಳೆ. ಆದಿತ್ಯ ಚಂದ್ರಾದಿಗಳ ರೂಪದಿಂದ ಜಗತ್ತೆಲ್ಲವನ್ನೂ ಬೆಳಗುತ್ತಿದ್ದಾಳೆ. ಹೀಗೆ ಲೋಕಪೂಜ್ಯಳೂ, ಅಂತರ್ಯಾಮಿ ರೂಪಳೂ ಆದ ದೇವಿಯು ನನ್ನನ್ನು ಕಾಪಾಡಲಿ - ಎಂದು ಸ್ತುತಿಸಿದೆ.

ಅಂತರ್ಯಾಮಿತತ್ತ್ವವು ನಮಗೆ ಮನವರಿಕೆಯಾಗಬೇಕಾದರೆ ಉಪನಿಷತ್ತಿನ ವಿವರಣೆಗಳನ್ನು ಅನುಸಂಧಾನಮಾಡಬೇಕು. ಇತಿಹಾಸಪುರಾಣ ಗಳಿಂದಲೂ ಇದು ಸ್ಪಷ್ಟವಾದೀತು. ಹೇಗೆಂದರೆ : ಅರ್ಜುನನು ಯುದ್ಧ ಮಾಡುವದಿಲ್ಲವೆಂದು ತಾನು ಸಂಕಲ್ಪಿಸಿಕೊಂಡಿದ್ದನಾದರೂ ಸಾಧ್ಯವಾಗಲಿಲ್ಲ. ಧರ್ಮ ಯುದ್ಧವನ್ನು ಕೈಗೊಳ್ಳಲೇ ಬೇಕಾಯಿತು. ಹಾಗೆಯೇ ಧರ್ಮರಾಜನಿಗೆ ಜೂಜಾಡುವದು ಸರಿಯಲ್ಲವೆಂದು ತಿಳಿದಿದ್ದರೂ ಆಡಿ ಸೋತನು. ಹೀಗೆಲ್ಲ ಮಹಾತ್ಮರು ಕೂಡ ಸ್ವತಂತ್ರರಾಗಿ ವರ್ತಿಸಲಾರದೆ ಇರುವಲ್ಲಿ ಉಳಿದವರ ಪಾಡೇನು ? ಇದಕ್ಕಿಂತಲೂ ಹೆಚ್ಚಾಗಿ ಮಾನವನ ಶರೀರೇಂದ್ರಿಯ ಮನೋಬುದ್ಧಿಗಳ ವ್ಯಾಪಾರವೆಲ್ಲವೂ ಅಂತರ್ಯಾಮಿಯ ಅಧೀನವಾಗಿಯೇ ನಡೆಯುತ್ತಿರುವದು. ಪ್ರಾಣಿಗಳಿಗೆ ಉಂಟಾಗುವ ಬುದ್ಧಿ, ಜ್ಞಾನ, ಕ್ಷಮೆ, ಸತ್ಯ - ಮುಂತಾದ ಸಮಸ್ತ ಭಾವಗಳೂ ನನ್ನಿಂದಲೇ - ಎಂದು ಭಗವಂತನು ಗೀತೆಯಲ್ಲಿ ತಿಳಿಸಿರುತ್ತಾನೆ. ಈಗಲೂ ಯಾರೊಬ್ಬರೂ ಈಶ್ವರಚಿತ್ತಕ್ಕೆ ವಿರುದ್ಧವಾಗಿ ನಡೆಯಲಾಗುವದಿಲ್ಲ. 'ಹರಿ ಚಿತ್ತ ಸತ್ಯ' ಎಂಬಿದರ ಅರ್ಥವೇ ಇದು. ಆದ್ದರಿಂದ ಅಂತಾರ್ಯಮಿಯಾಗಿ ತ್ರಿಮೂರ್ತಿಗಳ ಹಾಗೂ ಎಲ್ಲಾ ದೇವತೆಗಳ ರೂಪದಿಂದ ಎಲ್ಲರನ್ನೂ ಆಳುತ್ತಿರುವ ಸರಸ್ವತಿಯು ತಾನೊಬ್ಬಳೇ ಸ್ವತಂತ್ರಳು - ಎಂದು ತಿಳಿಯಬೇಕು.

ಈಗ ಮಂತ್ರಾರ್ಥವನ್ನು ವಿಚಾರಮಾಡೋಣ : ಈ ಮಂತ್ರವು ಶ್ಲೋಕ ಪ್ರತಿಪಾದ್ಯವಾದ ಅಂತರ್ಯಾಮಿ ತತ್ತ್ವವನ್ನು ಸೂಕ್ಷ್ಮವಾಗಿ ವಿವರಿಸುತ್ತದೆ. ಆದರೂ ಉಪನಿಷತ್ತಿನಲ್ಲಿ ಇದನ್ನು ಸರಸ್ವತೀತತ್ತ್ವ ಪ್ರತಿಪಾದಕವೆಂಬ ಕಾರಣದಿಂದ ಸ್ವೀಕರಿಸಿದೆ. ಭಾಷ್ಯಕಾರರಾದ ಸಾಯಣಾಚಾರ್ಯರು 'ಮಹೋ ಅರ್ಣಃ' ಎಂಬೀ ಮಂತ್ರಕ್ಕೆ ಹೀಗೆ ವಿವರಣೆಯನ್ನು ನೀಡಿರುತ್ತಾರೆ. ಸರಸ್ವತೀರೂಪವು ಎರಡು ವಿಧವಾಗಿದೆ. ವಿಗ್ರಹ ಎಂದರೆ ಶರೀರವುಳ್ಳ ರೂಪವು ಒಂದು. ಇದು ಪ್ರಸಿದ್ಧವಾಗಿದೆ. ಸರಸ್ವತಿಯ ಭಾವಚಿತ್ರವನ್ನು ಎಲ್ಲರೂ ನೋಡಿಯೇ ಇದ್ದಾರೆ. ಈ ವಿಗ್ರಹವುಳ್ಳ ದೇವತಾರೂಪವು ಮೊದಲನೆಯದು. ಇನ್ನು ಸರಸ್ವತೀನದಿ - ಎಂಬಿದನ್ನು ಕೇಳಿದ್ದೀರಲ್ಲವೇ ? ಆಕೆಯು ಯಾವದೋ ಶಾಪ ನಿಮಿತ್ತವಾಗಿ ಗುಪ್ತಗಾಮಿನಿಯಾಗಿ ಹರಿಯುತ್ತಿರುವಳೆಂದೂ ಪ್ರಯಾಗ (ಅಲಹಾಬಾದ್)ದಲ್ಲಿ ಸರಸ್ವತಿಯೂ ಸೇರಿ ಗಂಗಾಯಮುನೆಯೊಡನೆ ತ್ರಿವೇಣಿ ಸಂಗಮ ವಾಗಿದೆಯೆಂದೂ ಪುರಾಣಪ್ರಸಿದ್ಧಿಯಿದೆ. ಆದರೆ ವೇದಗಳ ಕಾಲಕ್ಕೆ ಸರಸ್ವತಿಯು

ನದೀರೂಪದಿಂದ ಪ್ರತ್ಯಕ್ಷಗಾಮಿನಿಯೇ ಆಗಿದ್ದಳೆಂದು ಗೊತ್ತಾಗುತ್ತದೆ. ಏಕೆಂದರೆ ಈ ಮಂತ್ರದಲ್ಲಿ ನದೀರೂಪಳಾದ ಸರಸ್ವತಿಯನ್ನು ಸ್ತುತಿಸಿ ಪ್ರಾರ್ಥಿಸಲಾಗಿದೆ. ಇಂಥ ಜಲರೂಪಳಾದ ಸರಸ್ವತಿಯು ಮಹತ್ತಾದ ಅರ್ಣವೆಂದರೆ ಉದಕವನ್ನು ಧರಿಸಿ ನಮ್ಮನ್ನು ಹೆಚ್ಚಾಗಿ ಶಕ್ತಿವಂತರನ್ನಾಗಿ ಮಾಡಲಿ ! ಎಂದರ್ಥ. ನೀರು ಯಾವಾಗಲೂ ಕರ್ಮಪ್ರೇರಕವು. ಹೇಗೆಂದರೆ ಸ್ವಚ್ಛವಾದ ತಿಳಿಯಾದ ನೀರನ್ನು ಕಂಡರೆ ಆಸ್ತಿಕರಾದವರಿಗೆ 'ಸ್ನಾನಮಾಡೋಣ, ಆಹ್ನಿಕ- ಪಿತೃತರ್ಪಣಾದಿಗಳನ್ನು ಅನುಷ್ಠಿಸೋಣ' - ಎಂಬ ಶ್ರದ್ಧೆಯುಂಟಾಗುವದು. ಹೀಗೆ ನದೀರೂಪಳಾಗಿ ಕರ್ಮಾನುಷ್ಠಾನ ಪ್ರೇರಣೆಯಿಂದ ನಮ್ಮನ್ನನುಗ್ರಹಿಸಲಿ - ಎಂದರ್ಥ. ಮತ್ತು ವಿಶ್ವಾ-ಧಿಯಃ ಎಂದರೆ ಕರ್ಮಗಳನ್ನು ಅನುಷ್ಠಿಸುವ ಎಲ್ಲಾ ಕರ್ತೃಗಳ ಬುದ್ಧಿಯನ್ನೂ ತನ್ನ ಅಂತರ್ಯಾಮಿರೂಪದಿಂದ ವಿರಾಜತಿ - ವಿಶೇಷವಾಗಿ ಬೆಳಗುವವಳಾಗಲಿ ! ಯಾವಾಗಲೂ ನಾವು ಸತ್ಕರ್ಮಾನುಷ್ಠಾನತತ್ಪರರಾಗಿರುವಂತೆ ದಯಪಾಲಿಸಲಿ - ಎಂದಭಿಪ್ರಾಯ.

(ಉಪನಿಷತ್ತು)

ಓಂ ॥ ಚತ್ವಾರಿ ವಾಗಿತಿ ಮಂತ್ರಸ್ಯ । ಉಚಥ್ಯಪುತ್ರ ಋಷಿಃ । ತ್ರಿಷ್ಟುಪ್ ಛಂದಃ । ಸರಸ್ವತೀ ದೇವತಾ । ಐಮಿತಿ ಬೀಜಶಕ್ತಿಕೀಲಕಂ । ಇಷ್ಟಾರ್ಥೇ ವಿನಿಯೋಗಃ । ಮಂತ್ರೇಣ ನ್ಯಾಸಃ ॥

ಯಾ ಪ್ರತ್ಯಗ್‌ದೃಷ್ಟಿಭಿರ್ಜೀವೈರ್ವ್ಯಜ್ಯಮಾನಾನುಭೂಯತೇ ।
ವ್ಯಾಪಿನೀ ಜ್ಞಪ್ತಿರೂಪೈಕಾ ಸಾ ಮಾಂ ಪಾತು ಸರಸ್ವತೀ ॥

**ಓಂ ॥ ಐಂ। ಚತ್ವಾರಿ ವಾಕ್ ಪರಿಮಿತಾ ಪದಾನಿ ತಾನಿ ವಿದುರ್ಬ್ರಾ-**
**ಹ್ಮಣಾ ಯೇ ಮನೀಷಿಣಃ । ಗುಹಾ ತ್ರೀಣಿ ನಿಹಿತಾ ನೇಂಗ-**
**ಯಂತಿ ತುರೀಯಂ ವಾಚೋ ಮನುಷ್ಯಾ ವದಂತಿ ॥ ೬॥**

ಈಗ ಆರನೆಯ ಮಂತ್ರ ಹಾಗೂ ಶ್ಲೋಕಗಳನ್ನು ವಿಚಾರಮಾಡೋಣ.

ಇಲ್ಲಿ ಸರಸ್ವತಿಯನ್ನು ಜ್ಞಪ್ತಿಸ್ವರೂಪಳೆಂದು ಕರೆದಿದೆ. ಜ್ಞಾನಶಬ್ದವನ್ನು ಭಾವಪ್ರಧಾನವಾಗಿ ಬಳಸಿದಾಗ ಜ್ಞಪ್ತಿ ಎಂದಾಗುತ್ತದೆ. 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಎಂಬ ಉಪನಿಷದ್ವಾಕ್ಯಕ್ಕೆ ವ್ಯಾಖ್ಯಾನ ಮಾಡುವಾಗ ಶ್ರೀ ಶಂಕರಾಚಾರ್ಯರು ಜ್ಞಾನಶಬ್ದವನ್ನು ಭಾವಪ್ರಧಾನವಾಗಿಯೇ ಅರ್ಥಮಾಡಿದ್ದಾರೆ. ಏಕೆಂದರೆ ಜ್ಞಾನ

ಶಬ್ದಕ್ಕೆ ಜ್ಞಾನಕರ್ತೃ ಎಂದೂ ಅರ್ಥವಾಗುವ ಸಂಭವವಿದೆ. ಹಾಗಾದರೆ ಜ್ಞಾನದ ಬರುವಿಕೆ - ಅಗಲುವಿಕೆಗಳಿಂದ ವಸ್ತುವಿನಲ್ಲಿ ವಿಕಾರವಾಗುವ ಅವಕಾಶವಿದೆ. ಇದರಿಂದ ಬ್ರಹ್ಮವು ಅನಿತ್ಯವೆನಿಸಿಬಿಡುವದು. ಈ ದೋಷ ಪರಿಹಾರಕ್ಕಾಗಿ ಬ್ರಹ್ಮವು ಜ್ಞಾನಸ್ವರೂಪವೇ, ಕೇವಲ ಅರಿವು ಮಾತ್ರವೇ, ಅದರಲ್ಲಿ ಕಾರಕವ್ಯಾಪಾರಗಳಿಲ್ಲ - ಎಂದು ಅಲ್ಲಿ ತಿಳಿಸಿದೆ. ಅದೇ ಅಭಿಪ್ರಾಯದಿಂದ ಇಲ್ಲಿಯೂ ಸರಸ್ವತಿಯನ್ನು ಜ್ಞಪ್ತಿರೂಪಳೆಂದು ಹೊಗಳಿದೆ. ಆದರೆ ಈ ದೇವಿಯು ಜೀವರುಗಳ ಅನುಭವದಲ್ಲಿ ಕಂಡು ಬಂದಿದ್ದಾಳೆಯೇ ? ಎಂದರೆ ಎಲ್ಲಾ ಜೀವರುಗಳಿಗೂ ಈ ಸ್ವರೂಪವು ಸರಿಸಮಾನವಾಗಿದ್ದರೂ ಇದನ್ನು ಅರ್ಥ ಮಾಡಿಕೊಂಡಿರುವವರಿಗೆ ಮಾತ್ರವೇ ದೇವಿಯ ಜ್ಞಾನತತ್ತ್ವವು ಗೋಚರವಾಗಿರುವುದು. ಇಂಥವರನ್ನು ಪ್ರತ್ಯಗ್ ದೃಷ್ಟಿಯ ಜೀವರುಗಳೆಂದು ಇಲ್ಲಿ ಕರೆದಿದೆ. ಪ್ರತ್ಯಗ್ ದೃಷ್ಟಿ ಎಂದರೆ ಒಳಗಡೆಗೆ ನೋಡುವಿಕೆ ಎಂದರ್ಥ. ಇಂದ್ರಿಯಗಳನ್ನು ಕೊರೆದು ಜೋಡಿಸಿರುವ ಬ್ರಹ್ಮನು ಅವುಗಳನ್ನು ಹೊರಮುಖವಾಗಿಯೇ ವ್ಯಾಪಾರಮಾಡುವಂತೆ ಏರ್ಪಡಿಸಿರುವದು ನಿಜ. ಆದ್ದರಿಂದಲೇ ಜೀವರೆಲ್ಲರೂ ಪರಾಗ್ದೃಷ್ಟಿಯುಳ್ಳವ ರಾಗಿರುತ್ತಾರೆ. ಆದರೆ ಪುಣ್ಯವಶದಿಂದ ಯಾವನೋ ಒಬ್ಬ ಧೀರನು ಒಳದೃಷ್ಟಿಯುಳ್ಳವನಾಗಿರುವನು. ಅಂಥವನಿಗೆ ಜ್ಞಪ್ತಿರೂಪಳಾದ ದೇವಿಯ ದರ್ಶನವು ದೊರೆತು ಅಮೃತನಾಗುವನು. ಈ ದೇವಿಯು ಇಂಥ ಒಳದೃಷ್ಟಿಯ ಜೀವರ ಅನುಭವದಲ್ಲಿ ಕಂಡುಬರುತ್ತಾಳೆ. ಉಳಿದವರಿಗೂ ಆಕೆಯೇ ಆತ್ಮಳಾಗಿದ್ದರೂ ಉಪಯೋಗವಿಲ್ಲ. ಜ್ಞಾನಾಜ್ಞಾನಗಳೇ ಇದಕ್ಕೆ ಕಾರಣ. ಹೇಗೆಂದರೆ ನಮ್ಮ ಜೇಬಿನಲ್ಲಿಯೇ ಹಣವು ಇದ್ದರೂ ಅದನ್ನು ಇಟ್ಟದ್ದು ಮರೆತುಹೋಗಿದ್ದರೆ ಹೇಗೆ ಉಪಯೋಗಕ್ಕೆ ಬರಲಾರದೋ ಹಾಗೆ ದೇವಿಯನ್ನು ಜ್ಞಾನದಿಂದ ಕಂಡುಕೊಳ್ಳದೇ ಇದ್ದರೆ ಅಮೃತತ್ವವು ದೊರೆಯುವದಿಲ್ಲ - ಎಂದು ಇಲ್ಲಿ ತಿಳಿಸಿದಂತಾಗಿದೆ.

ಇಲ್ಲಿ ಜ್ಞಾನ - ಜ್ಞಪ್ತಿಗಳ ತಾರತಮ್ಯವನ್ನು ನಾವು ತಿಳಿದುಕೊಳ್ಳಬೇಕು. ಜ್ಞಾನವು ಪ್ರತ್ಯಯರೂಪವಾಗಿದ್ದು ಯಾವಾಗಲೂ ಜ್ಞಾತೃವಿಗೆ ಅಧೀನವಾಗಿರುವದು. ಇದಕ್ಕೆ ಉತ್ಪತ್ತಿವಿನಾಶಗಳುಂಟು. ಆದರೆ ಸೂರ್ಯನ ಬಿಸಿಲು, ಬೆಂಕಿಯ ಶಾಖ - ಎಂದಂತೆ ಸ್ವರೂಪವೇ ಆಗಿರುವ ಜ್ಞಪ್ತಿಯು ಸರಸ್ವತೀತತ್ತ್ವಕ್ಕಿಂತ ಬೇರೆಯಲ್ಲ. ಅದು ಅವಳೇ ಆಗಿದೆ. ಅವಳೆಂಬುದು ಆತ್ಮನೇ (ತಾನೇ)ಆಗಿದೆ. ಹಾಗೆಂತ ತಿಳಿದಾಗ ದೇವಿಯ ಜ್ಞಪ್ತಿರೂಪದಲ್ಲಿ ನಾವು ನೆಲೆನಿಲ್ಲುವೆವು.

ಈಗ ಮಂತ್ರಾರ್ಥವನ್ನು ವಿಚಾರಮಾಡೋಣ. ಈ ಉಪನಿಷತ್ತಿನಲ್ಲಿ ಈ ಮಂತ್ರಕ್ಕೆ ಉಚಥ್ಯಪುತ್ರನೇಋಷಿಯೆಂದು ಹೇಳಿದೆ. ಸಾಯಣಭಾಷ್ಯಕಾರರು ದೀರ್ಘತಮನೆಂಬ ಋಷಿಯನ್ನು ನಿರ್ದೇಶಿಸಿದ್ದಾರೆ. ಆದ್ದರಿಂದ ಉಚಥ್ಯಪುತ್ರನಾದ ದೀರ್ಘತಮನೆಂಬ ಋಷಿಯು ಮಂತ್ರ ದ್ರಷ್ಟಾರನೆಂದು ಭಾವಿಸಬಹುದು. ಮಂತ್ರಪ್ರತಿಪಾದ್ಯಳಾದ ದೇವತೆಯು ಸರಸ್ವತಿಯು. ಆಕೆಯನ್ನು ಇಲ್ಲಿ ವಾಗ್ರೂಪಳಾಗಿ ಸ್ತುತಿಸಲಾಗಿದೆ. ಐಂ ಎಂಬಿದು ಬೀಜಾಕ್ಷರವು. ಈಗ ವಾಕ್ಕೆಂಬುದನ್ನೇ ದೇವಿಯೆಂದು ಭಾವಿಸಿ ಆಕೆಯ ಸ್ವರೂಪವನ್ನು ವರ್ಣಿಸಲಾಗುವದು. ಈ ಮಂತ್ರಕ್ಕೆ ಬಹಳ ಜನರು ಬೇರೆಬೇರೆಯ, ತಮ್ಮ ತಮ್ಮ ಮತಕ್ಕೆ ತಕ್ಕ ಅರ್ಥವನ್ನು ಕೊಟ್ಟಿರುತ್ತಾರೆಂದು ತಿಳಿಸಿರುವ ವೇದಭಾಷ್ಯಕಾರರು ತಮ್ಮ ವ್ಯಾಖ್ಯಾನದಲ್ಲಿ ಏಳು ಅರ್ಥಗಳನ್ನು ವಿವರಿಸಿದ್ದಾರೆ. ಅವುಗಳು ಹೀಗಿವೆ.

೧) **ವೇದವಿದರಾದವರ** ಅಭಿಪ್ರಾಯದಂತೆ ಈ ಅರ್ಥವಾಗುತ್ತದೆ. ಲೋಕದಲ್ಲಿ ಪ್ರಸಿದ್ಧವಾಗಿರುವ ವಾಕ್ಕು ನಾಲ್ಕು ವಿಧವಾಗಿದೆ. ಅದರ ಮೂರು ರೂಪಗಳು ರಹಸ್ಯವಾಗಿರುವವು. ನಾಲ್ಕನೆಯದನ್ನು ಮಾತ್ರ ಮನುಷ್ಯರು ಬಳಸುತ್ತಾರೆ. ಮನುಷ್ಯರಲ್ಲಿಯೂ ತತ್ತ್ವವನ್ನು ತಿಳಿದವರೂ ತಿಳಿಯದವರೂ ಎಲ್ಲರೂ ಉಪಯೋಗಿಸುವ ವಾಕ್ಕೇ ನಾಲ್ಕನೆಯದು - ಎಂದರ್ಥ. ಆ ನಾಲ್ಕು ಯಾವವೆಂಬುದರ ವಿಷಯದಲ್ಲಿ ಅಭಿಪ್ರಾಯಭೇದಗಳಿವೆ. ವೇದಜ್ಞರು ಈ ನಾಲ್ಕನ್ನು ಭೂಃ, ಭುವ, ಸುವಃ, **ಓಂ** - ಎಂಬಿವು ಎಂದು ಗುರುತಿಸುತ್ತಾರೆ. ಅಥವಾ ಅಕಾರ, ಉಕಾರ, ಮಕಾರ - ಓಂಕಾರಗಳೆಂದೂ ಹೇಳುತ್ತಾರೆ. ಈ ಎರಡು ಪ್ರಭೇದಗಳಲ್ಲಿಯೇ ಎಲ್ಲಾ ವಾಕ್ಪ್ರಪಂಚವೂ ಅಡಕವಾಗಿದೆ - ಎಂಬುದು ಮೊದಲನೆಯ ಅರ್ಥ. ಈ ವ್ಯಾಖ್ಯಾನದಲ್ಲಿ ನಾಲ್ಕನೆಯ (ತುರೀಯ)ದಾದ ಓಂ ಎಂಬಿದು ಎರಡು ಪಕ್ಷಗಳಲ್ಲಿಯೂ ಒಂದೇ ಆಗಿರುತ್ತದೆ. ಭೂರಾದಿತ್ರಯಗಳಲ್ಲಿ ಈ ಲೋಕ,ಅಂತರಿಕ್ಷ, ದ್ಯುಲೋಕಗಳೂ, ಅಗ್ನಿ, ವಾಯು, ಆದಿತ್ಯರೆಂಬ ದೇವತೆಗಳೂ, ಋಗ್ವೇದ, ಯಜುರ್ವೇದ, ಸಾಮವೇದಗಳೂ, ಪ್ರಾಣಾಪಾನವ್ಯಾನಗಳೂ ಅಡಕವಾಗಿರುವವೆಂದು ತೈತ್ತೀರಿಯೋಪನಿಷತ್ತಿನಲ್ಲಿದೆ. ಅನಂತರ ಮಹಃ ಎಂಬ ಹೆಸರಿನ ಓಂಕಾರದಲ್ಲಿ ಆದಿತ್ಯ, ಚಂದ್ರ, ಬ್ರಹ್ಮ, ಅನ್ನಗಳು ಅಡಕವಾಗಿರುವು - ಎಂದೂ ಅಲ್ಲಿ ಹೇಳಿದೆ. ಹೀಗೆ ವಾಕ್ಕಿನ ಮೊದಲನೆಯ ಮೂರು ತತ್ತ್ವಗಳು ಗುಹೆಯಲ್ಲಿವೆ - ಎಂದರೆ ಇವುಗಳ ಅರ್ಥವು ಜನರಿಗೆ ತಿಳಿಯದೆ ಇದೆ ಎಂದರ್ಥ. ಮತ್ತು ಅಕಾರ - ಉಕಾರ - ಮಕಾರಗಳಲ್ಲಿ

ಎಚ್ಚರಕನಸುನಿದ್ರೆಗಳೆಂಬ ಅವಸ್ಥೆಗಳೂ ವಿಶ್ವತೈಜಸಪ್ರಾಜ್ಞರೆಂಬ ಆತ್ಮರುಗಳೂ ಅಡಕವಾಗಿರುತ್ತಾರೆ. ತುರೀಯವು ಮಾತ್ರ ಅವ್ಯವಹಾರ್ಯವಾಗಿದ್ದರೂ ಎಲ್ಲರ ಆತ್ಮನಾಗಿರುವದರಿಂದ ಸಾಮಾನ್ಯವಾಗಿ ಪ್ರಸಿದ್ಧವಾಗಿದೆ. ಹೀಗೆ ವಾಗ್ದೇವಿಯು ತುರೀಯಳೇ ಆಗಿರುವಳು. ಅವಳನ್ನು ಬಲ್ಲವರೂ ಹಾಗೂ ಅರಿಯದವರು ಸಹ 'ವಾಕ್' ಎಂದೇ ಕರೆಯುವರು - ಎಂಬುದು ಒಂದಭಿಪ್ರಾಯ.

೨) **ವ್ಯಾಕರಣಮತಾನುಸಾರಿಗಳಾದರೋ** 'ಚತ್ವಾರಿ ವಾಕ್' ಎಂಬುದನ್ನು ಹೀಗೆ ವಿವರಿಸುತ್ತಾರೆ : ನಾಮಪದ-ಕ್ರಿಯಾಪದ - ಉಪಸರ್ಗ - ನಿಪಾತಗಳೆಂಬಿವೇ ಈ ನಾಲ್ಕು ಎಂದು ಅವರ ಅಭಿಪ್ರಾಯ. ನಾಮಪದವು ದ್ರವ್ಯ ಪ್ರಧಾನವು. ಕ್ರಿಯಾಪದವು ಕ್ರಿಯಾಪ್ರಧಾನವು. ಕ್ರಿಯಾಪದಕ್ಕೆ ಮೊದಲು ಜೋಡಿಸುವ 'ಪ್ರಾದಿ' ಶಬ್ದಗಳೇ ಉಪಸರ್ಗಗಳು. ಅವ್ಯಯಗಳೇ (ಬದಲಾಗದ ರೂಪವುಳ್ಳವುಗಳೇ) ನಿಪಾತಗಳು. ಇಷ್ಟರಲ್ಲಿ ವಾಕ್ಪ್ರಪಂಚವೆಲ್ಲ ಅಡಕವಾಗಿದೆ. ಅಖಂಡವಾದ ವಾಕ್ಕು ಹೀಗೆ ನಾಲ್ಕು ಬಗೆಯಾಗಿ ವ್ಯಾಕರಣಮಾಡಲ್ಪಟ್ಟು ಇಂದ್ರನಿಂದ ವ್ಯಕ್ತಗೊಳಿಸಲ್ಪಟ್ಟಿತು. ಅದನ್ನೇ ಜನರು ಆಡುಮಾತಾಗಿ ಬಳಸುತ್ತಾರೆ. ವಾಕ್ಕಿನ ನಾಲ್ಕು ರೂಪಗಳ ರಹಸ್ಯವನ್ನಾಗಲೀ, ವಿಂಗಡವನ್ನಾಗಲೀ ಜನರು ಹೆಚ್ಚಾಗಿ ತಿಳಿಯರು. ಅವು ಗುಹೆಗಳಲ್ಲಿರುವ ಪದಾರ್ಥದಂತೆ ಗೋಪ್ಯವಾಗಿವೆ - ಎಂದು ವೈಯಾಕರಣರು ವ್ಯಾಖ್ಯಾನಮಾಡುತ್ತಾರೆ.

೩) ಇನ್ನು **ಯಾಜ್ಞಿಕರು** ಮಂತ್ರ-ಕಲ್ಪ-ಬ್ರಾಹ್ಮಣ- ಲೌಕಿಕಶಬ್ದ ಎಂದು ನಾಲ್ಕನ್ನು ಗುರುತಿಸುತ್ತಾರೆ. ಯಜ್ಞಗಳಲ್ಲಿ ಬಳಸುವ ದೇವತಾಸ್ತೋತ್ರ ವಿಶೇಷರೂಪವಾದವುಗಳು ಮಂತ್ರಗಳು. ಕಲ್ಪಗಳು ಅನಂತರ ಬರುವ ವಿನಿಯೋಗಮಂತ್ರಗಳು. ಬ್ರಾಹ್ಮಣಗಳೆಂದರೆ ವೇದಮಂತ್ರಗಳ ತಾತ್ಪರ್ಯವನ್ನು ಪ್ರಕಾಶನಗೊಳಿಸುವ ಭಾಗಗಳು. ಇನ್ನು ಲೌಕಿಕವಾಕ್ಕು ಭೋಗವಿಷಯವಾದದ್ದು. ಹಸುವನ್ನು ತೆಗೆದುಕೊಂಡು ಬಾ - ಮುಂತಾದ ರೂಪದವು. ಇವುಗಳಲ್ಲಿ ಮೊದಲನೆಯ ಮೂರು ರಹಸ್ಯವಾಗಿರುವವು - ಎಂದರೆ ಬಲ್ಲವರಿಂದಲೇ ತಿಳಿಯಬೇಕು - ಎಂದಭಿಪ್ರಾಯ. ಲೌಕಿಕವಾಕ್ಕು ಸುಪ್ರಸಿದ್ಧವು ಎಂದು ಯಾಜ್ಞಿಕರ ವ್ಯಾಖ್ಯಾನವು.

೪) **ನೈರುಕ್ತರು** ಋಗ್ವೇದ - ಯಜುರ್ವೇದ - ಸಾಮವೇದ - ಲೌಕಿಕವಾದ ಭಾಷೆ ಇವೇ ನಾಲ್ಕೆಂದು ಅಭಿಪ್ರಾಯಪಡುವರು. ಇವುಗಳಲ್ಲಿ ವೇದಗಳು ರಹಸ್ಯವಾಗಿದ್ದು ಲೌಕಿಕಭಾಷಾರೂಪವಾದ ವಾಕ್ಕು ಮಾತ್ರ ಪ್ರಸಿದ್ಧವಾಗಿದೆ - ಎನ್ನುವರು.

೫) **ಐತಿಹಾಸಿಕರು** ಹಾವುಗಳು, ಹಕ್ಕಿಗಳು, ಪ್ರಾಣಿಗಳು, ಮನುಷ್ಯರು ಬಳಸುವ ವಾಕ್ಕೇ ನಾಲ್ಕು - ಎಂದೂ ಇವುಗಳಲ್ಲಿ ಮೊದಲನೆಯ ಮೂರು ಅಪ್ರಸಿದ್ಧವೆಂದೂ ಮನುಷ್ಯವಾಕ್ಕು ಸ್ಪಷ್ಟವೂ ಭಾಷಾತ್ಮಕವೂ ಆಗಿದ್ದು ಸಾಹಿತ್ಯರೂಪದಲ್ಲಿ ವ್ಯಕ್ತವೆಂದೂ ಅಭಿಪ್ರಾಯಪಡುತ್ತಾರೆ.

೬) **ಆತ್ಮವಾದಿಗಳು** ( ಗ್ರಾಮ್ಯ) ಪಶುಗಳ ಭಾಷೆ, ಬಿಲ್ಲಿನ ಹಗ್ಗ ಅಥವಾ ವೀಣೆ ಮುಂತಾದ ವಾದ್ಯಗಳ ಧ್ವನಿ, (ಆರಣ್ಯ) ಮೃಗಗಳ ಭಾಷೆ , ಮನುಷ್ಯರು ಬಳಸುವ ವರ್ಣರೂಪವಾದ ಭಾಷೆ - ಇವೇ ನಾಲ್ಕೆಂದು ಹೇಳುವರು. ಇವುಗಳಲ್ಲಿ ಮೊದಲಿನ ಮೂರು ಗೋಪ್ಯವಾಗಿರುವವೆಂದು ಅವರ ಅಭಿಪ್ರಾಯವು.

೭) ಇನ್ನು **ಮಾಂತ್ರಿಕರು** ಹೇಳುವ ಅರ್ಥವೇನೆಂದರೆ : ವಾಕ್ಕಿಗೆ ಪರಾ - ಪಶ್ಯಂತೀ - ಮಧ್ಯಮಾ - ವೈಖರೀ ಎಂಬ ನಾಲ್ಕು ರೂಪಗಳಿವೆ. ಮೂಲಾಧಾರ ಚಕ್ರದಿಂದ ಹೊರಟಿರುವ ನಾದಾತ್ಮಕವಾದ ಒಂದೇ ಬಗೆಯಾದ ವಾಕ್ಕು ಪರಾ ಎನಿಸುತ್ತದೆ. ನಾದವು ಅತಿಸೂಕ್ಷ್ಮವಾಗಿದ್ದು ನಿರೂಪಣೆಗೆ ಸಿಗದೆ ಇರುವದರಿಂದ ಅದೇ ಹೃದಯವನ್ನು ಹೊಕ್ಕಾಗ ಪಶ್ಯಂತೀ ಎನಿಸುವದು. ಅದೇ ವಾಕ್ಕು ಬುದ್ಧಿಯನ್ನು ಹೊಕ್ಕಾಗ ಯೋಗಿಗಳಿಂದ ಮಾತ್ರ ಕಂಡುಕೊಳ್ಳಲು ಶಕ್ಯವಾಗುವದರಿಂದ ಮಧ್ಯಮಾ ಎನಿಸುವದು. ಇನ್ನು ಅದೇ ವಾಕ್ಕು ಬಾಯಿಯಿಂದ ಉಚ್ಚರಿಸಲ್ಪಡುವಾಗ ಕಂಠ, ದವಡೆ, ತಲೆ, ಹಲ್ಲು, ತುಟಿ, ಮೂಗುಗಳ ಮೂಲಕ ಹೊರಬಿದ್ದು ಕಿವಿಗೆ ಕೇಳಿಸುವಂತೆ ವ್ಯಕ್ತರೂಪವನ್ನು ಯಾವಾಗ ಹೊಂದುವದೋ ಅದೇ ವೈಖರೀ ಎನಿಸುತ್ತದೆ. ಹೀಗೆ ನಾಲ್ಕು ವಾಕ್ಕಿನ ರೂಪಗಳಲ್ಲಿ ಮೊದಲನೆಯ ಮೂರನ್ನು ಪ್ರಾಕೃತರು ತಿಳಿಯಲಾರರು. ಮನೀಷಿಗಳಾದ ಬ್ರಾಹ್ಮಣರು ಎಂದರೆ ಅಂತಃಕರಣವನ್ನು ಶಮದಮಾದಿಸಾಧನಗಳಿಂದ ಗೆದ್ದು ಸ್ವಾಧೀನಪಡಿಸಿ ಕೊಂಡಿರುವ ಮಹನೀಯರು, ಶಬ್ದ ಬ್ರಹ್ಮವನ್ನು ಬಲ್ಲವರು - ಎಂದರೆ ಯೋಗಿಗಳು ಪರಾ ಮುಂತಾದ ಮೂರನ್ನೂ ಬಲ್ಲವರಾಗಿರುವರು. ಇವು ಹೃದಯದೊಳಗೇ ಇದ್ದು ಕೊಂಡಿರುವದರಿಂದ ವಾಗ್ದೇವೀ ಉಪಾಸಕರಾದವರಿಗೆ

ಮಾತ್ರ ತಿಳಿದಿರುವವು. ಸಾಮಾನ್ಯ ಮನುಷ್ಯರಾದರೊ, ವೈಖರೀವಾಕ್ಕನ್ನು ಮಾತ್ರ ಬಳಸುವರು - ಎಂದು ತಿಳಿಸುತ್ತಾರೆ.

ಈ ರೀತಿಯಾಗಿ ಏಳು ಅಭಿಪ್ರಾಯಗಳನ್ನು ನೀಡಿರುವ ಸಾಯಣ ಭಾಷ್ಯಕಾರರು ತಮ್ಮ ಮತವು ಯಾವದೆಂಬುದನ್ನು ತಿಳಿಸಿದಂತಿಲ್ಲ. ಬಹಳ ಮಟ್ಟಿಗೆ ಮಾಂತ್ರಿಕರ ಮತವೇ ಈ ಮಂತ್ರಾರ್ಥವೆಂದು ಹೇಳಬಹುದು. ಉಳಿದ ಮತಗಳೂ ಗ್ರಾಹ್ಯವಾಗಿಯೇ ಕಂಡುಬರುತ್ತವೆ. ಈಗಿನ ವಿಜ್ಞಾನ ಶಾಸ್ತ್ರದ ಶೋಧನೆಗಳ ಫಲವಾಗಿ ವಾಕ್ಕನ್ನು ವಾಯುವಿನ ತರಂಗಗಳಾಗಿ ಮಾರ್ಪಡಿಸಿ ಆಕಾಶದಲ್ಲಿ ತೇಲಿಬಿಟ್ಟು ಪುನಃ ರೇಡಿಯೋ ಯಂತ್ರದ ಸಹಾಯದಿಂದ ಆ ತಂರಗಗಳನ್ನು ಶಬ್ದತರಂಗಗಳಾಗಿ ಮಾರ್ಪಡಿಸಿ ಕಿವಿಗೆ ಕೇಳುವಂತೆ ಏರ್ಪಡಿಸಿರುವದು, ಟೇಪುಗಳಲ್ಲಿಯೂ ಪ್ಲೇಟುಗಳಲ್ಲಿಯೂ ಶಬ್ದತರಂಗಗಳನ್ನು ಅಡಗಿಸಿಟ್ಟು ಮತ್ತೆ ಪ್ರಾದುರ್ಭಾವಗೊಳಿಸುವದು ಸಹ ಸರ್ವ ಸಾಮಾನ್ಯವಾಗಿದೆ. ಆದರೂ ವಾಗ್ದೇವಿಯ ಸಾಕ್ಷಾತ್ಕಾರವು ವಿಜ್ಞಾನಿಗಳಿಗೆ ಆಗಿದೆ - ಎಂದು ಹೇಳಲು ಬರುವದಿಲ್ಲ. ಇದಕ್ಕೆ ಕಾರಣವೇನೆಂದರೆ ಎಂದಿನಂತೆ ಅವರು ಶಬ್ದವನ್ನು ಅಚೇತನವಾಗಿಯೇ ನೋಡಿ ಅದರ ಗುಣವಿಶೇಷಗಳನ್ನು ಅರಿತಿರುವದು. ವೈದಿಕರಾದರೋ ಹಾಗಲ್ಲ. ಅವರು ಶಬ್ದಮೂಲವಾದ ಚೇತನವು ವ್ಯವಹಾರಕಾಲಕ್ಕೆ ಶಬ್ದವಾಗಿಯೂ ಶಬ್ದಗ್ರಾಹಕ ಇಂದ್ರಿಯವಾಗಿಯೂ ತೋರಿಕೊಂಡಮೇಲೂ ತಾನು ತಾನಾಗಿಯೇ ಉಳಿದು ಎಲ್ಲ ಶಬ್ದ ಪ್ರಪಂಚಕ್ಕೂ ಪ್ರೇರಕವಾಗಿರುತ್ತದೆ. ಅದೇ ಸರಸ್ವತಿಯು ಎಂಬ ಅಧ್ಯಾತ್ಮಿಕನಿಲುವನ್ನು ತಾಳಿದ್ದಾರೆ. ಆದ್ದರಿಂದಲೇ ಋಷಿದೃಷ್ಟವಾದ ವೈದಿಕಮಂತ್ರಗಳ ಅರ್ಥವನ್ನು ಆಧ್ಯಾತ್ಮಿಕ ದೃಷ್ಟಿಯಿಂದ ಕಂಡುಕೊಳ್ಳುವದೇ ತಾತ್ಪರ್ಯಗ್ರಹಣಕ್ಕೆ ಯೋಗ್ಯವಾದ ಮಾರ್ಗವೆಂದು ಬಲ್ಲವರು ಹೇಳುತ್ತಾರೆ. ಹೀಗೆ ಸರಸ್ವತಿಯು ವೈಖರೀವಾಗ್ರೂಪ ದಿಂದ ಇಲ್ಲಿ ಸ್ತುತಿಸಲ್ಪಟ್ಟಿರುವಳು. ಲಲಿತಾ ಅಷ್ಟೋತ್ತರಶತನಾಮಾವಳಿಗಳಲ್ಲಿ ಒಂದಾದ '**ಅಕಾರಾದಿಕ್ಷಕಾರಾಂತ ವೈಖರೀವಾಕ್ ಸ್ವರೂಪಿಣ್ಯೈ ನಮಃ**' ಎಂಬ ನಾಮದಲ್ಲಿಯೂ ಈ ಅಭಿಪ್ರಾಯಗಳು ಅಂತರ್ಗತವಾಗಿವೆ - ಎಂದು ತಿಳಿಯಬೇಕು.

(ಉಪನಿಷತ್ತು)

ಓಂ|| ಯದ್ವಾಗ್ವದಂತೀತಿ ಮಂತ್ರಸ್ಯ । ಭಾರ್ಗವಋಷಿಃ । ತ್ರಿಷ್ಟುಪ್ ಛಂದಃ । ಸರಸ್ವತೀ ದೇವತಾ । ಕ್ಲೀಮಿತಿ ಬೀಜಶಕ್ತಿಕೀಲಕಮ್ । ಇಷ್ಟಾರ್ಥೇ ವಿನಿಯೋಗಃ । ಮಂತ್ರೇಣ ನ್ಯಾಸಃ ||

ನಾಮಾಜಾತ್ಯಾದಿಭಿರ್ಭೇದೈರಷ್ಟಧಾ ಯಾ ವಿಕಲ್ಪಿತಾ
ನಿರ್ವಿಕಲ್ಪಾತ್ಮನಾऽವ್ಯಕ್ತಾ ಸಾ ಮಾಂ ಪಾತು ಸರಸ್ವತೀ ||

ಓಂ|| ಕ್ಲೀಂ। ಯದ್ವಾಗ್ವದಂತ್ಯವಿಚೇತನಾನಿ ರಾಷ್ಟ್ರೀ ದೇವಾನಾಂ
ನಿಷಸಾದ ಮಂದ್ರಾ। ಚತಸ್ರ ಊರ್ಜಂ ದುದುಹೇ
ಪಯಾಂಸಿ ಕ್ವ ಸ್ವಿದಸ್ಯಾಃ ಪರಮಂ ಜಗಾಮ ||೭||

ಈಗ ಏಳನೆಯ ಮಂತ್ರ ಹಾಗೂ ಶ್ಲೋಕಗಳನ್ನು ವಿಚಾರಮಾಡೋಣ. ದೇವಿಯು ನಾಮಜಾತ್ಯಾದಿವಿಶೇಷರಹಿತಳಾಗಿದ್ದು ವ್ಯವಹಾರದಲ್ಲಿ ಹಾಗೆ ವಿಕಲ್ಪಿಸಲ್ಪಟ್ಟಿರುವಳೆಂದು ಶ್ಲೋಕದಲ್ಲಿ ತಿಳಿಸಿದೆ. ಲೋಕದಲ್ಲಿರುವ ಪ್ರತಿಯೊಂದು ವಸ್ತುವಿಗೂ ನಾಮಾದಿ ಎಂಟು ರೀತಿಯ ವಿಶೇಷಗಳಿರುವವು. ಈ ಎಂಟು ಯಾವವೆಂದು ಇಲ್ಲಿ ಶ್ಲೋಕದಲ್ಲಿ ಹೇಳಿರುವಂತೆ ಕಾಣಲಿಲ್ಲ. ಆದರೂ ನಿರ್ವಿಶೇಷಬ್ರಹ್ಮವನ್ನು ವ್ಯಾಖ್ಯಾನ ಮಾಡುವಾಗ ಶ್ರೀಶಂಕರಾಚಾರ್ಯರು 'ಶಬ್ದಪ್ರವೃತ್ತಿಹೇತುಜಾತ್ಯಾದಿಧರ್ಮ ರಹಿತತ್ವಾತ್' ಎಂದು ಒಂದು ಕಡೆ ಬರೆದಿದ್ದಾರೆ. ಅದರಂತೆ ನಿರ್ವಿಶೇಷ ವಸ್ತುವಿನಲ್ಲಿ ಶಬ್ದಪ್ರಯೋಗಕ್ಕೆ ಅಗತ್ಯವಾದ ಜಾತ್ಯಾದಿಗಳು ಇರುವದಿಲ್ಲ - ಎಂಬಿದು ಈ ವಾಕ್ಯದ ಅರ್ಥ. ಆದ್ದರಿಂದ ವಸ್ತು ನಿರ್ದೇಶನವು ಸಾಮಾನ್ಯವಾಗಿ ನಾಮ, ರೂಪ, ಜಾತಿ, ಗುಣ, ಕಾಲ, ದೇಶ, ಕಾರ್ಯ, ಕಾರಣ, - ಎಂಬೀ ಎಂಟು ವಿಶೇಷಗಳಿಂದ ಆಗುತ್ತದೆ -ಎನ್ನಬಹುದು. ಬ್ರಹ್ಮದಲ್ಲಿ ಈ ಎಂಟೂ ಇರುವದಿಲ್ಲ. ಹಾಗೆಯೇ ಸರಸ್ವತಿಯೂ ನಿರ್ವಿಶೇಷ ತತ್ತ್ವಸ್ವರೂಪಳೇ ಆದ್ದರಿಂದ ಈ ಎಂಟು ವಿಶೇಷಗಳೂ ಆಕೆಯಲ್ಲಿಲ್ಲವಾದರೂ ಅಜ್ಞರು ಅವೆಲ್ಲವನ್ನೂ ಆಕೆಯಲ್ಲಿ ಕಲ್ಪಿಸಿದ್ದಾರೆ - ಎಂದಭಿಪ್ರಾಯ. ಇಂಥ ದೇವಿಯು ಪರಮಾರ್ಥವಾಗಿ ನಿರ್ವಿಕಲ್ಪಳೇ ಸರಿ -ಎಂದು ತಿಳಿಯಬೇಕು. ವ್ಯಾವಹಾರಿಕ ವಸ್ತುವಿಗಾದರೆ ಈ ಎಂಟನ್ನೂ ನಿರ್ದೇಶಿಸಬಹುದಾಗಿದೆ. ಹೇಗೆಂದರೆ ಒಂದು ಮಡಕೆಯನ್ನು ತೆಗೆದುಕೊಳ್ಳೋಣ. ಅದಕ್ಕೆ ಮಡಕೆ - ಎಂಬ ಹೆಸರು. ದುಂಡನೆಯ ಆಕಾರವೆಂಬ ರೂಪ, ಘಟತ್ವ - ಎಂಬ ಸಾಮಾನ್ಯ ಅಥವಾ ಜಾತಿ,

ಕಪ್ಪು ಅಥವಾ ಕೆಂಪು ಬಣ್ಣ (ಗುಣ) ಇಂಥ ದಿನಗಳಲ್ಲಿ, ಇಂಥ ಜಾಗದಲ್ಲಿತ್ತು - ಎಂಬ ಕಾಲದೇಶಗಳು, ಅದು ನೀರನ್ನು ತರಲು ಬರುತ್ತದೆ ಎಂಬ ಕಾರ್ಯ ನಿರ್ದೇಶ, ಅದು ಮಣ್ಣಿನಿಂದಾಗಿದೆ - ಎಂಬ ಕಾರಣನಿರ್ದೇಶ - ಹೀಗೆ ಎಲ್ಲವನ್ನೂ ಹೇಳಬಹುದು. ಆದರೆ ಸರಸ್ವತೀ ತತ್ತ್ವವನ್ನು ಹಾಗೆ ನಿರ್ದೇಶಿಸಲಾಗುವದಿಲ್ಲ. ಒಂದು ವೇಳೆ ನಿರ್ದೇಶಿಸಲಿಚ್ಛಿಸಿದರೆ ಎಲ್ಲ ರೀತಿಯಿಂದಲೂ ಅದು, ಅದು - ಎಂದೇ ವಿಕಲ್ಪಿಸಬೇಕಾಗುವದು. ಹೀಗೆ ಯಾವ ವಸ್ತುವು ನಾಮಜಾತ್ಯಾದಿ ಭೇದಗಳಿಂದ ವಿಕಲ್ಪಿಸಲ್ಪಟ್ಟಿರುವ ತಾನೊಂದೆ ಆಗಿದ್ದು ವಿಕಲ್ಪಗಳನ್ನೆಲ್ಲಾ ಮೀರಿ ನಿಂತಿರುವದೋ ಅದೇ ಸರಸ್ವತೀತತ್ತ್ವವು, ಅಂಥ ದೇವಿಯು ನನ್ನನ್ನು ಕಾಪಾಡಲಿ ಎಂಬಿದು ಶ್ಲೋಕಾರ್ಥವು.

ಈಗ ಮಂತ್ರಾರ್ಥವನ್ನು ನೋಡೋಣ. ಈ ಮಂತ್ರಕ್ಕೆ ಭೃಗು ಗೋತ್ರೋತ್ಪನ್ನನಾದ ನೇಮನೆಂಬುವನು ಋಷಿಯು. ಇಲ್ಲಿಯೂ ವಾಗ್ದೇವಿಯ ಮಹಿಮೆಯನ್ನು ಹೊಗಳಲಾಗಿದೆ. ವಾಕ್ಕೆಂಬುದು ರಾಷ್ಟ್ರೀ ಎಂದರೆ ವಿರಾಜಮಾನವಾದದ್ದಾಗಿದೆ. ಮತ್ತು ದೇವತೆಗಳನ್ನು ಉಬ್ಬಿಸತಕ್ಕದ್ದಾಗಿದೆ. ಏಕೆಂದರೆ ಮಾತುಗಳಿಂದ ಸ್ತುತಿಸಿದರೆ ದೇವತೆಗಳು ಹರ್ಷಗೊಳ್ಳುವರು. ಹೀಗೆ ವಾಕ್ಕು ದೇವತೆಗಳನ್ನು ಪ್ರೇರಿಸುವಾಗ ಅವಿಚೇತನವಾದ - ಎಂದರೆ ತಿಳಿಯದೆ ಇದ್ದ ಮಹಿಮೆಗಳನ್ನು ಹೇಳುತ್ತಾ ಎಂದರೆ ನೆನಪುಮಾಡಿಕೊಡುತ್ತಾ ಯಜ್ಞದಲ್ಲಿ ನಿಷಸಾದ = ಸೇರಿಕೊಂಡು ಕುಳಿತಿದೆ. ದೇವತೆಗಳಿಗೆ ಅವರರವರ ಮಹಿಮೆ ಏನೆಂಬುದು ತಿಳಿದಿರುವದಿಲ್ಲ. ಹೇಗೆ ರಾಮಾಯಣದ ಕಥೆಯಲ್ಲಿ ಹನುಮಂತನಿಗೆ ಅವನ ಮಹಿಮಾಸಾಮರ್ಥ್ಯಗಳು ತಿಳಿದಿರಲಿಲ್ಲವೋ ಜಾಂಬುವಂತನು ಹೇಳಿದ ಮೇಲೆ ಗೊತ್ತಾಯಿತೋ, ಶ್ರೀರಾಮನಿಗೆ ಕೂಡ ತಾನು ಯಾರೆಂಬುದು ತಿಳಿಯದೆ ಇದ್ದು ಬ್ರಹ್ಮನು ಸ್ತುತಿಮಾಡಿದಾಗ ತಾನೇ ನಾರಾಯಣನೆಂದು ತಿಳಿಯಿತೋ ಈ ಕಾರ್ಯಗಳೆಲ್ಲವೂ ಸ್ತುತಿವಾಕ್ಕಿನಿಂದಲೇ ಆಗಿರುವದು ದಿಟವೋ ಹಾಗೆಯೇ ದೇವತೆಗಳಿಗೂ ಯಜ್ಞದ ಕಾಲಕ್ಕೆ ಅವರ ಮಹಿಮೆಗಳನ್ನು ಸ್ತೋತ್ರ ಮಾಡುವ ಮೂಲಕ ವಾಕ್ಕು ವಿವರಿಸುತ್ತದೆ. ಆಗ ದೇವತೆಗಳು ಹರ್ಷದಿಂದ ಉಬ್ಬುತ್ತಾರೆ. ಹೀಗೆ ಸಂತುಷ್ಟರಾದ ದೇವತೆಗಳು ಯಜಮಾನನಿಗೆ ಅನ್ನೋದಕಗಳೆಂಬ ಐಹಿಕ ಫಲಗಳನ್ನು ನೀಡುತ್ತಾರೆ. ಇದಕ್ಕೆ ವಾಕ್ಕು ನಿಮಿತ್ತವಾದ್ದರಿಂದ ಅದೇ ನಾಲ್ಕು ದಿಕ್ಕುಗಳಲ್ಲಿಯೂ ಅನ್ನ, ಹಾಗೂ ಅದಕ್ಕೆ ಕಾರಣವಾದ ನೀರು - ಇವುಗಳನ್ನು ದುದುಹೇ = ಕರೆದು ಸುರಿಸಿದಂತಾಗಿದೆ. ಇಂಥ ವಾಕ್ಕಿನ ಪರಮಶ್ರೇಷ್ಠತೆಯನ್ನು

ಎಲ್ಲಿ ಕಾಣಲಾದೀತು ? ಎಂದು ಈ ಮಂತ್ರದ ಅಭಿಪ್ರಾಯ. ವೈಖರೀತತ್ತ್ವವಾದ ವಾಕ್ಕು ಲೌಕಿಕ ಭಾಷಾರೂಪದಲ್ಲಿ ಗೋಚರವಾಯಿತು. ಈ ವೈದಿಕವಾದ ದೈವೀವಾಕ್ಕೆನಿಸಿದ ಮಧ್ಯಮಾ - ಎಂಬ ರೂಪದ ವಾಕ್ಕಾದರೊ, ಪರಮವಾಗಿಯೇ ಇದ್ದುಕೊಂಡಿದೆ. ಇದನ್ನು ಋಷಿಗಳಲ್ಲದವರು ಹೇಗೆತಾನೆ ತಿಳಿದಾರು? ಎಂದು ಅಭಿಪ್ರಾಯ. ವೇದರೂಪವಾದ ವಾಕ್ಕನ್ನು ಬಾಯಲ್ಲಿ ಉಚ್ಚರಿಸಬಹುದಾದರೂ ಉಳಿದವರು ಕೇಳಬಹುದಾದರೂ ಅದರ ಅರ್ಥಗ್ರಹಣವು ಎಷ್ಟು ಜನರಿಗೆ ಆದೀತು ? ಈಗಿನ ಕಾಲಕ್ಕೆ ಸ್ವರಾಕ್ಷರಲೋಪವಿಲ್ಲದೆ ಸ್ವಚ್ಛವಾಗಿ ಶುದ್ಧವಾಗಿ ವೇದವನ್ನು ಪಠಿಸುವದೇ ಒಂದು ಪವಾಡವಾಗಿದೆ. ಹಾಗೆ ಪಠಿಸಿದಮೇಲೂ ಬಹಳ ಜನರು ಕೇಳಿಸಿಕೊಂಡರೂ ಅರ್ಥವು ಯಾರ ಮನಸ್ಸನ್ನೂ ಹೊಕ್ಕಿರುವದಿಲ್ಲ. ಹೀಗೆ ವಾಗ್ದೇವಿಯ ರಹಸ್ಯವು 'ಕ್ವ' ಎಲ್ಲಿದೆ ? ಎಂಬುದು ವಿಚಾರಣೀಯವಾಗಿಯೇ ಉಳಿದುಕೊಂಡಿದೆ. ಇಂಥ ದೇವಿಯನ್ನು ನಾವು ಕಂಡುಕೊಳ್ಳಲು ಪ್ರಯತ್ನಿಸಬೇಕು.

(ಉಪನಿಷತ್ತು)

ಓಂ॥ ದೇವೀಂ ವಾಚಮಿತ್ಯಸ್ಯ ಮಂತ್ರಸ್ಯ । ಭಾರ್ಗವ ಋಷಿಃ । ತ್ರಿಷ್ಟುಪ್ ಛಂದಃ। ಸರಸ್ವತೀ ದೇವತಾ । ಸೌರಿತಿ ಬೀಜಶಕ್ತಿಕೀಲಕಮ್ । ಇಷ್ಟಾರ್ಥೇ ವಿನಿಯೋಗಃ । ಮಂತ್ರೇಣ ನ್ಯಾಸಃ ॥

ವ್ಯಕ್ತಾವ್ಯಕ್ತಗಿರಃ ಸರ್ವೇ ವೇದಾದ್ಯಾ ವ್ಯಾಹರಂತಿ ಯಾಮ್ ।
ಸರ್ವಕಾಮದುಘಾ ಧೇನುಃ ಸಾ ಮಾಂ ಪಾತು ಸರಸ್ವತೀ ॥

ಓಂ ॥ ಸೌಃ। ದೇವೀಂ ವಾಚಮಜನಯನ್ತ ದೇವಾಸ್ತಾಂ ವಿಶ್ವರೂಪಾಃ
ಪಶವೋ ವದಂತಿ। ಸಾ ನೋ ಮಂದ್ರೇಷಮೂರ್ಜಂ
ದುಹಾನಾ ಧೇನುರ್ವಾಗಸ್ಮಾನುಪಸುಷ್ಟುತೈತು ॥ ೮ ॥

ಈಗ ಎಂಟನೆಯ ಶ್ಲೋಕವನ್ನೂ, ಮಂತ್ರವನ್ನೂ ವಿಚಾರಮಾಡೋಣ. ವೇದವಾಕ್ಕುಗಳೆಲ್ಲವೂ ಪ್ರತ್ಯಕ್ಷವಾಗಿಯೋ ಪರಂಪರೆಯಿಂದಲೋ ಆ ದೇವಿಯನ್ನೇ ಹೇಳುತ್ತವೆ - ಎಂದು ಇಲ್ಲಿ ತಿಳಿಸಲಾಗಿದೆ. ಉಪನಿಷತ್ತಿನಲ್ಲಿ ಒಂದುಕಡೆ ''ಎಲ್ಲಾ ವೇದಗಳೂ ಯಾವ ಪದವಿಯನ್ನು ತಿಳಿಸುವವೋ '' ಎಂದು ಹೇಳಿದೆ. ಆದ್ದರಿಂದ ವೇದಮಂತ್ರಗಳು ಬೇರೆಬೇರೆಯ ದೇವತಾವಾಚಕಗಳಾಗಿ ವ್ಯಕ್ತವಾಗಿ ಕಂಡರೂ

ಅಂತರ್ಯದಲ್ಲಿ ಪರಂಪರೆಯಿಂದ ಚಿಚ್ಛಕ್ತಿರೂಪಳಾದ ಭಗವತಿಯನ್ನೇ ಹೇಳುತ್ತೇವೆ. ಹೇಗೆಂದರೆ : ಇಂದ್ರ, ಮಿತ್ರ, ವರುಣ, ಅಗ್ನಿ - ಮುಂತಾದ ದೇವತಾಪರವಾದ ಸ್ತೋತ್ರಗಳೂ ಋಕ್ಕುಗಳೂ ಇರುವದು ನಿಜ. ಇವುಗಳನ್ನು ಉಪಯೋಗಿಸಿಕೊಂಡು ಕರ್ಮಿಗಳು ಬೇರೆಬೇರೆಯ ದೇವತೆಗಳನ್ನು ಕುರಿತು ತಮ್ಮ ಇಷ್ಟಾರ್ಥಸಿದ್ಧಿಗಾಗಿ ಯಾಗಗಳನ್ನು ಕೈಗೊಳ್ಳುವದೂ ಸರಿಯೇ. ಆದರೆ ವೇದಮಂತ್ರಗಳಿಗೆ ಅಷ್ಟೇ ತಾತ್ಪರ್ಯವೆಂದು ತಿಳಿಯಬಾರದು. ಅವುಗಳು ತಮ್ಮ ಮೂಲವಾದ ಪರಮಾತ್ಮವಸ್ತುವನ್ನು ಹೇಳುವವರೆಗೂ ಪ್ರವರ್ತಿಸುತ್ತವೆ. ಏಕೆಂದರೆ ಉಪಾಧಿವಿಶೇಷದಿಂದ ಇಂದ್ರಾದಿದೇವತೆಗಳೆನಿಸಿರುವ ಭಿನ್ನಭಿನ್ನ ದೇವತೆಗಳು ನಿಜವಾಗಿ ತಮ್ಮೊಳಗೆ ಅಡಗಿರುವ ಪರಮಚೈತನ್ಯಕ್ಕಿಂತ ಬೇರೆಯವರಲ್ಲ. ಎಲ್ಲಾ ದೇವತೆಗಳನ್ನೂ ಒಳಹೊಕ್ಕಿರುವ ಚೈತನ್ಯವೆಂಬುದು ತಾನೊಂದೇ ಆಗಿದೆ. ಆ ಚೈತನ್ಯಶಕ್ತಿ ರೂಪದಿಂದ ಏಕವಾಗಿದ್ದುಕೊಂಡಿರುವ ವಸ್ತುವನ್ನೇ ವೇದಗಳು ಇಂದ್ರ, ಮಿತ್ರ, ವರುಣಾದಿ - ಹೆಸರುಗಳಿಂದ ತಿಳಿಸುವವು. ಹೀಗೆ ಚೈತನ್ಯ ಶಕ್ತಿಪರ್ಯಂತವಾಚಕಗಳಾಗಿ ವೇದಶಬ್ದಗಳು ಅರ್ಥಮಾಡಲ್ಪಟ್ಟರೆ ಮಾತ್ರವೇ ನಿಜವಾದ ವೇದಾರ್ಥವಾದೀತು. ಈ ಶಕ್ತಿಯೇ ವಾಗೀಶ್ವರಿಯು. ಅವಳೇ ಬ್ರಹ್ಮವಿದ್ಯೆಯು. ಆಕೆಯು ಪರಬ್ರಹ್ಮದೊಡನೆ ನಿತ್ಯಸಂಗತಳಾಗಿದ್ದು ಕೊಂಡಿರುವಳು. ಆದ್ದರಿಂದ ಯಾವಾಕೆಯನ್ನು ಎಲ್ಲಾ ವಾಕ್ಕುಗಳೂ ನೇರಾಗಿಯೋ ಪರಂಪರೆಯಿಂದಲೋ ಹೇಳುವವೋ ಅವಳು ನಮ್ಮನ್ನು ಕಾಪಾಡಲಿ - ಎಂದು ಸ್ತುತಿಸಿದೆ. ಮತ್ತು ಆ ಬ್ರಹ್ಮವಿದ್ಯಾದೇವಿಯನ್ನು ಕಾಮಧೇನುವಿಗೆ ಇಲ್ಲಿ ಹೋಲಿಸಲಾಗಿದೆ. ಕಾಮಧೇನುವು ಕೇಳಿದ್ದನ್ನೆಲ್ಲ ಕೊಡುವಂತೆ ವಾಗ್ದೇವಿಯೂ ಇಷ್ಟಾರ್ಥಗಳನ್ನೆಲ್ಲ ಮಳೆಗರೆಯುವಳು. ಮಾತಿನಿಂದ ಪಡೆಯಲಾಗದ್ದು ಯಾವದೂ ಇಲ್ಲ. ಮಾತನ್ನೇ ಬರಹದ ರೂಪದಿಂದಲೂ ನಾವು ವ್ಯವಹಾರದಲ್ಲಿ ದೃಢಗೊಳಿಸುವೆವು. ಆದ್ದರಿಂದ ಬರವಣಿಗೆಯು ಹೇಗೆ ನಿಷ್ಕೃಷ್ಟವೋ ಮಾತೂ ಹಾಗೇ ಸಜ್ಜನರಲ್ಲಿ ನಿಷ್ಕೃಷ್ಟವಾಗಿರುವದು. ಅಂಥವರು ಆಡಿದರೂ ಉಲ್ಲೇಖಿಸಿದರೂ ಎರಡಕ್ಕೂ ಸಮಾನವಾದ ಗೌರವವೇ ಇದೆ. ನಾವು ಅನೃತವಾದಿಗಳಾದರೆ ಮಾತ್ರ ಈ ವಾಕ್ಕಿಗೆ ಅಪಮಾನ ಮಾಡಿದಂತಾಗುವದು. ಇರಲಿ, ಸಕಲವೇದಗಳೂ ಶಾಸ್ತ್ರಗಳೂ ಕೊಂಡಾಡುವ ಹಾಗೂ ಭಕ್ತರಿಗೆ ಕಾಮಧೇನುವೆನಿಸಿರುವ ವಾಗ್ರೂಪಳಾದ ಸರಸ್ವತಿಯು ವಂದನೀಯಳು - ಎಂದು ಶ್ಲೋಕದ ಅಭಿಪ್ರಾಯ.

ಈಗ ಮಂತ್ರಾರ್ಥವನ್ನು ವಿಚಾರಮಾಡೋಣ. ಈ ಎಂಟನೆಯ ಮಂತ್ರವೂ ಏಳನೆಯ ಮಂತ್ರದ್ದೇ ಆದ ಋಷಿದೇವತಾಛಂದಸ್ಸುಳ್ಳದ್ದಾಗಿದೆ. ಬೀಜಾಕ್ಷರವು ಮಾತ್ರ ಬೇರೆಯಾಗಿದೆ. ಇಲ್ಲಿಯೂ ಮಧ್ಯಮಾ ಎಂಬ ವಾಕ್ಕನ್ನೇ ದೇವಿಯೆಂದು ಸ್ತುತಿಸಲಾಗಿದೆ. ಈ ದೈವೀವಾಕ್ಕೆಂಬುದು ಎಲ್ಲಾ ಪ್ರಾಣಿಗಳನ್ನೂ ಒಳಹೊಕ್ಕಿರುವದು. ಮತ್ತು ಧರ್ಮಾಭಿವಾದಿನಿಯಾಗಿದೆ. ಏಕೆಂದರೆ ಮಧ್ಯಮಾ ಎನಿಸಿದ ವೇದವಾಕ್ಕಿನಲ್ಲಿ ಅಧರ್ಮವಾಗಲೀ, ಅಸತ್ಯವಾಗಲಿ ಇರುವದಿಲ್ಲ. ವೇದವು ತಿಳಿಸತಕ್ಕದ್ದೇ ಧರ್ಮವೆನಿಸುತ್ತದೆ. ಅದು ಮಾಡು ಎಂದು ಹೇಳಿದ್ದು ಯಾವದೋ ಅದೇ ಕಾರ್ಯವು. ಬೇಡವೆಂದು ಹೇಳಿದ್ದು ಅಕಾರ್ಯವು. ಈ ಕಾರ್ಯಾ-ಕಾರ್ಯಗಳ ವ್ಯವಸ್ಥೆಯಲ್ಲಿ ಪ್ರಮಾಣವೆಂದರೆ ಶಾಸ್ತ್ರವು. ಶಾಸ್ತ್ರವೆಂದರೆ ವೇದವೇ - ಎಂದು ಭಗವಂತನು ಗೀತೆಯಲ್ಲಿ ಘೋಷಿಸಿರುತ್ತಾನೆ. ವೇದವೇ ಸಮಸ್ತಧರ್ಮಗಳಿಗೂ ಮೂಲವೆಂದು ಮನುಸ್ಮೃತಿಕಾರನೂ ತಿಳಿಸಿರುತ್ತಾನೆ. ಆದ್ದರಿಂದ ಈ ವೇದರೂಪವಾದ ವಾಕ್ಕನ್ನು ದೇವತೆಗಳು ಉಂಟುಮಾಡಿದರು, ಆವಿರ್ಭಾವಗೊಳಿಸಿದರು. ಮಾತೃಕಾವರ್ಣಗಳ ಮೂಲವುಳ್ಳ ವೇದವಾಕ್ಯಗಳು ದೇವತೆಗಳ ಸೃಷ್ಟಿ ಎಂದರ್ಥ. ಇದರಿಂದ ವೇದದ ಅನಾದಿತ್ವವೇನೂ ಭಾದಿತವಾಗುವದಿಲ್ಲ. ಏಕೆಂದರೆ ಪ್ರಲಯಕಾಲಕ್ಕೆ ಅವ್ಯಕ್ತವಾಗಿದ್ದ ವೇದಗಳೇ ಹಾಗೆಯೇ ಸೃಷ್ಟಿ ಕಾಲಕ್ಕೆ ವ್ಯಕ್ತವಾಗುವವು. ದೇವತೆಗಳು ಮಾಧ್ಯಮರು - ಎಂದರೆ ನಿಮಿತ್ತರು ಎಂದರ್ಥ. ದೇವತೆಗಳಿಂದಲೇ ಆ ವೇದವು ಋಷಿಗಳಿಗೆ ಅನುಗ್ರಹಿಸಲ್ಪಟ್ಟು ಅನಂತರ ನಮಗೆ ಲಭ್ಯವಾಗಿವೆ. ಹೀಗೆ ದೈವೀ ವಾಕ್ಕೆನಿಸಿದ ಮಾತನ್ನು ಎಲ್ಲಾ ರೀತಿಯ ಪಶುಗಳೂ ಉಚ್ಚರಿಸುವವು. ಇವುಗಳಲ್ಲಿ ಮನುಷ್ಯರು ವ್ಯಕ್ತವಾಕ್ಕುಗಳನ್ನೂ ಪ್ರಾಣಿಗಳು ಅವ್ಯಕ್ತವಾಕ್ಕನ್ನೂ ಬಳಸುವರು. ಇಂಥ ದೇವಿಯು ಈ ಅಭಿಪ್ರಾಯದಲ್ಲಿ ವಿಶ್ವರೂಪಳಾಗಿ ಎಲ್ಲಾ ಪ್ರಾಣಿಗಳ ಮೂಲಕವೂ ಪ್ರಕಟವಾಗುತ್ತಿರುವಳು - ಎಂದರ್ಥ. ವೇದಸಾಹಿತ್ಯಕ್ಕೂ ಲೌಕಿಕ ಭಾಷೆಗೂ ಪ್ರಾಣಿಗಳ ಧ್ವನ್ಯಾತ್ಮಕಶಬ್ದ ಪ್ರಪಂಚಕ್ಕೂ ವ್ಯವಹಾರದೃಷ್ಟಿಯಿಂದ ವ್ಯತ್ಯಾಸವಿದೆ. ಆದರೆ ಆ ತಾರತಮ್ಯಕ್ಕೆ ಉಪಾಧಿಯೇ ಕಾರಣವು. ದೇವತೆಗಳ, ಋಷಿಗಳ ಮಟ್ಟದಲ್ಲಿ ಹಾಡಿದ್ದೆಲ್ಲ ವೇದವೇ ಆಗಿರುವದು. ಲೌಕಿಕಜನರ ಮಟ್ಟದಲ್ಲಿ ಅದು ಭಾಷಾಸರಸ್ವತಿಯಾಗಿರುವದು. ಗೋವು, ನವಿಲು, ಆಡು, ಕುರಿ - ಮುಂತಾದ ಪ್ರಾಣಿಗಳ ಧ್ವನಿರೂಪದಲ್ಲಿ ಅದು ಅಸ್ಪಷ್ಟವಾಗಿರುವದು. ಆದರೆ ವಾಕ್ಕೆಂಬುದರ

ಮೂಲರೂಪದಿಂದ ಕಂಡುಕೊಂಡಾಗ ಎಲ್ಲಾ ಧ್ವನಿಗಳೂ ಶಬ್ದಗಳೂ ವಾಕ್ಯಗಳೂ ವೇದವಿದ್ಯೆಗಳೂ ಒಬ್ಬಳೇ ದೇವಿಯ ನಾನಾವಿಭೂತಿಗಳೆಂದು ತಿಳಿಯಬೇಕು.

ಇಂಥ ಮಹಾವಾಗ್ದೇವತೆಯು ಸ್ತುತಿಯಿಂದ ಸಂತುಷ್ಟಳಾಗಿ ನಮಗೆ ಧೇನುವಿನಂತೆ ಸಕಲ ಇಷ್ಟಾರ್ಥಗಳನ್ನೂ ಕೊಡಲಿ - ಎಂದು ಪ್ರಾರ್ಥಿಸಿದೆ. ವೇದವಾಕ್ಕಿನ ರೂಪಿಣಿಯಾದ ಕಾಮಧೇನುವು ಅನ್ನ, ನೀರು - ಮುಂತಾದದ್ದನ್ನೆಲ್ಲ ಮಳೆಗರೆಯ ತಕ್ಕದ್ದಾಗಿದೆ. ಎಲ್ಲೆಲ್ಲಿ ವೇದಾಧ್ಯಯನವೂ ವೇದೋಕ್ತ ಯಜ್ಞಗಳೂ ನಡೆಯುವವೋ ಅಲ್ಲೆಲ್ಲ ದೇವತೆಗಳ ಪ್ರಸಾದದಿಂದ ಮಳೆಬೆಳೆಗಳು, ಹಾಲು, ತುಪ್ಪಗಳು ಸಮೃದ್ಧವಾಗಿರುವವು. ಹೀಗೆ ದೇವಿಯು ಐಹಿಕವಾದ ಭೋಗಗಳನ್ನು ಕೊಡುವದರ ಜೊತೆಗೆ ವಾಕ್‌ಸಿದ್ಧಿಯೂ ಉಂಟಾದಂತೆಲ್ಲ ಅಂತರಂಗದಲ್ಲಿ ದೇವತಾದರ್ಶನವೂ ವೇದವೇದ್ಯವಾದ ಪರಬ್ರಹ್ಮದ ಅನುಭವವೂ ದೊರಕುವದು. ಅದೇ ಅಮೃತವು. ಇಂಥ ಅಮೃತವನ್ನು ಹರಿಯಿಸುವ ದೇವಧೇನುವಾದ ವಾಕ್ಕನ್ನು ಸ್ತೋತ್ರ ಮಾಡುತ್ತಿರುವವರೇ ಧನ್ಯರು - ಎಂದರ್ಥ.

(ಉಪನಿಷತ್ತು)

ಓಂ॥ ಉತತ್ವ ಇತಿ ಮಂತ್ರಸ್ಯ । ಬೃಹಸ್ಪತಿರ್ ಋಷಿಃ । ತ್ರಿಷ್ಟುಪ್ ಛಂದಃ । ಸರಸ್ವತೀ ದೇವತಾ । ಸಮಿತಿ ಬೀಜಶಕ್ತಿಕೀಲಕಮ್ । ಇಷ್ಟಾರ್ಥೇ ವಿನಿಯೋಗಃ । ಮಂತ್ರೇಣ ನ್ಯಾಸಃ ॥

ಯಾಂ ವಿದಿತ್ವಾಖಿಲಂ ಬಂಧಂ ನಿರ್ಮಥ್ಯಾಖಿಲವರ್ತ್ಮನಾ ।
ಯೋಗೀ ಯಾತಿ ಪರಂ ಸ್ಥಾನಂ ಸಾ ಮಾಂ ಪಾತು ಸರಸ್ವತೀ ॥

ಓಂ॥ ಸಂ। ಉತತ್ವಃ ಪಶ್ಯನ್ನದದರ್ಶ ವಾಚಮುತತ್ವಃ ಶೃಣ್ವನ್ ನ ಶೃಣೋತ್ಯೇನಾಮ್ । ಊತೋ ತ್ವಸ್ಮೈ ತನ್ವಂ೧ ವಿಸಸ್ರೇ ಜಾಯೇವ ಪತ್ಯ ಉಶತೀ ಸುವಾಸಾಃ ॥ ೯ ॥

ಈಗ ಒಂಬತ್ತನೆಯ ಶ್ಲೋಕ ಹಾಗೂ ಮಂತ್ರಗಳ ವಿಚಾರಮಾಡೋಣ. ಈ ಪದ್ಯದಲ್ಲಿ ಬಂಧಮೋಕ್ಷಗಳ ವಿಚಾರವಿದೆ. ಅವಿದ್ಯೆಯನ್ನೇ ಬಂಧವೆನ್ನುವರು. ಅದರ ವಿನಾಶವೇ ಮೋಕ್ಷವೆನಿಸುವದು. ಅವಿದ್ಯಾನಾಶವು ವಿದ್ಯೆಯಿಂದ ಮಾತ್ರವೇ ಸಾಧ್ಯವಾಗಿರುತ್ತದೆ. ಆ ವಿದ್ಯೆಯು ಪರಬ್ರಹ್ಮವಿಷಯದ್ದಾಗಿದೆ. ವಿದ್ಯಾರೂಪಿಣಿಯೇ ಸರಸ್ವತಿಯು. ಸರಸ್ವತಿಯ ಅನುಗ್ರಹವನ್ನು ಸಂಪಾದಿಸಬೇಕಾದರೆ ಆಕೆಯನ್ನು

ಉಪಾಸನೆಮಾಡಬೇಕು. ವಿದ್ಯೆಯನ್ನು ಅಭ್ಯಾಸ ಮಾಡಬೇಕು - ಎಂದರ್ಥ. ಅಭ್ಯಾಸವಿಲ್ಲದ ಯಾವನಿಗೂ ವಿದ್ಯೆಯು ಒಲಿಯಲಾರದು. ವಿದ್ಯೆಗಾಗಿ ತಪಸ್ಸು ಮಾಡುವವನೇ ಯೋಗಿಯೆನಿಸುವನು. ವಿದ್ಯೆಯ ಸಾಧನನೆಯನ್ನೇ ಗುರಿಯಾಗಿಟ್ಟು ಕೊಂಡವನು ಇಂದ್ರಿಯಸುಖವನ್ನೂ ನಿದ್ರಾದಿಗಳನ್ನೂ ಜಯಿಸಿ ಅವುಗಳನ್ನು ಹಿತಮಿತವಾಗಿಟ್ಟುಕೊಳ್ಳಬೇಕಾಗುವದು. ಈ ಇಂದ್ರಿಯಜಯ ರೂಪವಾದ ಯೋಗವು ವಿದ್ಯಾಪ್ರಾಪ್ತಿ ಸಾಧನವಾಗಿರುತ್ತದೆ. ವಿದ್ಯೆಯು ನಾನಾಮಾರ್ಗರೂಪವಾಗಿರುವದು. ಒಂದೊಂದು ಮಾರ್ಗವೂ ನೇರಾಗಿಯೋ ಪರಂಪರೆಯಿಂದಲೋ ಮುಕ್ತಿ ಸಾಧನವಾಗಿರುವದು. ಯಾವದೇ ಮಾರ್ಗವನ್ನು ನಡೆದು ಪೂರೈಸಬೇಕಾದರೂ ಅದದರ ತಿಳುವಳಿಕೆಯು ಬೇಕು. ವಿದ್ಯಾಯೋಗಿಯು ಎಲ್ಲಾ ರೀತಿಯಾದ ಮಾರ್ಗಗಳಿಂದಲೂ ಸರಸ್ವತಿಯನ್ನರಿಯಲು ಸಾಧನವನ್ನು ಕೈಗೊಳ್ಳುವನು. ಅದು ಸಿದ್ಧಿಯಾಯಿತೆಂದರೆ ಸರಸ್ವತಿಯು ಒಲಿಯುವಳು. ಆಕೆಯೇ ಪರಬ್ರಹ್ಮದೊಡನೆ ಸಾಧಕನನ್ನು ಒಂದುಗೂಡಿಸುವಳು. ಅಲ್ಲಿಗೆ ಯೋಗಿಯು ಬಂಧಗಳನ್ನೆಲ್ಲ ಕಳಚಿಕೊಂಡು ಪರಸ್ಥಾನವನ್ನು ಮುಟ್ಟಿಬಿಡುವನು. ಕೃತಾರ್ಥನಾಗುವನು - ಎಂದು ಶ್ಲೋಕದ ತಾತ್ಪರ್ಯವು. ವಿದ್ಯಾವಿದ್ಯೆಗಳ ವಿಚಾರವಾಗಿ ಉಪನಿಷತ್ತುಗಳಲ್ಲಿ ವಿಸ್ತಾರವಾಗಿ ತಿಳಿಸಿದೆ. ವಿದ್ಯೆಯೊಂದೇ ಅವಿದ್ಯೆಯನ್ನು ಕಳೆಯಬಲ್ಲದು. ವಿದ್ಯೆಯೇ ಸರಸ್ವತಿಯು. ಆಕೆಯು ನನ್ನನ್ನು ಕಾಪಾಡಲಿ ಎಂದು ಈ ಶ್ಲೋಕದಲ್ಲಿ ಕೇಳಿಕೊಂಡಿದೆ.

ಈಗ ಮಂತ್ರಾರ್ಥವನ್ನು ವಿಚಾರಮಾಡೋಣ. ಈ ಮಂತ್ರದ ದ್ರಷ್ಟಾರನು ಬೃಹಸ್ಪತಿಯು. ಉತ ಎಂದರೆ ಕೂಡ ಎಂದೂ ತ್ವ ಎಂದರೆ ಏಕವೆಂದೂ ಅರ್ಥಮಾಡಿಕೊಳ್ಳಬೇಕು. ಯಾವನೇ ಆಗಲಿ, ವಾಗ್ದೇವಿಯ ವಿಷಯದಲ್ಲಿ ಮನಸ್ಸಿನಲ್ಲಿ ಪರ್ಯಾಲೋಚನೆಯನ್ನು ಮಾಡಿಯೂ ಕಂಡುಕೊಳ್ಳದೆ ಇರಬಹುದು. ದೇವಿಯ ಸ್ವರೂಪವನ್ನು ಕುರಿತು ತರ್ಕಮಾಡುತ್ತಾ ವಿಕಲ್ಪಿಸುತ್ತಿರುವವನು ಆಕೆಯ ಮಜಲನ್ನು ಮುಟ್ಟಲಾರನು. ಹಾಗೆಯೇ ವೇದವಾಗ್ರೂಪಿಣಿಯಾದ ದೇವಿಯನ್ನು ಕೇಳಿದರೂ ಕೇಳಿದಂತಲ್ಲ, ಎಂದರೆ ಅರಿಯಲಾರನು ಎಂದರ್ಥ. ಒಬ್ಬ ರಾಜನ ಅರಮನೆಯನ್ನು ಅನೇಕರು ದೂರದಿಂದ ನೋಡಿರಬಹುದು. ಆದರೆ ಅದರೊಳಗೆ ಏನೇನಿದೆ ? ಎಂಬಿದನ್ನು ರಾಜನ ಅನುಗ್ರಹಕ್ಕೆ ಪಾತ್ರನಾದ ಆಪ್ತನೇ ಬಲ್ಲನು - ಎಂದರೆ ಹೇಗೋ ಹಾಗೆಯೇ ವೇದಸರಸ್ವತಿಯನ್ನು ಬಂಡಾಯದಿಂದ ಕೇಳಿಸಿಕೊಂಡರಾಗಲಿ,

ಪತನಮಾಡಿ ಬಿಟ್ಟರಾಗಲಿ, ಆಕೆಯ ಅಂತರಂಗದರ್ಶನವಾಗಲಾರದು. ಈಗಿನ ಕಾಲದಲ್ಲಿ ತಮಗೆ ದಕ್ಕಲಾರದ ವೇದಾಧಿಕಾರಕ್ಕಾಗಿ ಆಸೆಪಡುತ್ತಾ ಮುನ್ನುಗ್ಗುವವರಿಗೆಲ್ಲ ಈ ಮಾತು ಅನ್ವಯಿಸಲಿದೆ. ಋಷಿಯಲ್ಲದವನು ವೇದವಾಗ್ದೇವಿಯನ್ನು ಧರಿಸಲಾರನು. ಬ್ರಾಹ್ಮಣನೇ ಆಗಿದ್ದು ವೇದಾಧಿಕಾರ ವಿದ್ದವನು ಕೂಡ ಗಿಳಿಯ ಪಾಠದಂತೆ ವೇದವನ್ನುಚ್ಚರಿಸಿದ ಮಾತ್ರಕ್ಕೆ ವೇದಜ್ಞನಾಗಲಾರನು. ಭಾರವನ್ನು ಹೊರುವದು ಕತ್ತೆಗೆ ಸಾಧ್ಯವಾಗ ಬಹುದಾದರೂ ಕಸ್ತೂರಿಯ ಸುಗಂಧವನ್ನು ಅದು ತಿಳಿಯಲಾರದು. ಕಸ್ತೂರಿಯ ಗಂಟನ್ನು ಹೊತ್ತದ್ದರಿಂದೇನೂ ಹೆಚ್ಚುಗಾರಿಕೆಯಾಗಲಿಲ್ಲ. ಹಾಗೆಯೇ ಋಷಿಯಲ್ಲದವನೂ ಈ ವಾಗ್ದೇವಿಯನ್ನು ಕಂಡುಕೊಳ್ಳಲಾರನು. ಆದ್ದರಿಂದ ಅವಿದ್ವಾಂಸನಿಗೆ ಸರಸ್ವತಿಯ ಮಹಿಮೆಯು ಹೇಗೆ ತಿಳಿದೀತು ? ಈಗಲೂ ವಿದ್ಯಾವಂತರಿಗೆ ಹಾಗೂ ಪ್ರತಿಭಾಶಾಲಿಗಳಿಗೆ ಪ್ರೋತ್ಸಾಹವು ದೊರಯದೆ ಇರುವದಕ್ಕೆ ಅವಿದ್ಯಾವಂತರದ್ದೇ ಅಧಿಕಾರವು ಜಾರಿಯಲ್ಲಿರುವದೇ ಕಾರಣವಾಗಿದೆ. ಇರಲಿ. ಈಗ ವಾಗ್ದೇವಿಯು ಯಾರಿಗೆ ಒಲಿಯುತ್ತಾಳೆಂಬುದನ್ನು ತಿಳಿಸುತ್ತಾರೆ. ಯಾವನು ಆ ದೇವಿಯನ್ನು ತನ್ನ ಆತ್ಮನೆಂದೇ ಚಿಂತಿಸಿ ಆತ್ಮಜ್ಞನೆನಿಸುವನೋ ಅಂಥವನಿಗೆ ಆಕೆಯು ತನ್ನ ಶರೀರವನ್ನೊಪ್ಪಿಸಿ ಬಿಡುವಳು. ಆತ್ಮಜ್ಞನು ಬ್ರಹ್ಮಜ್ಞನೇ ಆಗಿರುವನು. ಬ್ರಹ್ಮನು ಸರಸ್ವತಿಯ ಪತಿಯೇ ಆಗಿರುನು. ಬೃಹಸ್ಪತಿ, ಬ್ರಹ್ಮಣಸ್ಪತಿ, ವಾಕ್ಪತಿ - ಎಂಬ ಹೆಸರುಗಳಿಂದ ಉಪನಿಷದಾದಿಗಳಲ್ಲಿ ಬ್ರಹ್ಮವನ್ನು ಹೆಸರಿಸಿದೆ. ಆ ಬ್ರಹ್ಮವೇ ಹಿರಣ್ಯಗರ್ಭನೆನಿಸಿರುವನು. ಪ್ರಜಾಪತಿಯೆಂದರೂ ಅವನೇ. ಅವನ ಧರ್ಮಪತ್ನಿಯೇ ಸರಸ್ವತಿಯು. ಬ್ರಹ್ಮನಿಗೆ ಸರಸ್ವತಿಯು ಒಲಿದಿರುವದೇನೂ ಆಶ್ಚರ್ಯವಲ್ಲವು. ಸರಸ್ವತಿಯು ಆತನಿಗೆ ತನ್ನನ್ನು ಸಮರ್ಪಿಸಿಕೊಂಡಿರುವಳು. ಹೀಗೆ ಬ್ರಹ್ಮನಾದವನು ಬ್ರಹ್ಮಾಣಿಯನ್ನು ಗೆದ್ದಕೊಳ್ಳುವನು - ಎಂದರೆ ವೇದಾರ್ಥವನ್ನೆಲ್ಲ ಅರಿತಿರುವನು - ಎಂದರ್ಥ. ಆತ್ಮಜ್ಞನಾದಲ್ಲದೆ ವೇದಸರಸ್ವತಿಯನ್ನು ವಶಪಡಿಸಿಕೊಳ್ಳಲಾಗದು ಎಂದು ತಿಳಿಸಿ ಅದಕ್ಕೊಂದು ಉದಾಹರಣೆಯನ್ನೂ ಶ್ರುತಿಯು ಇಲ್ಲಿ ಮಂಡಿಸಿದೆ. ಹೇಗೆಂದರೆ : ಪತಿವ್ರತೆಯಾದ ಸ್ತ್ರೀಯು ಯಾವ ಪರಪುರುಷನನ್ನೂ ತನ್ನ ಕೈಯಿಂದ ಮುಟ್ಟುವದಿಲ್ಲ. ಕಣ್ಣೆತ್ತಿ ನೋಡುವದೂ ಇಲ್ಲ. ಆದರೆ ತನ್ನ ಪತಿಯ ವಿಷಯದಲ್ಲಿ ಮಾತ್ರ ಅವಳು ಪ್ರೇಮದಿಂದ ನಡೆದುಕೊಂಡು ಏಕಾಂತದಲ್ಲಿ ತನ್ನ ಸರ್ವಸ್ವವನ್ನೂ ಸಮರ್ಪಿಸಿ ಬಿಡುವಳು. ಹಾಗೆಯೇ ಬ್ರಹ್ಮವಿದನಿಗೆ ಬ್ರಹ್ಮವಿದ್ಯೆಯು

ಒಲಿದಿರುವದು - ಎಂದಭಿಪ್ರಾಯ. ಇದರಿಂದ ವೇದಾರ್ಥವನ್ನು ಬಲ್ಲ ಋಷಿಯನ್ನು ಪ್ರಶಂಸೆ ಮಾಡಿದಂತಾಗಿದೆ. ಉದಾರಹಣೆಯನ್ನು ಅಶ್ಲೀಲವೆಂದು ಯಾರೂ ತಿಳಿಯಬಾರದು. ರಹಸ್ಯಗಳೇನೂ ಉಳಿಯದಂತೆ ವೇದಾರ್ಥವು ತಪಸ್ವಿಯಾದ, ಅಧಿಕಾರಿಯಾದ, ಯೋಗ್ಯನಾದ ಬ್ರಹ್ಮಜ್ಞನಿಗೆ ಹೊಳೆದಿರುವದು - ಎಂಬುದು ತಾತ್ಪರ್ಯವಾಗಿದೆ.

(ಉಪನಿಷತ್ತು)

ಓಂ॥ ಅಂಬಿತಮೇ ನದೀತಮೇ ಇತ್ಯಸ್ಯ ಮಂತ್ರಸ್ಯ । ಗೃತ್ಸಮದ ಋಷಿಃ । ಅನುಷ್ಟಪ್ ಛಂದಃ । ಸರಸ್ವತೀ ದೇವತಾ । ಐಮಿತಿ ಬೀಜಶಕ್ತಿಕೀಲಕಂ । ಇಷ್ಟಾರ್ಥೇ ವಿನಿಯೋಗಃ । ಮಂತ್ರೇಣ ನ್ಯಾಸಃ ॥

ನಾಮರೂಪಾತ್ಮಕಂ ಸರ್ವಂ ಯಸ್ಯಾಮಾವೇಶ್ಯ ತಾಂ ಪುನಃ ।
ಧ್ಯಾಯಂತಿ ಬ್ರಹ್ಮರೂಪೈಕಾ ಸಾ ಮಾಂ ಪಾತು ಸರಸ್ವತೀ ॥

ಓಂ॥ ಐಂ। ಅಂಬಿತಮೇ ನದೀತಮೇ ದೇವಿತಮೇ ಸರಸ್ವತೀ ।
ಅಪ್ರಶಸ್ತಾ ಇವ ಸ್ಮಸಿ ಪ್ರಶಸ್ತಿಮಂಬ ನಸ್ಕೃಧಿ ॥೧೦॥

ಈಗ ಹತ್ತನೆಯ ಶ್ಲೋಕವನ್ನೂ ಮಂತ್ರವನ್ನೂ ವಿಚಾರಮಾಡೋಣ. ಯೋಗಿಗಳಾದವರು ದೇವಿಯನ್ನು ಬ್ರಹ್ಮಸ್ವರೂಪಳೆಂದೇ ತಿಳಿದು ಚಿಂತಿಸುವರು. ಸಂಧ್ಯಾವಂದನೆಯ ಸಂದರ್ಭದಲ್ಲಿ ಪಠಿಸುವ ಒಂದು ಮಂತ್ರದಲ್ಲಿ ಹೀಗಿದೆ : ''ವರದಳಾದ ಹಾಗೂ ಛಂದಸ್ಸುಗಳಿಗೆಲ್ಲ ಮಾತೆಯಾದ ಗಾಯತ್ರಿಯು ಬರುವವಳಾಗಲಿ; ನನ್ನನ್ನು ಸೇವಿಸಲಿ'' ಎಂದು ಅಲ್ಲಿ ಕೇಳಲಾಗಿದೆ. ಹಾಗೆಯೇ ಗಾಯತ್ರೀಮಂತ್ರ ರೂಪಳಾದ ದೇವಿಯನ್ನು ಬ್ರಹ್ಮವೆಂದೂ ತಿಳಿಸಲಾಗಿದೆ. ಆದ್ದರಿಂದ ಹೇಗೆ ಬ್ರಹ್ಮದಲ್ಲಿಯೇ ಎಲ್ಲಾ ನಾಮರೂಪಗಳೂ ಅಡಕವಾಗಿರುವವೋ ಹಾಗೆಯೇ ಬ್ರಹ್ಮರೂಪಳಾದ ಸರಸ್ವತಿಯಲ್ಲಿ ಸಕಲವಿಧವಾದ ನಾಮರೂಪಾತ್ಮಕಪ್ರಪಂಚವೂ ಅಡಕವಾಗಿರುವದು. ಇದನ್ನು ಬಲ್ಲವರು ಧ್ಯಾನಕಾಲಕ್ಕೆ ಎಲ್ಲ ನಾಮರೂಪಗಳನ್ನೂ ಆಕೆಯಲ್ಲಿ ಲಯಮಾಡಿಕೊಳ್ಳುವರು ಮತ್ತು ಅವಳನ್ನು ಬ್ರಹ್ಮವೆಂದೇ ಭಾವಿಸಿ ಚಿಂತಿಸುವರು. ಇಂಥ ಸರಸ್ವತಿಯು ನನ್ನನ್ನು ಕಾಪಾಡಲಿ ! ಎಂದು ಇಲ್ಲಿ ಪ್ರಾರ್ಥಿಸಲಾಗಿದೆ.

ಈಗ ಮಂತ್ರಾರ್ಥವನ್ನು ವಿಚಾರ ಮಾಡೋಣ. ದೇವಿಯನ್ನು ತಾಯಂದಿರಲ್ಲಿ ಶ್ರೇಷ್ಠಳು, ನದಿಗಳಲ್ಲಿ ಶ್ರೇಷ್ಠಳು, ಒಡತಿಯರುಗಳಲ್ಲಿ ಶ್ರೇಷ್ಠಳು - ಎಂದು ಇಲ್ಲಿ ಕರೆಯಲಾಗಿದೆ. ಶರೀರವನ್ನು ನಮಗೆ ನೀಡಿರುವ ತಾಯಿಯು ಪೂಜ್ಯಳೇ ಸರಿ. ಹಾಗೆಯೇ ನಮಗೆ ಜೀವಿಸಲು ಸ್ಥಳವನ್ನು ನೀಡಿರುವ ಭೂಮಿಯೂ ತಾಯಿಯೇ. ದೇಶವನ್ನು ಮಾತೆ ಎಂದು ಕರೆಯುವದು, ಪ್ರಸಿದ್ಧವಾಗಿದೆ. ನಾವು ಬದುಕಲು ಆಧಾರವಾಗಿರುವ ಅನ್ನವನ್ನೂ ತಾಯಿಯೆನ್ನುವೆವು. ಇಂಥ ಅನೇಕ ತಾಯಂದಿರ ಅನುಗ್ರಹದಿಂದಲೇ ನಮ್ಮ ಬದುಕು ಸಾಗುತ್ತಿದೆ. ಇವರುಗಳಲ್ಲಿ ಅಂಬಿತಮೆಯು (ಶ್ರೇಷ್ಠಳಲ್ಲಿ ಶ್ರೇಷ್ಠಳಾದ ತಾಯಿ ಎನಿಸಿರುವವಳು) ಸರಸ್ವತಿಯು. ಏಕೆಂದರೆ ಆಕೆಯ ಪ್ರಸಾದವಿಲ್ಲವಾದರೆ ಜೀವನವು ಜೀವನವೆನಿಸುವದೇ ಇಲ್ಲ. ಒಬ್ಬ ಮನುಷ್ಯನಿಗೆ ಧನ, ರೂಪ, ಆಯುಷ್ಯ ಆರೋಗ್ಯಾದಿಗಳೆಲ್ಲವೂ ಇದ್ದು ತಿಳಿವಳಿಕೆಯೆಂಬುದಿಲ್ಲವಾದರೆ - ಪ್ರಯೋಜನ ವೇನು? ಕಟ್ಟಕಡೆಗೆ ಅಕ್ಷರವಿದ್ಯೆಯಿಲ್ಲದಿದ್ದರೂ ಪ್ರಜ್ಞೆ (ಬುದ್ಧಿ)ಯಾದರೂ ಬೇಕು. ವಿದ್ಯಾಬುದ್ಧಿಗಳ ಮೂಲವೇ ಸರಸ್ವತಿಯು. ಆದ್ದರಿಂದ ಆಕೆಯು ಪ್ರಶಸ್ತಳಾದ ತಾಯಿಯೆನಿಸಿರುವಳು. ಹಾಗೆಯೇ ಶ್ರೇಷ್ಠವಾದ ಹಾಗೂ ಪವಿತ್ರವಾದ ನದಿಗಳನ್ನು ಹೆಸರಿಸುವಾಗ ''ಸರಸ್ವತೀ''ಯನ್ನೂ ಸೇರಿಸಲಾಗಿದೆ. ವೇದಮಂತ್ರದಲ್ಲಿಯೇ ಗಂಗಾ-ಯಮುನೆಯರೊಡನೆ ಸರಸ್ವತಿಯನ್ನು ಪ್ರಶಂಸೆ ಮಾಡಿದೆ. ಹಿಂದಿನ ಕಾಲಕ್ಕೆ ಸರಸ್ವತೀನದಿಯು ಪ್ರತ್ಯಕ್ಷವಾಗಿ ಗೋಚರಳಾಗಿ ಪ್ರವಹಿಸುತ್ತಿದ್ದಾಗ ಆ ನದಿಯ ತೀರದಲ್ಲಿ ಅನೇಕ ಮಹರ್ಷಿಗಳು ತಪೋನಿಷ್ಠರಾಗಿ ವಾಸಿಸುತ್ತಿದ್ದರೆಂದು ಪುರಾಣಗಳಲ್ಲಿ ಕಂಡುಬರುತ್ತದೆ. ಹೀಗೆ ಈಕೆಯನ್ನು ''ನದೀತಮೇ'' ನದಿಗಳಲ್ಲಿ ಶ್ರೇಷ್ಠಳೆಂದು ಇಲ್ಲಿ ಸ್ತುತಿಸಲಾಗಿದೆ. ಇನ್ನು 'ದೇವಿತಮೆ' ಎಂಬುದರರ್ಥವನ್ನು ನೋಡೋಣ. ಯಜಮಾನಿಯರಲ್ಲಿ ಆಕೆಯು ಪ್ರಧಾನಳೆಂದು ತಿಳಿಯಬೇಕು. ಏಕೆಂದರೆ ಬುದ್ಧಿ, ಪ್ರಜ್ಞೆ, ಸ್ಮರಣೆ, ಮೇಧೆ, ವಾಕ್ಕಿನ ಉಚ್ಚಾರಣೆ, ಶಾರೀರ, (ಕಂಠ) ಅಥವಾ ಧ್ವನಿ - ಮುಂತಾದದ್ದೆಲ್ಲವೂ ಸರಸ್ವತಿಯ ಒಡೆತನಕ್ಕೆ ಒಳಪಟ್ಟಿರುತ್ತದೆ. ಆಕೆಯೇ ಅವುಗಳೆಲ್ಲವನ್ನೂ ಕೊಡಬೇಕಾಗಿದೆ. ಯಾರು ದೇವಿಯನ್ನು ಭಕ್ತಿಶ್ರದ್ಧೆಗಳಿಂದ ಮೊರೆಹೋಗುವರೋ ಅಂಥವರಿಗೆ ದೇವಿಯು ಇವುಗಳನ್ನು ಕರುಣಿಸುವಳು. ದೇವೇಂದ್ರನಿಗೆ ಕೂಡ ಬ್ರಹ್ಮವಿದ್ಯೆಯನ್ನು ಅನುಗ್ರಹಿಸಿದ ಮಾತೆಯೇ ಇವಳೆಂದು ಕೇನೋಪನಿಷತ್ತಿನಲ್ಲಿದೆ. ಆದ್ದರಿಂದ ಈ ಸರಸ್ವತೀದೇವಿಯು ಸರ್ವರೀತಿಯಿಂದಲೂ ಶ್ರೇಷ್ಠಳೆನಿಸಿರುತ್ತಾಳೆ.

ಇಂಥ ದೇವಿಯನ್ನು ಕುರಿತು "ತಾಯೆ, ನಾವು ಅಪ್ರಶಸ್ತರೆಂದಾಗಿ ಬಿಟ್ಟಿರುವೆವು; ನಮ್ಮನ್ನು ಪ್ರಶಸ್ತರನ್ನಾಗಿ ಮಾಡು " ಎಂದು ಕೇಳಲಾಗಿದೆ. ಲೋಕದಲ್ಲಿ ಎಷ್ಟೇ ವಿದ್ಯೆ, ಪ್ರಜ್ಞೆಗಳಿದ್ದರೂ ಪ್ರಶಸ್ತಿ (ಗೌರವ) ಯು ದೊರಕಬೇಕಾದರೆ ಧನವು ಬೇಕು - ಎಂಬುದು ಎಲ್ಲರಿಗೂ ತಿಳಿದಿರುವ ವಿಷಯವು. ಬಹಳ ಮಟ್ಟಿಗೆ ವಿದ್ಯಾವಂತರಾದವರು ದರಿದ್ರರಾಗಿರುತ್ತಾರೆ. ಇದೇನೂ ದೋಷವೆಂದು ತಿಳಿಯಬಾರದು. ಏಕೆಂದರೆ ಧನವು ಕೂಡಿದಂತೆಲ್ಲ ಮನುಷ್ಯನಿಗೆ ಮದ, ಗರ್ವಗಳೂ ಸೇರಿಕೊಂಡು ವಿದ್ಯೆಗೂ ವಿವೇಕಕ್ಕೂ ಸ್ಥಾನವಿಲ್ಲವಾಗಿಬಿಡುತ್ತದೆ. ಆದ್ದರಿಂದ ಧನವು ಸ್ವಲ್ಪ ಕೊರತೆಯಾಗಿದ್ದರೂ ಚಿಂತೆಯಿಲ್ಲ. ತಿಳಿವಳಿಕೆಯ ಕೊರತೆಯಿರಬಾರದು. ಸರಸ್ವತಿಗೆ ಅಧೀನವಾಗಿಯೇ ಧನಲಕ್ಷ್ಮಿಯು ಇದ್ದು ಕೊಂಡಿರುವದು ಶ್ರೇಯಸ್ಕರವು. ಇವರಿಬ್ಬರೂ ಹೊಂದಿ ಕೊಂಡಿರುವದು ಮಾತ್ರ ಮನುಷ್ಯನ ಪುಣ್ಯವನ್ನವಲಂಬಿಸಿದೆ. ಸರಸ್ವತಿಯನ್ನು ಅತ್ತೆಯೆಂದೂ ಲಕ್ಷ್ಮಿಯನ್ನು ಸೊಸೆಯಂದೂ ಹಾಸ್ಯವಾಗಿ ಹೇಳುವದುಂಟು. ಅತ್ತೆಸೊಸೆಯರು ಅನ್ಯೋನ್ಯವಾಗಿದ್ದುಕೊಂಡಲ್ಲಿ ಜೀವನವು ಸುಖಮಯವೇ ಆಗಿರುವದು. ಇಲ್ಲಿ ಸರಸ್ವತಿಯನ್ನೇ ಲಕ್ಷ್ಮಿಯನ್ನೂ ದಯಪಾಲಿಸು - ಎಂದು ಕೇಳಿಕೊಂಡಿರುವದರಿಂದ ಧನಲಕ್ಷ್ಮಿಯ ವಿನಿಯೋಗ ಸತ್ಕರ್ಮಗಳಿಗಾಗುವಂತೆ ನಮ್ಮನ್ನು ಪ್ರೇರಣೆಮಾಡು - ಎಂದೇ ಅರ್ಥ. ಶ್ರೀಶಂಕರಾಚಾರ್ಯರು ತಮ್ಮ ಭಾಷ್ಯದಲ್ಲಿ ಒಂದು ಕಡೆ "ಅಮೇಧಸೋ ಹಿ ಶ್ರೀರನರ್ಥಾಯೈವ" ಎಂದು ಬರೆದಿರುತ್ತಾರೆ. ಬುದ್ಧಿಯಿಲ್ಲದವನಿಗೆ ಪ್ರಾಪ್ತವಾಗುವ ಐಶ್ವರ್ಯವು ಅನರ್ಥಕ್ಕೇ ಕಾರಣ - ಎಂದು ಇದರ ಅಭಿಪ್ರಾಯ. ಆದ್ದರಿಂದ ಧನದಿಂದ ಬರುವಂತೆ ತೋರುವ ಪ್ರಶಸ್ತಿಯೂ ಸರಸ್ವತಿಯ ಕೃಪೆಯಿಂದಲೇ - ಎಂದು ತಿಳಿಯಬೇಕು. ಹೀಗೆ ತಾಯಂದಿರಲ್ಲೂ ನದಿಗಳಲ್ಲಿಯೂ, ಒಡತಿಯರುಗಳಲ್ಲಿಯೂ ಮುಖ್ಯಳಾದ ಸರಸ್ವತಿಯು ನಮಗೆ ಪ್ರಶಸ್ತಿಯನ್ನು ಎಂದರೆ ಧನಾಗಮ, ವಿನಿಯೋಗಗಳ ನಿಮಿತ್ತವಾದ ಕೀರ್ತಿಯನ್ನು ಒದಗಿಸಿಕೊಡಲಿ - ಎಂದಭಿಪ್ರಾಯ.

(ಉಪನಿಷತ್ತು)

ಚತುರ್ಮುಖಮುಖಾಂಭೋಜವನಹಂಸ ವಧೂರ್ಮಮ ।
ಮಾನಸೇ ರಮತಾಂ ನಿತ್ಯಂ ಸರ್ವಶುಕ್ಲಾ ಸರಸ್ವತೀ ॥
ನಮಸ್ತೇ ಶಾರದಾದೇವಿ ಕಾಶ್ಮೀರಪುರವಾಸಿನಿ ।
ತ್ವಾಮಹಂ ಪ್ರಾರ್ಥಯೇ ನಿತ್ಯಂ ವಿದ್ಯಾದಾನಂ ಚ ದೇಹಿ ಮೇ ॥

**ಇಲ್ಲಿಂದ ಮುಂದಕ್ಕೆ ಪೂರ ಉಪನಿಷತ್ತು ಶ್ಲೋಕರೂಪವಾಗಿಯೇ ಇದೆ.** ಅದನ್ನು ಯಥಾಮತಿಯಾಗಿ ವಿವರಿಸುವೆನು. ಸರಸ್ವತೀ ದೇವಿಯು ನಾಲ್ಕುಮುಖದ ಹಿರಣ್ಯಗರ್ಭನೆನಿಸಿದ ಬ್ರಹ್ಮನ ಮುಖಕಮಲವೆಂಬ ವನಕ್ಕೆ ಹಂಸದಂತೆ ಇರುವಳು. ವನಶಬ್ದಕ್ಕೆ ನೀರು ಎಂಬರ್ಥವೂ ಇದೆ. ಕಮಲವು ನೀರಿನಲ್ಲಿದ್ದರೆ ನೀರಿಗೆ ಒಂದು ಕಳೆಯಿರುತ್ತದೆ. ಹಾಗೆಯೇ ಹಂಸಪಕ್ಷಿಯೂ ಇದ್ದರೆ ಕಮಲಕ್ಕೂ ಶೋಭೆಯು ಬರುತ್ತದೆ. ಸರಸ್ವತಿಯು ಬ್ರಹ್ಮನ ರಾಣಿಯಾಗಿದ್ದು ಆತನಿಗೆ ಕಾಂತಿಯನ್ನುಂಟು ಮಾಡಿರುವಳು. ಅವಳು ಎಲ್ಲ ವಿಧದಿಂದಲೂ ಬಿಳುಪಾಗಿರುವಳು. ಇದು ಸತ್ವಗುಣವನ್ನೇ ಸೂಚಿಸುತ್ತದೆ. ಜ್ಞಾನವು ಯಾವಾಗಲೂ ಸತ್ವದಿಂದಲೇ ಹುಟ್ಟುವದು. ಜ್ಞಾನಮಯಳೇ ಆದ ಸರಸ್ವತಿಯು ಹೀಗೆ ನನ್ನ ಮನಸ್ಸನ್ನು ಪ್ರಕಾಶಗೊಳಿಸುತ್ತಾ ಅಂತರಂಗದಲ್ಲಿ ಕ್ರೀಡಿಸುತ್ತಿರಲಿ ಎಂದು ಕೇಳಿ ಕೊಳ್ಳಲಾಗಿದೆ.

ಶಾರದಾದೇವಿಯು ಕಾಶ್ಮೀರಪುರವಾಸಿನಿಯೆಂದೂ ಇಲ್ಲಿ ಸ್ತುತಿಸಿದೆ. ಇದರ ಅಭಿಪ್ರಾಯವು ಹೆಚ್ಚಾಗಿ ತಿಳಿಯದು. ಶಂಕರವಿಜಯದ ಕಥೆಯಂತೆ ಕಾಶ್ಮೀರದಲ್ಲಿರುವ ಶಾರದಾದೇವಾಲಯದಲ್ಲಿ ನಾಲ್ಕು ದಿಕ್ಕುಗಳಲ್ಲಿಯೂ ಇರುವ ನಾಲ್ಕು ದ್ವಾರಗಳಲ್ಲಿ ನೆಲೆಸಿದ್ದ ಮಹಾಪಂಡಿತರುಗಳು ಆಯಾ ದಿಕ್ಕಿನಿಂದ ಬಂದ ವಿದ್ವಾಂಸರನ್ನೆಲ್ಲ ವಾದದಲ್ಲಿ ಸೋಲಿಸಿಬಿಡುತ್ತಿದ್ದರಂತೆ. ಆದರೆ ವಾದದಲ್ಲಿ ಗೆದ್ದರೆ ಮಾತ್ರ ಅಲ್ಲಿರುವ ಸರ್ವಜ್ಞ ಪೀಠದಲ್ಲಿ ಕುಳ್ಳಿರಿಸಿ ಗೌರವಿಸುತ್ತಿದ್ದರಂತೆ. ಇಂಥ ಗೌರವವು ದೊರಕುವದು ಸರಸ್ವತಿಯ ಕೃಪೆಯಿಂದಲೇ ಸಾಧ್ಯ - ಎಂದು ಹೇಳಬೇಕಾದದ್ದಿಲ್ಲವಷ್ಟೆ ! ಉಭಯಭಾರತಿಯನ್ನು ಗೆದ್ದ ಶ್ರೀಶಂಕರರು ಮಾತ್ರ ದಕ್ಷಿಣದಿಂದ ಹೋಗಿದ್ದ ವಿದ್ವಾಂಸರಲ್ಲಿ ಸರ್ವಜ್ಞರೆನಿಸಿದರೆಂದು ಅಲ್ಲಿ ತಿಳಿಸಿದೆ. ಆದ್ದರಿಂದ ಕಾಶ್ಮೀರವು ಸರಸ್ವತಿಗೆ ತೌರುಮನೆಯೆಂದು ಹೇಳಬಹುದು. ಈಗ ಹೇಗಿದೆಯೋ ತಿಳಿಯದು. ಅಂತೂ ಕಾಶ್ಮೀರಪುರವಾಸಿನಿಯೆಂದು ದೇವಿಯನ್ನು

ಇಲ್ಲಿ ಹೆಸರಿಸಿದೆ. ಕೆಲವು ಶಂಕರವಿಜಯಗಳಲ್ಲಿ ದಕ್ಷಿಣದಲ್ಲಿರುವ ಕಾಂಚೀಪುರವನ್ನೇ ಸರ್ವಜ್ಞಪೀಠವಿರುವ ಸ್ಥಾನವೆಂದೂ ವರ್ಣಿಸಿದೆ. ಅದಕ್ಕೆ ಶ್ರೀಶಂಕರರು ಪೀಠಾಧಿಪತಿಗಳಾಗಿದ್ದು, ಕಾಮಾಕ್ಷಿ ಎಂಬ ಹೆಸರಿನಿಂದ ಶಾರದೆಯನ್ನು ಅರ್ಚಿಸಿ ಸರ್ವಜ್ಞರೆನಿಸಿದರೆಂದೂ ತಿಳಿಸಿರುತ್ತದೆ. ಕಾಶ್ಮೀರವೆಂಬುದು ಈಗ ಒಂದು ದೇಶದ ಹೆಸರಾಗಿದೆ. ಆ ಹೆಸರಿನ ಊರು ಇದ್ದಂತೆ ಕಾಣಲಿಲ್ಲ. ಶ್ರೀನಗರವೆಂಬುದೇನೋ ಕಾಶ್ಮೀರದ ರಾಜಧಾನಿಯಾಗಿರುವದು ನಿಜ. ಅದನ್ನು ಕಾಶ್ಮೀರಪುರವೆಂದು ಕರೆದಂತೆ ಕಾಣಲಿಲ್ಲ. ಹೇಗೆ ಇರಲಿ, ಸರಸ್ವತಿಯು ಎಲ್ಲಿದ್ದಾಳೋ ಅದೇ ಕಾಶ್ಮೀರಪುರವೆಂದು ಭಾವಿಸೋಣ. ಈ ದೇವಿಯನ್ನು ಸಾಧಕನು ನಮಸ್ಕರಿಸಿ "ಎಲೌ ದೇವಿಯೆ, ನೀನು ನನಗೆ ವಿದ್ಯಾದಾನವನ್ನು ಕರುಣಿಸು ; ಹಾಗೆಂದು ಭಕ್ತಿಯಿಂದ ನಿನ್ನನ್ನು ಬೇಡುವೆನು " - ಎಂಬಿದು ಶ್ಲೋಕಾರ್ಥವು. ಈ ಪದ್ಯವು ಮತ್ತೆ ಯಾವ ಗ್ರಂಥದಲ್ಲಾಗಲೀ ಪುರಾಣಗಳಲ್ಲಿಯಾಗಲಿ ಇದೆಯೊ, ಇಲ್ಲವೊ ತಿಳಿಯದು. ಭಕ್ತಿಯಿಂದ ದೇವಿಯನ್ನು ಪ್ರಾರ್ಥಿಸಲು ಇದು ತಕ್ಕ ಪದ್ಯವಾಗಿದೆ ಎಂಬಿದರಲ್ಲೇನೂ ಸಂಶಯವಿಲ್ಲ.

(ಉಪನಿಷತ್ತು)

ಅಕ್ಷಸೂತ್ರಾಂಕುಶಧರಾ ಪಾಶಪುಸ್ತಕಧಾರಿಣೀ ।
ಮುಕ್ತಾಹಾರಸಮಾಯುಕ್ತಾ ವಾಚಿ ತಿಷ್ಠತು ಮೇ ಸದಾ ॥
ಕಂಬುಕಂಠೀ ಸುತಾಮ್ರೋಷ್ಠೀ ಸರ್ವಾಭರಣಭೂಷಿತಾ ।
ಮಹಾಸರಸ್ವತೀದೇವೀ ಜಿಹ್ವಾಗ್ರೇ ಸನ್ನಿವೇಶ್ಯತಾಂ ॥
ಯಾ ಶ್ರದ್ಧಾ ಧಾರಣಾ ಮೇಧಾ ವಾಗ್ದೇವೀ ವಿಧಿವಲ್ಲಭಾ ।
ಭಕ್ತಜಿಹ್ವಾಗ್ರಸದನಾ ಶಮಾದಿಗುಣದಾಯಿನೀ ॥

ಈ ಶ್ಲೋಕಗಳಲ್ಲಿ ವಾಗ್ದೇವಿಯಾಗಿ ಸರಸ್ವತಿಯು ನಾಲಗೆಯ ಮೇಲೆ ನೆಲೆಸಲಿ - ಎಂದು ಕೇಳಿಕೊಳ್ಳಲಾಗಿದೆ. ಧ್ಯಾನಶ್ಲೋಕಗಳಲ್ಲಿ ವಾಗ್ದೇವಿಯೂ ಶಾರದೆಯೂ ಉಪಾಸಕರ ದೃಷ್ಟಿಯಿಂದ ಬೇರೆಬೇರೆಯೆಂದು ತಿಳಿಸಿದೆ. ವಾಗ್ದೇವಿಯು ಪದ್ಮ, ಗಿಳಿ, ಪುಸ್ತಕ, ಜಪಮಾಲೆಗಳನ್ನು ಧರಿಸಿರುತ್ತಾಳೆ. ಶಾರದೆಯು ವೀಣೆ, ಪುಸ್ತಕ, ಜಪಮಾಲೆ, ಅಭಯಹಸ್ತಗಳನ್ನು ಧರಿಸಿರುತ್ತಾಳೆ. ಹೀಗೆಯೇ ದೇವತಾಮೂರ್ತಿಗಳನ್ನು ಶಿಲ್ಪಿಗಳು ನಿರ್ಮಿಸಿರುತ್ತಾರೆ.

ಜನಸಾಮಾನ್ಯರು ವಾಗ್ದೇವಿಯೂ ಶಾರದೆಯೂ ಒಬ್ಬಳೇ ಎಂದು ಭಾವಿಸಿದ್ದರೆ ಆಶ್ಚರ್ಯವೇನಿಲ್ಲ. ಆದರೆ ಉಪಾಸಕರು ಮಾತ್ರ ತಮ್ಮ ಉಪಾಸ್ಯದೇವತೆಯ ಸ್ವರೂಪವನ್ನು ವಿಶೇಷವಾಗಿಯೇ ತಿಳಿದಿರಬೇಕು. ಇಲ್ಲವಾದರೆ ಧ್ಯಾನವು ನಿಶ್ಚಲವಾಗಿ ಸಾಗುವದಿಲ್ಲ. ಮಹಾಸರಸ್ವತಿಯನ್ನು ಈ ಪದ್ಯಗಳಲ್ಲಿ ಮೇಲಿನ ಎರಡು ವರ್ಣನೆಗಳಿಗಿಂತಲೂ ಬೇರೆಯಾಗಿಯೇ ತಿಳಿಸಿದೆ. ಈ ದೇವಿಯು ಅಕ್ಷಮಣಿಮಾಲೆ, ಅಂಕುಶ, ಪಾಶ, ಪುಸ್ತಕಗಳನ್ನು ಧರಿಸಿರುವಳು. ಮುತ್ತಿನ ಹಾರಗಳನ್ನು ತೊಟ್ಟಿರುವಳು. ಶಂಖದಂತೆ ಕಂಠಧ್ವನಿಯುಳ್ಳವಳಾಗಿರುವಳು. ಕೆಂಪಾದ ತುಟಿಯುಳ್ಳವಳಾಗಿ ಸಕಲಾಭರಣಭೂಷಿತೆಯಾಗಿರುವಳು. ಈಕೆಯೇ ಶ್ರದ್ಧಾ, ಮೇಧಾ, ಧಾರಣಾ, ವಿಧಿ ಎಂದರೆ ಬ್ರಹ್ಮನ ವಲ್ಲಭೆ - ಎಂಬ ಹೆಸರುಗಳಿಂದ ಕೂಡಿರುವಳು. ಭಕ್ತರುಗಳ ಬಾಯಲ್ಲಿ ನಲಿದಾಡುತ್ತಿರುವಳು. ಶಮಾದಿ ಗುಣಗಳನ್ನು ಉಂಟುಮಾಡುವವಳಾಗಿರುವಳು. ಇಂಥ ದೇವಿಯು ನನ್ನ ನಾಲಗೆಯ ತುದಿಯಲ್ಲಿ ನೆಲಸಲಿ - ಎಂದು ಕೇಳಿಕೊಳ್ಳಲಾಗಿದೆ. ಹೀಗೆ ಸರಸ್ವತಿಯು ವಿಶೇಷವಾಗಿ ವಾಗ್ರೂಪದಿಂದ ನನ್ನನ್ನು ಅನುಗ್ರಹಿಸಲಿ - ಎಂದು ಕೇಳಿಕೊಂಡಿರುವದು ಒಂದು ರೀತಿಯ ತಪಃಫಲವೆಂದೇ ತಿಳಿಯಬೇಕು. ದೇವಿಯ ಕೃಪೆಯಿಲ್ಲದೆ ಬಾಯಲ್ಲಿ ಒಳ್ಳೆಯ ಮಾತುಗಳು ಬರಲಾರವು. ಭಗವದ್ಗೀತೆಯಲ್ಲಿ ತಿಳಿಸಿರುವಂತೆ - ಯಾರನ್ನೂ ಮನನೋಯಿಸದಂತೆ ಮಾತನಾಡಿಸುವದು, ಸತ್ಯವನ್ನೇ ನುಡಿಯುವದು, ಪ್ರಿಯವೂ ಹಿತವೂ ಆಗಿರುವ ಮಾತನ್ನೇ ವ್ಯವಹಾರದಲ್ಲಿ ಬಳಸುವದು, ವೇದಾಧ್ಯಯನವನ್ನಾಗಲೀ, ವೇದಸಮಾನವಾದ ಸದ್ಗ್ರಂಥಗಳನ್ನಾಗಲಿ ಪಠಿಸುವದು - ಇವೆಲ್ಲವೂ ವಾಙ್ಮಯತಪಸ್ಸೆನಿಸುವದು. ಇಂಥ ತಪಃಫಲವೇ ವಾಗ್ದೇವಿಯ ಅನುಗ್ರಹವೆಂದು ತಿಳಿಯಬೇಕು. ಈಗ ಮುಂದಿನ ಗ್ರಂಥವನ್ನು ವಿಚಾರಮಾಡೋಣ.

(ಉಪನಿಷತ್ತು)

ನಮಾಮಿ ಯಾಮಿನೀನಾಥರೇಖಾಲಂಕೃತಕುಂತಲಾಮ್ ।
ಭವಾನೀಂ ಭವಸಂತಾಪನಿರ್ವಾಪಣಸುಧಾನದೀಮ್ ॥

ಯಃ ಕವಿತ್ವಂ ನಿರಾತಂಕಂ ಭುಕ್ತಿಂ ಮುಕ್ತಿಂ ಚ ವಾಂಛತಿ ।
ಸೋಽಭ್ಯರ್ಚ್ಯೈನಾಂ ದಶಶ್ಲೋಕ್ಯಾ ನಿತ್ಯಂ ಸ್ತೌತಿ ಸರಸ್ವತೀಮ್ ॥

ತಸ್ಯೈವಂ ಸ್ತುವತೋ ನಿತ್ಯಂ ಸಮಭ್ಯರ್ಚ್ಯ ಸರಸ್ವತೀಮ್ ।
ಭಕ್ತಿಶ್ರದ್ಧಾಭಿಯುಕ್ತಸ್ಯ ಷಣ್ಮಾಸಾತ್ ಪ್ರತ್ಯಯೋ ಭವೇತ್ ॥
ತತಃ ಪ್ರವರ್ತತೇ ವಾಣೀ ಸ್ವೇಚ್ಛಯಾ ಲಲಿತಾಕ್ಷರಾ ।
ಗದ್ಯಪದ್ಯಾತ್ಮಕೈಃ ಶಬ್ದೈರಪ್ರಮೇಯೈರ್ವಿವಕ್ಷಿತೈಃ ।
ಅಶ್ರುತೋ ಬುಧ್ಯತೇ ಗ್ರಂಥಃ ಪ್ರಾಯಃ ಸಾರಸ್ವತಃ ಕವಿಃ ॥

ಈ ಭಾಗದಲ್ಲಿ ಕಾವ್ಯರಚನಾಶಕ್ತಿಯನ್ನು, ಹಾಗೂ ಐಹಿಕವಾದ ಐಶ್ವರ್ಯ ಭೋಗಗಳು, ಮೋಕ್ಷ - ಇವುಗಳನ್ನು ಬಯಸುವವನು ಈ ಹಿಂದೆ ತಿಳಿಸಿರುವ ಹತ್ತು ಪದ್ಯಗಳಿಂದ ದೇವಿಯನ್ನು ಪ್ರತಿದಿನವೂ ಪೂಜಾನಂತರದಲ್ಲಿ ಸ್ತುತಿಸಬೇಕೆಂದು ತಿಳಿಸಿರುತ್ತದೆ. ಈಕೆಯಾದರೋ ರಾತ್ರಿಗೆ ಒಡೆಯನಾದ ಚಂದ್ರನ ರೇಖೆಯಿಂದ ಅಲಂಕರಿಸಲ್ಪಟ್ಟ ಜಡೆಯುಳ್ಳವಳಾಗಿರುವಳು. ಸಂಸಾರ ತಾಪವನ್ನು ಶಾಂತಗೊಳಿಸುವ ಅಮೃತದ ನದಿಯಾಗಿರುವಳು. ಇಂಥಾ ಮಹಾದೇವಿಯನ್ನು ಭಕ್ತಿ ಶ್ರದ್ಧೆಯಿಂದ ಪೂಜಿಸಿ ಸ್ತೋತ್ರ ಮಾಡಿದಲ್ಲಿ ಆರುತಿಂಗಳುಗಳೊಳಗಾಗಿ ಅನುಭವವುಂಟಾದೀತು - ಎಂದು ಅಭಿಪ್ರಾಯ. ಅನಂತರ ಆ ಸಾಧಕನ ಮುಖದಿಂದ ಕಾವ್ಯವಾಣಿಯು ನಿರರ್ಗಳವಾಗಿ ಹೊರಡುವದು. ಅದು ಲಲಿತವಾದ ಪದಗಳಿಂದ ಕೂಡಿರುವದು. ಗದ್ಯಪದ್ಯಾತ್ಮಕವಾಗಿಯೂ ಬೇಕಾದ ಉಪಯುಕ್ತ ವಿಚಾರವುಳ್ಳದ್ದಾಗಿಯೂ ಯಾರೂ ಕೇಳರಿಯದ ನೂತನವಾದದ್ದಾಗಿಯೂ ಇರುವದು. ಅಪ್ರಮೇಯವಾದ ವಸ್ತುವನ್ನು ಕುರಿತದ್ದಾಗಿರುವದು. ಬಹಳ ಮಟ್ಟಿಗೆ ಇಂಥ ಗ್ರಂಥಗಳನ್ನು ರಚಿಸುವವನು ಸರಸ್ವತೀದೇವಿಯ ಅನುಗ್ರಹಸಂಪನ್ನನಾಗಿಯೇ ಇರುವನು ; ಹಾಗೂ ಕವಿಯೆನಿಸುವನು. ಕವಿಯ ಕೃತಿಯನ್ನೇ ಕಾವ್ಯವೆನ್ನುವರು. ಕಾವ್ಯಕ್ಕೂ ಲೌಕಿಕಭಾಷೆಗೂ ಅಭಿಪ್ರಾಯಗಳೂ ಅರ್ಥಗಳೂ ಬಹಳಮಟ್ಟಿಗೆ ಒಂದೇ ಆಗಿದ್ದರೂ ಚಮತ್ಕಾರವಾಗಿಯೂ ಮನೋಹರವಾಗಿ ಮಧುರವಾಗಿಯೂ ಇರುವ ವಾಙ್ಮಯವನ್ನು ಕಾವ್ಯವೆಂದು ಕರೆಯುವರು. ಉದಾಹರಣೆಗೆ : 'ಶುಷ್ಕವೃಕ್ಷೋಽಸ್ತಿ, ತದುಪರಿ ಕೃಷ್ಣ ಸರ್ಪೋಽಸ್ತಿ' (ಒಣಗಿದ ಮರದ ತುಂಡು ಬಿದ್ದಿದೆ ; ಅದರ ಮಲೆ ಹಾವು ಕುಳಿತಿದೆ) ಎಂದರೆ ಲೌಕಿಕವಾಕ್ಯವಾಯಿತು. ಇದನ್ನೇ **'ನೀರಸತರುರಿಹ ವಿಲಸತಿ ತದುಪರಿ ನಿವಸತಿ ಫಣಿಪತಿರಾಜಃ'** ಎಂದು ಛಂದೋಬದ್ಧವಾಗಿ ರಸಯುಕ್ತವಾಗಿ ಪಠಿಸಿದರೆ ಕಾವ್ಯ ವೆನಿಸುವದು. ಇನ್ನು ಅಪ್ರಮೇಯವಸ್ತು ವಿಷಯಕ ಕಾವ್ಯವೆಂದರೆ - ರಾಮಾಯಣ ದಂಥವುಗಳು. ಅದರಲ್ಲಿ ಪ್ರಮಾಣ ಪ್ರಮೇಯಾದಿ ವಿಕಲ್ಪಗಳನ್ನು ಮೀರಿದ

ಅವಾಙ್ಮನಸಗೋಚರವಾದ ಪರಬ್ರಹ್ಮವಸ್ತುವನ್ನೇ ಶ್ರೀರಾಮನೆಂದು ಕಲ್ಪಿಸಿ ವರ್ಣಿಸಲಾಗಿದೆ. ಈ ಮಹಾಕಾವ್ಯವನ್ನು ಬರೆದಿರುವ ಆದಿಕವಿಯೆನಿಸಿದ ವಾಲ್ಮೀಕಿಯು ಸರಸ್ವತೀಕೃಪೆಯಿಂದಲೇ ಕೃತಕೃತ್ಯನೆನಿಸಿರುತ್ತಾನೆ. ಆದ್ದರಿಂದ ವೈದಿಕ - ಲೌಕಿಕ ಸಾಹಿತ್ಯ ದ್ರಷ್ಟಾರರಾದ ರಸಋಷಿಗಳೂ ಮಹಾಕವಿಗಳೂ ಸರಸ್ವತಿಯ ವರಪುತ್ರರೆಂದು ತಿಳಿಯಬೇಕು.

(ಉಪನಿಷತ್ತು)

ಸಾ ಹೋವಾಚ ಸರಸ್ವತೀ -

ಆತ್ಮವಿದ್ಯಾ ಮಯಾ ಲಬ್ಧಾ ಬ್ರಹ್ಮಣೈವ ಸನಾತನೀ ।
ಬ್ರಹ್ಮತ್ವಂ ಮೇ ಸದಾ ನಿತ್ಯಂ ಸಚ್ಚಿದಾನಂದರೂಪತಃ ॥
ಪ್ರಕೃತಿತ್ವಂ ತತಃ ಸೃಷ್ಟಂ ಸತ್ವಾದಿಗುಣಸಾಮ್ಯತಃ ।
ಸತ್ಯೇವಾಭಾತಿ ಚಿಚ್ಛಾಯಾ ದರ್ಪಣೇ ಪ್ರತಿಬಿಂಬವತ್ ॥
ತೇನ ಚಿತ್ಪ್ರತಿಬಿಂಬೇನ ತ್ರಿವಿಧಾ ಭಾತಿ ಸಾ ಪುನಃ ।
ಪ್ರಕೃತ್ಯವಚ್ಛಿನ್ನತಯಾ ಪುರುಷತ್ವಂ ಪುನಶ್ಚ ಮೇ ॥

'' ಸರಸ್ವತಿಯು ಹೀಗೆಂದಳು ''-ಎಂದು ಆರಂಭವಾಗಿರುವ ಈ ಪದ್ಯಗಳಲ್ಲಿ ಕೆಲವು ವೇದಾಂತಪ್ರಕ್ರಿಯೆಗಳನ್ನು ವಿವರಿಸಲಾಗಿದೆ. ಅವುಗಳನ್ನೂ ವಿಚಾರ ಮಾಡೋಣ. ಬ್ರಹ್ಮವೊಂದೇ ಪರಮಾರ್ಥವು ಎಂಬಿದು ವೇದಾತಂಸಿದ್ಧಾಂತವು. ಅದನ್ನು ತಿಳಿಸಿಕೊಡಲು ಉಪಯೋಗಿಸಿರುವ ಕ್ರಮಗಳನ್ನು ಪ್ರಕ್ರಿಯೆಗಳೆನ್ನುವರು. ಅಂಥವುಗಳಲ್ಲಿ ಸೃಷ್ಟಿ ಪ್ರಕ್ರಿಯೆಯೂ ಒಂದಾಗಿರುತ್ತದೆ. ದೇವಿಯನ್ನು ಸೃಷ್ಟಿಕರ್ತಳು - ಎಂದರೆ ತಪ್ಪೇನೂ ಆಗಲಾರದು. ಆದರೆ ಸೃಷ್ಟಿಸಲ್ಪಟ್ಟಿರುವ ಪದಾರ್ಥಗಳು ಮಾತ್ರ ದೇವಿಗಿಂತ ಭಿನ್ನವೆಂದೂ ಸ್ವತಂತ್ರವೆಂದೂ ತಿಳಿದರೆ ತಪ್ಪಾಗುತ್ತದೆ. ಆದ್ದರಿಂದ ಇಲ್ಲಿ ದೇವಿಯೇ ತಿಳಿಸುತ್ತಿರುವಂತೆ ಬ್ರಹ್ಮವೆಂದರೂ ಪ್ರಕೃತಿಯೆಂದರೂ ಆಕೆಯೊಬ್ಬಳೇ ಸರಿ. ಶಬ್ದಗಳು ಸ್ತ್ರೀ - ಪುಂ ಲಿಂಗಗಳಲ್ಲಿ ಪ್ರಯೋಗಿಸಲ್ಪಟ್ಟಿದ್ದರೂ ಬ್ರಹ್ಮವು ಯಾವ ಲಿಂಗಕ್ಕೂ ಸೇರಿಲ್ಲ. ಬ್ರಹ್ಮವನ್ನರಿತವನು ಬ್ರಹ್ಮವೇ ಆಗಿಬಿಡುವದರಿಂದ ದೇವಿಯು ಇಲ್ಲಿ ತನ್ನನ್ನು ಬ್ರಹ್ಮವೆಂದೇ ತಿಳಿಸುತ್ತಿದ್ದಾಳೆ. ಮತ್ತು ಪರಬ್ರಹ್ಮದ ಕಡೆಯಿಂದಲೇ ತಾನು ಆತ್ಮವಿದ್ಯೆಯನ್ನು ಅರಿತುಕೊಂಡದ್ದಾಗಿಯೂ ಪ್ರಕಟಿಸಿರುತ್ತಾಳೆ. ಋಗ್ವೇದದಲ್ಲಿರುವ ದೇವೀ

ಸೂಕ್ತದಲ್ಲಿಯೂ ಇದೇ ಅಭಿಪ್ರಾಯವು ಅಡಗಿದೆ. ಅಲ್ಲಿ ದೇವಿಯು ರುದ್ರ, ವಸು, ಆದಿತ್ಯಾದಿ ಸಮಸ್ತದೇವತೆಗಳ ರೂಪದಿಂದಲೂ ತಾನೇ ಪ್ರಕಟಗೊಂಡಿರುವ ದಾಗಿಯೂ ಜಗದ್ವ್ಯಾಪಾರಗಳನ್ನೆಲ್ಲ ನಿರ್ವಹಿಸುತ್ತಿರುವದಾಗಿಯೂ ತಿಳಿಸಿರುತ್ತಾಳೆ. ಇದು ಆಕೆಯ ಬ್ರಹ್ಮಜ್ಞಾನದ ಫಲವೆಂದೇ ಹೇಳಬೇಕಾಗಿದೆ. ಸಚ್ಚಿದಾನಂದ ರೂಪಳಾಗಿಯೇ ಆಕೆಯು ಸದಾ ಇದ್ದುಕೊಂಡಿರುವಳು ಎಂದು ತಿಳಿಯಬೇಕು.

ಹೀಗೆ ದೇವಿಯು ಸ್ವಸ್ವರೂಪದಿಂದ ನಿತ್ಯಮುಕ್ತಳಾಗಿದ್ದುಕೊಂಡಿದ್ದರೂ ಅವಳನ್ನು ಜಗತ್ಕಾರಣಳೆಂದು ವ್ಯವಹಾರದೃಷ್ಟಿಯಿಂದ ಸಂಭೋಧಿಸಲಾಗುತ್ತದೆ. ಆಗ ಅವಳು ತಾನೇ ಪ್ರಕೃತಿಯೆನಿಸಿಬಿಡುವಳು. ಪ್ರಕೃತಿಯು ಗುಣತ್ರಯಗಳ ಸಾಮ್ಯವಾಗಿರುವದು. ಸಾಮ್ಯವು ಪ್ರಲಯವೆನಿಸುವದು. ವಿಕ್ಷೇಪವು ಅಥವಾ ಗುಣಾತಾರತಮ್ಯವು ಸೃಷ್ಟಿಯೆನಿಸುವದು. ಈ ಚಲನೆಯು ನಿಜವಲ್ಲ. ಚಲಿಸದಂತೆ ಎಂದು ಅರ್ಥಮಾಡಬೇಕು. ಅದನ್ನೇ ಇಲ್ಲಿ 'ಸತ್ಯೇವ ' ಎಂದು ಇವಶಬ್ದದಿಂದ ತಿಳಿಸಲಾಗಿದೆ. ಚಿತ್ ಸ್ವರೂಪಕ್ಕೆ ಏನೊಂದೂ ವಿಕಾರವಿಲ್ಲವಾದರೂ ಸ್ಫಟಿಕವು ದಾಸವಾಳದ ಹೂವಿನ ಸಾನ್ನಿಧ್ಯದಿಂದ ಕೆಂಪಾಗಿ ತೋರುವಂತೆ - ದಾಸವಾಳದ ಹೂವನ್ನು ಉಪಾಧಿಯೆನ್ನುವಂತೆ ಇಲ್ಲಿಯೂ ಅವಿದ್ಯೋಪಾಧಿಯನ್ನು ಕಲ್ಪಿಸಿ ದೇವಿಯನ್ನು ಸೃಷ್ಟಿಕರ್ತಳೆಂದಿದೆ. ಇದರ ಪ್ರಯೋಜನವೇನೆಂದರೆ : ದೇವಿಯ ಮಹಿಮೆಯು - ಆಕೆಯು ಹೀಗೆ ಪ್ರಕೃತಿಮಾತೆಯಾಗಿ ಜಗತ್ತನ್ನು ಹಡೆದಾಗಲೇ - ಎಲ್ಲರಿಗೂ ವ್ಯಕ್ತವಾಗುವದೇ ಆಗಿದೆ. ಇಲ್ಲವಾದರೆ ದೇವಿಯನ್ನು ಅಜ್ಞರು ಮನಸ್ಸಿಗೇ ತಂದುಕೊಳ್ಳಲಾರರು. ಆದ್ದರಿಂದ ದೇವಿಯು 'ಚಿತ್' ಸ್ವರೂಪಳಾಗಿದ್ದುಕೊಂಡು ತನ್ನ ಶಕ್ತಿಯನ್ನೇ 'ಚಿದಾಭಾಸ'ವಾಗಿ ಪ್ರಕಟಿಸಿರುತ್ತಾಳೆ. ಚಿದಾಭಾಸದಲ್ಲಿಯೂ ಚಿತ್ತೇ ತಿರುಳಾಗಿದೆ. ಅಭಾಸವು 'ಛಾಯೆ' ಯೆನಿಸಿದೆ. ಹೇಗೆ ಮನುಷ್ಯನ 'ನೆರಳು' ಮನುಷ್ಯನಿಗಿಂತ ಬೇರೆಯಲ್ಲವೋ ಅದು ತೋರಿದ್ದರಿಂದ ಸದ್ವಿತೀಯತ್ವವು ಅವನಿಗೆ ಬರಲಾರದೋ ಹಾಗೆ ದೇವಿಯ ಚಿಚ್ಛಾಯೆಯು ಪ್ರಕೃತಿಯೆನಿಸಿ ಮುಂದೆ ನಾನಾ ನಾಮ ರೂಪಗಳಾಗಿ ತೋರಿಕೊಂಡಾಗಲೂ ದೇವಿಯ ಅದ್ವಿತೀಯತ್ವಕ್ಕೇನೂ ಹಾನಿಯಿಲ್ಲ. ಕನ್ನಡಿಯಲ್ಲಿ ಪ್ರತಿಬಿಂಬವು ತೋರಿದಂತೆ ವಿಶ್ವರೂಪಿಣಿಯಾಗಿ ದೇವಿಯು ಪ್ರಕಟವಾಗಿರುವಳು. ಈ ಪ್ರತಿಬಿಂಬದ ತೋರುವಿಕೆಯ ದೆಸೆಯಿಂದ ವ್ಯವಹಾರಾವಸ್ಥೆಯಲ್ಲಿ ಪ್ರಕೃತಿ, ಪುರುಷ, ಜಗತ್ತು - ಎಂಬ ತ್ರಿಪುಟಿಯು ಉಂಟಾಗಿರುವದು. ಈ ತ್ರಿಪುಟಿಯನ್ನೇ

ಬ್ರಹ್ಮ, ಜೀವ, ಜಗತ್ತೆಂದೂ ; ಚಿತ್ತು, ಚಿದಾಭಾಸ, ನಾಮರೂಪಗಳೆಂದೂ ಶಾಸ್ತ್ರದಲ್ಲಿ ಕರೆದಿದೆ. ಈ ತತ್ತ್ವವನ್ನರಿತು ಭೇದಬುದ್ಧಿಯನ್ನು ಕೈಬಿಟ್ಟು ನನ್ನ ಸ್ವರೂಪವನ್ನೇ ತಿಳಿದುಕೊಳ್ಳಿರಿ - ಎಂದು ಇಲ್ಲಿ ದೇವಿಯು ಉಪದೇಶಿಸಿರುತ್ತಾಳೆ.

(ಉಪನಿಷತ್ತು)

ಶುದ್ಧಸತ್ವಪ್ರಧಾನಾಯಾಂ ಮಾಯಾಯಾಂ ಬಿಂಬಿತೋ ಹ್ಯಜಃ ।
ಸತ್ವಪ್ರಧಾನಾ ಪ್ರಕೃತಿರ್ಮಾಯೇತಿ ಪ್ರತಿಪಾದ್ಯತೇ ॥
ಸಾ ಮಾಯಾ ಸ್ವವಶೋಪಾಧಿಸ್ಸರ್ವಜ್ಞಸ್ಯೇಶ್ವರಸ್ಯ ಹಿ ।
ವಶ್ಯಮಾಯತ್ವಮೇಕತ್ವಂ ಸರ್ವಜ್ಞತ್ವಂ ಚ ತಸ್ಯ ತು ॥
ಸಾತ್ವಿಕತ್ವಾತ್ ಸಮಷ್ಟಿತ್ವಾತ್ ಸಾಕ್ಷಿತ್ವಾಜ್ಜಗತಾಮಪಿ ।
ಜಗತ್ಕರ್ತುಮಕರ್ತುಂ ವಾ ಚಾನ್ಯಥಾ ಕರ್ತುಮೀಶತೇ ।
ಯಸ್ಸ ಈಶ್ವರ ಇತ್ಯುಕ್ತಃ ಸರ್ವಜ್ಞತ್ವಾದಿಭಿರ್ಗುಣೈಃ ॥

ಈ ಪದ್ಯಗಳಲ್ಲಿ ದೇವಿಯು ಮಾಯೆ, ಈಶ್ವರ - ಇವರುಗಳ ತತ್ತ್ವವನ್ನು ತಿಳಿಸುತ್ತಿದ್ದಾಳೆ. ಮಾಯೆ ಎಂದರೆ ಯಾವದು ಯುಕ್ತಿಗೆ ಹೊಂದುವದಿಲ್ಲವೋ, ಆದರೆ ನಡೆದೇಹೋಗಿರುವದೋ ಅದನ್ನು ಮಾಯೆ - ಎನ್ನುವರು. ಉದಾಹರಣೆಗೆ - ಕಂಬದಿಂದ ಯಾವ ಚೇತನವಸ್ತುವೂ ಹುಟ್ಟಲಾರದೆಂಬುದು ನಿಯಮವು. ಯಾರಾದರೂ ಒಂದು ವಸ್ತುವು ಕಂಬದಿಂದ ಹುಟ್ಟಿತು - ಎಂದರೆ ಅದು ಯುಕ್ತಿ ವಿರುದ್ಧವಾದ್ದರಿಂದ ಸರಿಯಲ್ಲ - ಎಂದು ನಾವು ಹೇಳಿಬಿಡುತ್ತೇವೆ. ಏಕೆಂದರೆ ಹಸುವು ಕರು ಹಾಕುವ ಮುಂಚೆ ಗರ್ಭವಾಗಿದ್ದು ಆನಂತರ ಈಯುವಂತೆ ಕಂಬವೇನೂ ಗರ್ಭವಾಗಿರುವದಿಲ್ಲ. ಆದರೆ 'ಕಂಬದಿಂದ ನರಸಿಂಹ ದೇವರು ಹೊರಬಂದನು ' ಎಂದರೆ ಅದನ್ನು ಯುಕ್ತಿಗೆ ಹೊಂದಿಸುವುದು ಹೇಗೆ ? ಅಥವಾ ಯುಕ್ತಿವಿರುದ್ಧವೆಂದು ತಳ್ಳಿಹಾಕಲಾದೀತೆ ? ಅನುಭವವನ್ನು ಯುಕ್ತಿಯಿಂದ ಹೊಡೆಯಲಾಗುವದಿಲ್ಲ. ಇನ್ನು ಪೌರಾಣಿಕ ದೃಷ್ಟಾಂತವನ್ನೊಪ್ಪದವರಿಗೆ ಲೌಕಿಕದೃಷ್ಟಾಂತವನ್ನೂ ಕೊಡಬಹುದು. ಹೇಗೆಂದರೆ ರಂಧ್ರವಿಲ್ಲದೆ ಯಾವ ಪಾತ್ರೆಗಾಗಲಿ, ಶೀಸೆಗಾಗಲಿ ನೀರನ್ನು ತುಂಬಲಾಗುವದಿಲ್ಲ. ಆದರೆ ಎಳನೀರು ಬುರುಡೆಯಲ್ಲಿ ನೀರು ಹೇಗೆ ತುಂಬಿಕೊಂಡಿತು ? ಮರದ ಮೇಲೆ ಎತ್ತರದಲ್ಲಿ ಆಕಾಶದಲ್ಲಿ ನೀರೆಲ್ಲಿ ಬಂತು ? ಹಾಗೆ ಬರಬಹುದಾದರೆ ಪರಂಗಿಮರದ ಕಾಯಿಯಲ್ಲೇಕೆ ಎಳನೀರು ತುಂಬುವದಿಲ್ಲ ? ಇಂಥ ಪ್ರಶ್ನೆಗಳಿಗೆ ಯುಕ್ತಿಯಿಂದ

ಉತ್ತರವನ್ನು ಹೇಳಲಾಗುವದಿಲ್ಲ. ಆದರೆ ಅನುಭವವಿದೆ. ಹಾಗೆಯೇ ಸೃಷ್ಟಿಯ ಮೂಲವನ್ನು ವಿಚಾರ ಮಾಡಲು ಹೊರಟರೆ ಕೇವಲ ತರ್ಕಚತುರರಿಗೆ ನಿರಾಶೆಯೇ ಕಾದಿರುತ್ತದೆ. ಅಧ್ಯಾತ್ಮಜ್ಞಾನಿಗಳಾದರೊ, ಇಂಥ ಸಮಸ್ಯೆಗಳನ್ನು ಒಂದಾನೊಂದು ಅಂತರ್ದೃಷ್ಟಿಯಿಂದ ಪರಿಹರಿಸುತ್ತಾರೆ. ಹೇಗೆಂದರೆ ಜಗತ್ತಿನಲ್ಲಿ ಯಾವ ಸಮಸ್ಯೆಗೆ ಪರಿಹಾರವು ಕಂಡುಬರುವದಿಲ್ಲವೋ ಅದು ಕೂಡ ಒಂದಾನೊಂದು ಮೂಲವುಳ್ಳದ್ದಾಗಿರುವದು. ಆ ಮೂಲವಸ್ತುವೇ ಬ್ರಹ್ಮವು. ಅಥವಾ ದೇವಿಯು. ಬ್ರಹ್ಮವು ತಾನೇ ತನ್ನನ್ನೇ ನಾನಾರೀತಿಯಾಗಿ ಉಂಟು ಮಾಡಿಕೊಂಡಮೇಲೂ ರಹಸ್ಯವಾಗಿ ತರ್ಕಾತೀತವಾಗಿ ಉಳಿದುಕೊಂಡಿರುವದು. ಆದ್ದರಿಂದ ಬ್ರಹ್ಮದ ತೋರಿಕೆಗಳನ್ನು ಯುಕ್ತಿಗೆ ಹೊಂದಿಸುವ ಶ್ರಮವನ್ನು ಯಾರೂ ವಹಿಸಬಾರದು. ಅದಕ್ಕೆ ಬದಲಾಗಿ ತೋರಿಕೆಗಳನ್ನೇ ನೆಪಮಾಡಿಕೊಂಡು ಬ್ರಹ್ಮವನ್ನೇ ಪೂರ್ಣವಾಗಿ ಅರಿತುಕೊಳ್ಳಲು ಮುಂದಾಗಬೇಕು. ಇದರ ಬದಲು ವಿಜ್ಞಾನಶಾಸ್ತ್ರದವರ ಕ್ರಮದಂತೆ ತೋರಿಕೆಯ ಜಗತ್ತನ್ನು ವಿಭಜಿಸುತ್ತಾ ಅನ್ವೇಷಣೆಮಾಡಲು ಹೊರಟರೆ ತರ್ಕಾತೀತವಾದ, ನಿಯಮಾತೀತವಾದ ಬ್ರಹ್ಮದ ಈ ಮಾಯಾ ಸೃಷ್ಟಿಯಲ್ಲಿ ಪಾರುಗಾಣದೆ ಚಡಪಡಿಸಬೇಕಾಗುವದು. ಇದು ಎಂದಿಗೂ ಮಾಯೆಯನ್ನು ದಾಟುವ ಉಪಾಯವಲ್ಲ. ಆದ್ದರಿಂದ 'ಮಾಯಾವಿ'ಯ ಜ್ಞಾನದಿಂದ 'ಮಾಯೆ' ಯನ್ನು ವಶಪಡಿಸಿಕೊಳ್ಳುವದೇ ಜಾಣತನವು. ಮಾಯೆಯು ಒಂದು ರೀತಿಯಲ್ಲಿ ಈಶ್ವರನ ಶಕ್ತಿವಿಶೇಷವಾಗಿದ್ದು ಅವನ ಅಧೀನದಲ್ಲಿರುತ್ತದೆ. ಆದರೆ ಅದು ದ್ವಿತೀಯವಸ್ತುವಲ್ಲ. ಅದಕ್ಕೆ ಸ್ವತಂತ್ರವಾದ ಇರವೂ ಇಲ್ಲ. ಜಗತ್ತಿನ ಆದಿಕಾಲಕ್ಕೆ ಇದೇ ಮಾಯೆಯು ಸತ್ವಗುಣಪ್ರಧಾನವಾಗಿದ್ದುಕೊಂಡಿತ್ತು. ಅದರಲ್ಲಿ ಬ್ರಹ್ಮದ ಪ್ರತಿಬಿಂಬವು ತೋರಿಕೊಂಡಿತು. ಆ ಪ್ರತಿಬಿಂಬವೇ 'ಜೀವ'ರೆನಿಸಿತು. ಪ್ರತಿಬಿಂಬಗಳು ಎಷ್ಟೇ ಸಂಖ್ಯೆಯಲ್ಲಿ ತೋರಿಕೊಂಡರೂ ಮನುಷ್ಯನು ಒಬ್ಬನೇ ಆಗಿರುವಂತೆ ಆಗಲೂ ಬ್ರಹ್ಮವೊಂದೇ ಅದ್ವೀತಿಯವಾಗಿತ್ತು. ಆದರೆ ಅದನ್ನರಿಯದವರು ಬ್ರಹ್ಮದೊಡನೆ ಅದರ ತೋರಿಕೆಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡರು. ಇಂಥವರನ್ನು ತೃಪ್ತಿಗೊಳಿಸುವದಕ್ಕಾಗಿ ಬ್ರಹ್ಮವು 'ಈಶ್ವರ' (ಒಡೆಯ)ನೆನಿಸಿ ಮಾಯೆಯನ್ನು ಈಶಿತವ್ಯವಾಗಿ ಕಲ್ಪಿಸಿಕೊಂಡಿತು. ಇಷ್ಟು ಕಲ್ಪನೆಗಳು ಒಂದುಗೂಡೂವದೇ ತಡ - ಪ್ರಪಂಚವೆಲ್ಲವೂ ಹೆಣೆದುಕೊಂಡು ಬಿಟ್ಟಿತು. ಆಗ ಬ್ರಹ್ಮವು ಸರ್ವಜ್ಞನೂ ಸರ್ವಶಕ್ತನೂ ಆದ ಈಶ್ವರನೆಂದೂ ಜೀವರುಗಳೆಲ್ಲ ಈಶಿತವ್ಯರೆಂದೂ, ಪ್ರಕೃತಿಯು ಜೀವೇಶ್ವರರುಗಳನ್ನು

ಏಂಗಡಮಾಡುವ ಉಪಾಧಿಯೆಂದೂ ಆಗಿಬಿಟ್ಟಿತು. ಹೀಗೆ ಈಶ್ವರನ ಸಾನ್ನಿಧ್ಯದಲ್ಲಿ ನಾಮರೂಪಗಳು ವಿಸ್ತರಿಸುತ್ತಾ ಬಂದಂತೆಲ್ಲ ಆ ಗುಟ್ಟನ್ನು ಅರಿಯಲಾರದ ಅಜ್ಞರು ಅದನ್ನು ಮಾಯೆಯೆಂದೂ 'ಅಜಾ' ಎಂದೂ ಕರೆದರು. ಬ್ರಹ್ಮವು 'ಅಜಾ' ಮಾಯೆಯ ಪತಿಯಾದ 'ಅಜ' (ಟಗರು)ನೆನಿಸಿದರು. ಇವರಿಬ್ಬರ ಕೂಡುವಿಕೆಯು ಸೃಷ್ಟಿಮೂಲವಾಯಿತು - ಎಂದು ಈ ಪದ್ಯಗಳ ಅಭಿಪ್ರಾಯವು.

ಇಲ್ಲಿ ತಿಳಿಯಬೇಕಾದ ಇನ್ನೊಂದು ವಿಚಾರವಿದೆ. ಇಷ್ಟೆಲ್ಲ ಸೃಷ್ಟಿವಿಕಾರಗಳು ಹೊರತೋರಿಕೊಂಡರೂ ಬ್ರಹ್ಮದ ಅಸ್ತಿತ್ವ, ಜ್ಞಾನ, ಆನಂದಗಳನ್ನು ಮಾತ್ರ ಮಾಯೆಯಾಗಲಿ, ಪ್ರಕೃತಿಯಾಗಲಿ ಅಳವಡಿಸಿಕೊಳ್ಳಲಾಗಲಿಲ್ಲ. ಪ್ರಕೃತಿಯಲ್ಲಿ ಈ ಮೂರು ತತ್ತ್ವಗಳು ಕಂಡುಬಂದರೂ ಪಾನಕದಲ್ಲಿ ಕಂಡುಬಂದ ಸಿಹಿಯು ಸಕ್ಕರೆಯದೇ ಆಗಿರುವಂತೆ ಈ ಅಂಶಗಳು ಬ್ರಹ್ಮದ್ದೇ ಆಗಿವೆ. ಆದ್ದರಿಂದ ಬ್ರಹ್ಮದ ಆತ್ಮಭೂತವಾದ ಅಂಶತ್ರಯಗಳಿಂದ ಪ್ರಕೃತಿಯು ಸದಾ ಕೂಡಿಕೊಂಡೇ ಇದೆ. ಅದು ಬ್ರಹ್ಮದೊಡನೆ ಪ್ರಲಯದಲ್ಲಿ ಒಂದಾಗಿರುವಾಗ ಪ್ರಕೃತಿಯೆನಿಸಿರುವದು. ಸೃಷ್ಟಿಕಾಲದಲ್ಲಿ ಹೊರತೋರಿಕೊಂಡಾಗ ಮಾಯೆ ಎನಿಸುವದು. ಇದು ಹೇಗೇ ಇರಲಿ, ಬ್ರಹ್ಮವಿಲ್ಲದೆ ಪ್ರಕೃತಿಗೆ ಅಸ್ತಿತ್ವವಿಲ್ಲ. ಹೇಗೆ ಒಂದು ಎಂಬ ಸಂಖ್ಯೆಯಿಲ್ಲದೆ ಸೊನ್ನೆಗಳಿಗೆ ಬೆಲೆಯಿಲ್ಲವೋ ಅದುಕೂಡ -ಸೊನ್ನೆಗಳು ಒಂದರ ಮುಂದೆಯೇ ಇರಬೇಕೋ ಒಂದೇ - ತಾನೊಂದೇ ಎಲ್ಲಾ ಸೊನ್ನೆಗಳನ್ನೂ ಆಳುತ್ತದೆಯೋ ಹಾಗೆಯೇ ಒಂದರ ಸ್ಥಾನದಲ್ಲಿರುವ ಬ್ರಹ್ಮವು ಪ್ರಕೃತಿ - ಮಾಯೆ - ನಾಮರೂಪಗಳಿಗೆಲ್ಲ ಆತ್ಮನಾಗಿದೆ. ಈ ಅರ್ಥದಲ್ಲಿ ಬ್ರಹ್ಮವು ಈಶ್ವರನೆನಿಸಿ, ಮಾಯೆಯನ್ನು ತನ್ನ ಅಧೀನದಲ್ಲಿಟ್ಟುಕೊಂಡು ಅದರಿಂದ ಸದ್ವಿತೀಯವಾಗದೆ ಅದ್ವಿತೀಯವಾಗಿಯೇ ಏಕವಾಗಿಯೇ ಸರ್ವಜ್ಞವಾಗಿಯೇ ಇದ್ದುಕೊಂಡಿದೆ. ಇಂಥ ಸಕಲಶಕ್ತಿವಿಶಿಷ್ಟವಾದ ಬ್ರಹ್ಮವು ತನ್ನಲ್ಲಿ ವಿಕಾರವಿಲ್ಲದ್ದಾಗಿರುವದರಿಂದ ಮಾಯಾಸಾಕ್ಷಿಯಾಗಿ ಮಾತ್ರವೇ ಉಳಿದುಕೊಂಡು ಇಡಿಯ ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನು ನಿಯಮನಮಾಡುತ್ತಾ ತನ್ನ ಇಷ್ಟದಂತೆ ಪ್ರಪಂಚವನ್ನು ಉಂಟುಮಾಡುವದಕ್ಕಾಗಲಿ, ಬಿಡುವದಕ್ಕಾಗಲಿ, ಬದಲಾಯಿಸುವದಕ್ಕಾಗಲಿ, ಸ್ವಾತಂತ್ರ್ಯವನ್ನು ಪೂರ್ಣವಾಗಿ ಹೊಂದಿರುತ್ತದೆ. ಇಂಥ ಬ್ರಹ್ಮವನ್ನೇ ಸರ್ವಜ್ಞನೆಂದೂ, ಸರ್ವಶಕ್ತನೆಂದೂ, ಈಶ್ವರನೆಂದೂ, ಸರ್ವಸ್ವತಂತ್ರನೆಂದೂ, ದೇವಿ - ದೇವನೆಂದೂ ಬಲ್ಲವರು ಕರೆಯುತ್ತಾರೆ.

(ಉಪನಿಷತ್ತು)

ಶಕ್ತಿದ್ವಯಂ ಹಿ ಮಾಯಾಯಾಃ ವಿಕ್ಷೇಪಾಪ್ರತಿರೂಪಕಮ್ ।
ವಿಕ್ಷೇಪಶಕ್ತಿರ್ಲಿಂಗಾದಿಬ್ರಹ್ಮಾಂಡಾಂತಂ ಜಗತ್ಸೃಜೇತ್ ॥
ಅಂತರ್ದೃಗ್‌ದೃಶ್ಯಯೋರ್ಭೇದಂ ಬಹಿಶ್ಚ ಬ್ರಹ್ಮಸರ್ಗಯೋಃ ।
ಆವೃಣೋತ್ಯಪರಾ ಶಕ್ತಿಃ ಸಾ ಸಂಸಾರಸ್ಯ ಕಾರಣಮ್ ॥
ಸಾಕ್ಷಿಣಃ ಪುರತೋ ಭಾತಂ ಲಿಂಗದೇಹೇನ ಸಂಯುತಮ್ ।
ಚಿತಿಛಾಯಾಸಮಾವೇಶಾದ್ ಜೀವಃ ಸ್ಯಾದ್ವ್ಯಾವಹಾರಿಕಃ ॥

ಈ ಪದ್ಯಗಳಲ್ಲಿ ಮಾಯೆಯು ಪ್ರಭಾವವನ್ನೂ ಜೀವತತ್ತ್ವವನ್ನೂ ನಿರೂಪಿಸಲಾಗಿದೆ. ಬ್ರಹ್ಮವನ್ನರಿಯದವರಿಗೆ ನಿಜವಾಗಿಯೂ ಮಾಯೆಯು ದಾಟಲು ಅಸಾಧ್ಯವೇ ಸರಿ. ಹೇಗೆ ಎಚ್ಚರವಾಗುವವರೆಗೂ ಕನಸಿನಲ್ಲಾಗುತ್ತಿರುವ ಭಯ, ದುಃಖಗಳನ್ನು ದಾಟಲಾರೆವು - ಎನಿಸುವದೋ ಹಾಗೆಯೇ ಭಗವಂತನನ್ನು ಅರಿತುಕೊಳ್ಳುವವರೆಗೂ ಮಾಯೆಯ ಹಿಡಿತವಿದ್ದೇ ಇರುವದು. ಮಾಯೆಗೆ ವಿಕ್ಷೇಪ, ಆವರಣ - ಎಂಬ ಎರಡು ಶಕ್ತಿಗಳಿವೆ. ಅದು ತನ್ನ ವಿಕ್ಷೇಪಶಕ್ತಿಯಿಂದ ಹದಿನಾಲ್ಕು ಲೋಕಗಳನ್ನೊಳಗೊಂಡ ಬ್ರಹ್ಮಾಂಡರೂಪವಾದ ಜಗತ್ತನ್ನೇ ಸೃಷ್ಟಿಸುತ್ತದೆ. ಇನ್ನು ಆವರಣಶಕ್ತಿಯಿಂದಲಾದರೊ, ಹೊರಗಿನ ಜಗತ್ತಿನಲ್ಲಿ ಬ್ರಹ್ಮಕ್ಕೂ ಪ್ರಪಂಚಕ್ಕೂ ಇರುವ ವೈಲಕ್ಷಣ್ಯವನ್ನೂ ಒಳಗಡೆ ದೃಗ್ರೂಪನಾದ ಆತ್ಮನಿಗೂ ದೃಶ್ಯವಾದ ಅಂತಃಕರಣಾದಿಗಳಿಗೂ ಇರುವ ಭೇದವನ್ನೂ ಮುಚ್ಚಿಹಾಕಿ ಜೀವನಿಗೆ ತಾನು ಯಾರು ? ಎಲ್ಲಿಂದ ಬಂದೆನು ? ಎಂಬಿದೇನೂ ತಿಳಿಯದಂತೆ ಮಾಡಿಬಿಡುತ್ತದೆ. ಆದ್ದರಿಂದ ಈ ಆವರಣಶಕ್ತಿಯನ್ನು ಸಂಸಾರಕಾರಣವೆನ್ನುವರು. ಹೀಗೆ ಅವಿದ್ಯಾದೃಷ್ಟಿ ಅಥವಾ ಲೌಕಿಕದೃಷ್ಟಿಯಿಂದ ನೋಡಿದರೆ ಮಾಯೆಯೇ ಬ್ರಹ್ಮಕ್ಕಿಂತಲೂ ಮಿಗಿಲಾದುದೆಂಬ ಭಾವನೆಯು ಉಂಟಾಗಿಬಿಡುತ್ತದೆ. ಇಷ್ಟೇ ಅಲ್ಲ. ಸಾಕ್ಷಿಯ ಸಾನ್ನಿಧ್ಯದಲ್ಲಿ ಮಾತ್ರವೇ ತೋರಿಕೊಳ್ಳುವ ಈ ಮಾಯೆಯು ಸೂಕ್ಷ್ಮ ದೇಹವೆಂಬ ಉಪಾಧಿಯೊಡನೆ ಬೆರೆತಾಗ ಬ್ರಹ್ಮದಲ್ಲೇ ಜೀವತ್ವಭ್ರಾಂತಿಯನ್ನು ಉಂಟುಮಾಡಿ ಬಿಡುತ್ತದೆ. ನೆರಳನ್ನೂ ಮನುಷ್ಯನನ್ನೂ ವಿಂಗಡಿಸಿ ಅರಿತುಕೊಳ್ಳದಿರುವವನ ಸ್ಥಿತಿಯು ಹೇಗೋ ಹಾಗೆ ಚಿದ್ಬ್ರಹ್ಮದೊಡನೆ ಬೆರೆತ ಮಾಯೆಯು ಜೀವನನ್ನು ಬ್ರಹ್ಮಕ್ಕಿಂತ ಬೇರೆಯೆಂದು ಕಲ್ಪಿಸಿಬಿಡುತ್ತದೆ. ಇದೇ ಜೀವತತ್ತ್ವದ ವ್ಯಾವಹಾರಿಕ

ಸ್ಥಿತಿಯು. 'ಈ ಜೀವನೇ ನಾನು' ಎಂಬ ಅವಿದ್ಯೆಯಂತೂ ಸಕಲಸಂಸಾರಾನರ್ಥಗಳಿಗೂ ಮೂಲವೆಂದು ಹೇಳಬೇಕಾಗಿಯೇ ಇಲ್ಲ. ಆದ್ದರಿಂದ ಜೀವತತ್ತ್ವದ ಮಟ್ಟದಲ್ಲಿರುವವನು ಮಾಯೆಯನ್ನು ದೂಷಿಸಲು ಹೋಗಬಾರದು. ಅದನ್ನು ಭೇದಿಸುವೆನೆಂದೂ , ಗೆಲ್ಲುವೆನೆಂದೂ ಹಠತೊಡಬಾರದು. ಆದರ ಬದಲು ಮಾಯೆಯು ಎಲ್ಲಿಂದ ಹೊರಬೀಳುವದೋ ಆ ಮೂಲಕ್ಕೆ ಶರಣಾಗಬೇಕು. ಆಗ ಮಾಯೆಯನ್ನು ಗೆಲ್ಲಲು ಸಾಧ್ಯವಾಗುವದು. ಒಬ್ಬ ಮನುಷ್ಯನಿಗೆ ತನ್ನ ನೆರಳಿನ ಮೇಲೆ ಕೋಪವು ಬಂದಿತಂತೆ. ಅದನ್ನು ಹಿಡಿಯಲು ಓಡಿದನು. ಸಿಗಲಿಲ್ಲ. ಗುಂಡಿ ತೆಗೆದು ಹೂತುಬಿಡಲು ಯತ್ನಿಸಿದನು. ಗುಂಡಿಯಲ್ಲಿ ಕಾಣಿಸಿಕೊಂಡಂತೆಯೇ ಅದನ್ನು ಮುಚ್ಚಿದ ಮೇಲೂ ಮತ್ತೆ ಮೇಲೆಯೇ ಕಾಣಿಸಿಕೊಂಡಿತು. ಕೊನೆಗೆ ಸೋತು ಸಾಕಾಗಿ ಒಂದೆಡೆ ನಿಂತುಬಿಟ್ಟನು. ಆಗ ಅದೂ ನಿಂತಿತು ಆನಂತರ ಅವನ ಸ್ನೇಹಿತನೊಬ್ಬನು 'ಎಲೈ ಮಿತ್ರನೇ, ನೆರಳನ್ನು ಗೆಲ್ಲುವೆನು , ನಾಶಗೊಳಿಸುವೆನು ಎಂಬ ಹಠವನ್ನು ಬಿಡು ; ಅದು ಪದಾರ್ಥವಲ್ಲ; ನಿನ್ನ ನೆರಳೇ ; ನಿನಗಿಂತ ಬೇರೆಯಲ್ಲ' ಎಂದನಂತೆ. ಈ ಮಾಯೆಯೂ ಅಂಥದ್ದೇ ಆಗಿದೆ. ಅದು ನಮ್ಮ ಸ್ವರೂಪಭೂತನೇ ಆದ ಆತ್ಮನ ಪ್ರತಿಭಾವಸೇ - ಎಂದು ತಿಳಿಯುವದೇ ಮಾಯೆಯ ಜಯವು.

(ಉಪನಿಷತ್ತು)

ಅಸ್ಯ ಜೀವತ್ವಮಾರೋಪಾತ್ ಸಾಕ್ಷಿಣ್ಯಪ್ಯವಭಾಸತೇ ।
ಆವೃತೌ ತು ವಿನಿಷ್ಟಾಯಾಂ ಭೇದಾಭಾವೇ ಪ್ರಯಾತಿ ತತ್ ॥
ತಥಾ ಸರ್ಗಬ್ರಹ್ಮಣೋಶ್ಚ ಭೇದಮಾವೃತ್ಯ ತಿಷ್ಠತಿ ।
ಯಾ ಶಕ್ತಿಸ್ತದ್ವಶಾದ್ ಬ್ರಹ್ಮ ವಿಕೃತತ್ವೇನ ಭಾಸತೇ ॥
ಅತ್ರಾಪ್ಯಾವೃತಿನಾಶೇನ ವಿಭಾತಿ ಬ್ರಹ್ಮಸರ್ಗಯೋಃ ।
ಭೇದಸ್ತಯೋರ್ವಿಕಾರಃ ಸ್ಯಾತ್ ಸರ್ಗೇಣ ಬ್ರಹ್ಮಣಿ ಕ್ವಚಿತ್ ॥

ಈ ಪದ್ಯಗಳ ಅನ್ವಯವಾಗಲಿ, ಅಭಿಪ್ರಾಯವಾಗಲಿ ಸ್ಪಷ್ಟವಾಗಿ ತಿಳಿದು ಬರುವಂತಿಲ್ಲ. ಆದರೂ ಯಥಾಮತಿಯಾಗಿ ವಿವರಿಸುವೆನು. ಜೀವನೆಂಬುವನು ಸಾಕ್ಷಿ - ಹಾಗೂ ಅವಿದ್ಯೆಗಳ ಸಂಯೋಗದಿಂದಾಗಿರುತ್ತಾನೆ. ನಿಜವೇನೆಂದರೆ ಇಲ್ಲದ ಅವಿದ್ಯೆಗೂ ಇರುವ ಆತ್ಮನಿಗೂ ಸಂಯೋಗವೇ ಹೊಂದುವಂತಿಲ್ಲ. ಕನಸಿನ ಕಡುಬಿಗೂ ಎಚ್ಚರದ ಕಾಯಿಹಾಲಿಗೂ ಹೇಗೆ ಸಂಬಂಧವಾಗಲಾರದೋ

ಹಾಗೆಯೇ ಇದು. ಆದ್ದರಿಂದ ಪ್ರತ್ಯಗಾತ್ಮನನ್ನೇ ಅವಿದ್ಯಾದಶೆಯಲ್ಲಿ ಜೀವನೆಂದು ವ್ಯವಹರಿಸಲಾಗಿದೆ. ಈ ಅವಿದ್ಯಾರೂಪವಾದ ಅಧ್ಯಾಸವು ಅಥವಾ ಆರೋಪವು ಸಾಕ್ಷಿಯಲ್ಲೇ ಆಗಬೇಕು. ಏಕೆಂದರೆ ನಿಸ್ಸಾಕ್ಷಿಕವಾಗಿ ಅವಿದ್ಯೆಯೂ ಸಿದ್ಧವಾಗಲಾರದು. ಆದ್ದರಿಂದ ಜಾಣನಾದವನು ಪ್ರತ್ಯಗಾತ್ಮ ಚೈತನ್ಯವನ್ನು ಗುರುತಿಸುವ ಮೂಲಕ ಜೀವನ ಜೀವತ್ತ್ವವನ್ನು ನಿರಾಸ ಮಾಡಿಕೊಂಡು ಬ್ರಹ್ಮವೇ ತಾನೆಂದು ಅರಿತುಕೊಳ್ಳಬೇಕು. ಹಾಗೆ ಅರಿತುಕೊಳ್ಳುವವರೆಗೆ ಅವಿದ್ಯೆಯಿರುವದು. ಅದನ್ನೇ ಸಾಕ್ಷಿಗೆ ಆವರಣವೆಂದೂ ಕಲ್ಪಿಸಲಾಗಿದೆ. ಆ ಆವರಣವು ನಷ್ಟವಾಗಲಾಗಿ ಭೇದವಿಲ್ಲವಾಗಲು ಜೀವಭಾವವು ಹೊರಟುಹೋಗುವದು. ಇದೇ ರೀತಿಯಾಗಿ ಸೃಷ್ಟಿ ಹಾಗೂ ಸೃಷ್ಟಿ ಕರ್ತೃವೆಂದು ಆರೋಪಿಸಲ್ಪಟ್ಟಿರುವ ಬ್ರಹ್ಮ - ಈ ಎರಡನ್ನೂ ಅವಿದ್ಯಾವರಣನಿಮಿತ್ತವಾಗಿ ಭಿನ್ನಭಿನ್ನವೆಂದು ಕಂಡುಕೊಳ್ಳಲಾಗಿದೆ. ಇದೇ ಆವರಣಶಕ್ತಿಯೇ ಬ್ರಹ್ಮವನ್ನೂ ವಿಕಾರಗೊಳಿಸಿಬಿಟ್ಟಿದೆಯೋ ಎಂಬಂತೆಯೂ ಕಂಡುಬರುತ್ತದೆ. ಆದ್ದರಿಂದ ಇಲ್ಲಿಯೂ ಆವರಣ ನಾಶದಿಂದ ಜಗದ್ - ಬ್ರಹ್ಮಗಳ ನಡುವಣ ಭೇದವು ಇಲ್ಲವಾಗುವದು. ಆವರಣ ಶಕ್ತಿಯು ನಾಶವೆಂದರೆ ಎಣ್ಣೆಯನ್ನು ಸೀಗೆಕಾಯಿಯಿಂದ ತೊಳೆದು ನಾಶಮಾಡಿದಂತಲ್ಲ. ಮತ್ತೇನೆಂದರೆ ಬ್ರಹ್ಮದಲ್ಲಿ ಅವಿದ್ಯೆಯಿಲ್ಲವೆಂಬ ಹಾಗೂ ತಾನೇ ಬ್ರಹ್ಮವೆಂಬ ತಿಳಿವಳಿಕೆಯಿಂದ ಬಾಧಮಾಡುವದೇ ಆಗಿದೆ. ಇದರ ಪ್ರಯೋಜನವೇನೆಂದರೆ : ಬ್ರಹ್ಮಜ್ಞಾನದಿಂದ ಪ್ರಪಂಚವನ್ನು ಬಾಧಮಾಡಿಕೊಂಡವನು ಮುಕ್ತನಾಗಿಬಿಡುವನು. ಜ್ಞಾನ ವಿಲ್ಲದ ಅವಿದ್ಯಾವಂತರಿಗೆ ಎಂದಿನಂತೆ ಪ್ರಪಂಚವು ಇದ್ದುಕೊಂಡೇ ಇರುವದು. ಹೀಗೆ ವ್ಯವಹಾರವನ್ನೂ ಪರಮಾರ್ಥವನ್ನೂ ಆಯಾ ಕ್ಷೇತ್ರಗಳಲ್ಲಿ ಅನುಭವವಿರೋಧವಿಲ್ಲದಂತೆ ಹೊಂದಿಸಿ ತಿಳಿದುಕೊಳ್ಳುವದೇ ಅವಿದ್ಯೆಯಿಂದ ಬಿಡುಗಡೆಯು - ಎಂದಭಿಪ್ರಾಯ.

(ಉಪನಿಷತ್ತು)

ಅಸ್ತಿ ಭಾತಿ ಪ್ರಿಯಂ ರೂಪಂ ನಾಮ ಚೇತ್ಯಂಶಪಂಚಕಮ್ ।
ಆದ್ಯತ್ರಯಂ ಬ್ರಹ್ಮರೂಪಂ ಜಗದ್ರೂಪಂ ತತೋದ್ವಯಮ್ ॥
ಉಪೇಕ್ಷ್ಯ ನಾಮರೂಪೇ ದ್ವೇ ಸಚ್ಚಿದಾನಂದತತ್ಪರಃ ।
ಸಮಾಧಿಂ ಸರ್ವದಾ ಕುರ್ಯಾತ್ ಹೃದಯೇ ವಾಽಥವಾ ಬಹಿಃ ॥

ಈ ಪದ್ಯಗಳಲ್ಲಿ ಬ್ರಹ್ಮ - ಜಗತ್ತುಗಳ ಲಕ್ಷಣವನ್ನೂ ಸಮಾಧಿವಿಚಾರವನ್ನೂ ಪ್ರಸ್ತಾಪಿಸಿದೆ. ಈ ರೀತಿಯ ವಿವರಗಳು ಶಾಂಕರಪ್ರಸ್ಥಾನತ್ರಯಭಾಷ್ಯಗಳಲ್ಲಿ ಕಂಡುಬರುವದಿಲ್ಲ. ಆದರೂ ಇಲ್ಲಿರುವಂತೆ ವಿವರಿಸಲಾಗುವದು. ಬ್ರಹ್ಮವು ಸಚ್ಚಿದಾನಂದರೂಪವೆಂಬುದು ವೇದಾಂತಸಿದ್ಧಾಂತವು. ಬ್ರಹ್ಮದಿಂದ ಹೊರ ತೋರಿರುವ ಜಗತ್ತೂ ಹಾಗೆಯೇ ಸಚ್ಚಿದಾನಂದರೂಪವಾಗಿದ್ದುಕೊಂಡಿರಬೇಕಾದದ್ದೇ ನ್ಯಾಯವು. ಸೂರ್ಯನು ಪ್ರಕಾಶಸ್ವರೂಪನೆಂದಮೇಲೆ ಸೂರ್ಯನ ಕಿರಣಗಳೂ ಪ್ರಕಾಶರೂಪಗಳೇ - ಎಂದು ಪ್ರತ್ಯೇಕವಾಗಿ ಹೇಳಬೇಕಾದದ್ದಿಲ್ಲವಷ್ಟೇ? ಹಾಗೆಯೇ ಇಲ್ಲಿಯೂ ತಿಳಿಯಬೇಕು. ಆದರೆ ಜಗತ್ತಿಗೆ ಈ ಸಚ್ಚಿದಾನಂದ ಗುಣಗಳ ಜೊತೆಗೆ ಇನ್ನೆರಡು ಹೊಸ ಗುಣಗಳೂ ಸೇರಿಬಿಟ್ಟಿವೆ. ಅವೇ ನಾಮ - ರೂಪಗಳೆಂಬಿವು. ಇವುಗಳ ಪ್ರಭಾವವೆಷ್ಟೆಂದರೆ ಜಗತ್ತನ್ನೇ ನೋಡುತ್ತಿರುವವರಿಗೆ ವಿವಿಧ ವೈಚಿತ್ರ್ಯಗಳನ್ನು ಹೊಂದುತ್ತಾ ಬದಲಾಗುತ್ತಲೇ ಇರುವ (ಈ) ನಾಮರೂಪಗಳು ತಾವೇ ಪರಮಾರ್ಥವೆಂಬ ಬುದ್ಧಿಯನ್ನುಂಟುಮಾಡಿಬಿಡುವವು. ಹಾಗೂ ಮೂಲಸಚ್ಚಿದಾನಂದಗುಣಗಳನ್ನು ಭೋಕ್ತೃಗಳ ಅರಿವಿಗೆ ಬರದಂತೆ ಮಾಡಿಬಿಡುವವು. ಇದರಿಂದಲೇ ಜನರಿಗೆ ಬಂಧವಾಗಿರುವದು. ಆದರೆ ಸ್ವಲ್ಪ ಒಳಹೊಕ್ಕು ವಿಚಾರಮಾಡುವ ವಿವೇಕಿಗಳಿಗೆ ನಾಮರೂಪಗಳ ಈ ತೋರಿಕೆಗೆ ಏನು ಮೂಲವಿದ್ದೀತು ? ಅದೇ ನಿಜವಾಗಿರಬಾರದೇಕೆ? ಎಂಬ ಪ್ರತ್ಯಯವುಂಟಾಗಲಿದೆ. ಆನಂತರ ಶಾಸ್ತ್ರಾಚಾರ್ಯರುಗಳು ತೋರಿಸಿಕೊಟ್ಟ ಹಾದಿಯಿಂದ ಮುಂದುವರೆದಾಗ ಜಗತ್ತಿನ ದೃಶ್ಯಗಳಲ್ಲಿ ಕಂಡುಬಂದ ಸಚ್ಚಿದಾನಂದಗುಣಗಳು ಬ್ರಹ್ಮವೇ - ಎಂದು ಗೊತ್ತಾಗುತ್ತದೆ. ಹೀಗೆ ಅಸ್ತಿ - ಇದೆ; ಭಾತಿ - ಹೊಳೆಯುತ್ತಿದೆ ; ಪ್ರಿಯಂ - ಇಷ್ಟವಾಗಿದೆ - ಎಂಬ ಮೂರು ಗುಣಗಳೂ ಎಲ್ಲೆಲ್ಲಿ ಕಂಡುಬಂದರೂ ಅವು ಬ್ರಹ್ಮದ ಗುಣಗಳೇ ಎಂದೇ ತಿಳಿಯಬೇಕು. ನಾಮ ಹಾಗೂ ರೂಪಗಳು ಮಾತ್ರ ವಿಕಾರಗಳಾದ್ದರಿಂದ ಜಗದ್ರೂಪಗಳೆನಿಸಿವೆ, ಅದ್ವೈತಿಗಳು ಜಗತ್ತನ್ನು ಮಿಥ್ಯೆ ಎಂದು ಹೇಳುವುದೇಕೆಂದರೆ : ಜಗತ್ತಿನ ಧರ್ಮಗಳಾದ ನಾಮರೂಪಗಳು ಮಿಥ್ಯೆಯಾದ್ದರಿಂದ ಆ ದೃಷ್ಟಿಯಿಂದ ಮಿಥ್ಯೆ ಎಂದು ಅಭಿಪ್ರಾಯ. ಆದರೆ ಸಚ್ಚಿದಾನಂದಗುಣಗಳ ವಿವಕ್ಷೆಯಿಂದ ಹೇಳುವಾಗ ಇದೆಲ್ಲವೂ ಬ್ರಹ್ಮವೇ - ಎಂದೇ ಹೇಳುವರು. ಹೀಗೆ ಅದ್ವೈತವೇದಾಂತಿಗಳು ಬ್ರಹ್ಮವಾದಿಗಳೇ ಹೊರತು ಮಿಥ್ಯಾವಾದಿಗಳಲ್ಲ.

ಈಗ ಸಾಧನಮಾರ್ಗವನ್ನು ವಿವರಿಸಲು ಇಲ್ಲಿ ಪ್ರಾರಂಭಿಸಿದೆ. ಜಗತ್ತು ಹಾಗೂ ಬ್ರಹ್ಮವು ಕಲಬೆರಕೆಯಾಗಿಯೇ ಕಂಡುಬರುತ್ತಿರುವದರಿಂದ ವಿವೇಕ ಮಾಡಿಕೊಂಡು ತತ್ತ್ವವನ್ನೇ ಕಂಡುಕೊಳ್ಳಲಿಚ್ಛಿಸುವವನು ನಾಮರೂಪಗಳನ್ನು ಉದಾಸೀನ ಮಾಡಿ ಸಚ್ಚಿದಾನಂದ ತತ್ತ್ವಗುಣಗಳನ್ನೇ ಅನುಸಂಧಾನ ಮಾಡುವವನಾಗಬೇಕು. ಅದಕ್ಕಾಗಿ ತನ್ನ ಒಳಗೂ ಹೊರಗೂ ಸಮಾಧಿಯನ್ನು ಅಭ್ಯಾಸಮಾಡಬೇಕು. ಸಾಧನಾವಸ್ಥೆಯಲ್ಲಿ ವೇದಾಂತೋಕ್ತವಾದ ಸಮಾಧಿಯೆಂದರೆ ಚಿತ್ತಸಮಾಧಾನವೆಂದರ್ಥ. ಸಿದ್ಧಾವಸ್ಥೆಯಲ್ಲಿ ಆತ್ಮ ಅಥವಾ ಬ್ರಹ್ಮವೆಂದೇ ಅರ್ಥ. ಸಾಧಕನು ಬಹಿಃಸಮಾಧಿಯನ್ನು ತನ್ನ ಶರೀರೇಂದ್ರಿಯಗಳ ನಿಯಮನದಿಂದಲೂ ಅಂತಃಸಮಾಧಿಯನ್ನು ಅಂತಃಕರಣದ ನಿಯಮನದಿಂದಲೂ ಸಂಪಾದಿಸಿಕೊಳ್ಳಬೇಕು - ಎಂದಭಿಪ್ರಾಯ.

(ಉಪನಿಷತ್ತು)

**ಸವಿಕಲ್ಪೋ ನಿರ್ವಿಕಲ್ಪಃ ಸಮಾಧಿರ್ದ್ವಿವಿಧೋ ಹೃದಿ ।**
**ದೃಶ್ಯಶಬ್ದಾನುಭೇದೇನ ಸವಿಕಲ್ಪಃ ಪುನರ್ದ್ವಿಧಾ ॥**
**ಕಾಮಾದ್ಯಾಶ್ಚಿತ್ತಗಾ ದೃಶ್ಯಾಸ್ತತ್ಸಾಕ್ಷಿತ್ವೇನ ಚೇತನಮ್ ।**
**ಧ್ಯಾಯೇತ್ ದೃಶ್ಯಾನುವಿದ್ಧೋಽಯಂ ಸಮಾಧಿಸ್ಸವಿಕಲ್ಪಕಃ ॥**
**ಅಸಂಗಃ ಸಚ್ಚಿದಾನಂದಃ ಸ್ವಪ್ರಭೋ ದ್ವೈತವರ್ಜಿತಃ ।**
**ಅಸ್ಮೀತಿ ಶಬ್ದ ವಿದ್ಧೋಽಯಂ ಸಮಾಧಿಸ್ಸವಿಕಲ್ಪಕಃ ॥**

ಈಗ ಸಮಾಧಿಯೆಂಬ ಸ್ಥಿತಿಯನ್ನು ವ್ಯವಹಾರದೃಷ್ಟಿಯಿಂದ ಸಾಧಕರಿಗೆ ಅರ್ಥವಾಗುವಂತೆ ನಿರೂಪಣೆಮಾಡಲಾಗುವದು. ಸಮಾಧಿಯು ಒಟ್ಟು ಆರು ವಿಧಗಳೆಂದು ಇಲ್ಲಿ ತಿಳಿಸಿದೆ ಅವು ಯಾವವೆಂದರೆ : ೧) ಸವಿಕಲ್ಪದೃಶ್ಯಾನುವಿದ್ಧ ೨) ಸವಿಕಲ್ಪಶಬ್ದಾನುವಿದ್ಧ ೩) ನಿರ್ವಿಕಲ್ಪಸ್ತಬ್ಧೀಭಾವ ೪) ನಿರ್ವಿಕಲ್ಪಸಾರಸ್ವಾದ - ಹೀಗೆ ನಾಲ್ಕಾಗುವವು. ಈ ನಾಲ್ಕೇ ೫) ಸವಿಕಲ್ಪ ೬) ನಿರ್ವಿಕಲ್ಪಗಳೆಂಬ ವಿಂಗಡದಿಂದಲೂ ಕಂಡುಬರುವವಾಗಿ ಒಟ್ಟಿನಲ್ಲಿ ಆರು ಎಂದು ತಿಳಿಸಲಾಗಿದೆ. ಚಿತ್ತಸಮಾಧಾನವೇ ಸಮಾಧಿ ಎನಿಸಿದಾಗ ಚಿತ್ತವ್ಯಾಪಾರಗಳ ಹಾಗೂ ಪ್ರಾಣವ್ಯಾಪಾರಗಳ ಗಣನೆಯನ್ನು ವಿಚಾರಕ್ಕೆ ತಂದುಕೊಳ್ಳಬೇಕು. ನಾವು ಹೊರಗೆ ಕಣ್ಣುಗಳನ್ನು ಮುಚ್ಚಿಕೊಂಡು ಕುಳಿತು ದೇಹವ್ಯಾಪಾರಗಳನ್ನೂ ನಿಯಮನ ಮಾಡಿದಮೇಲೂ ಒಳಗಡೆ ಕೆಲವು ದೃಶ್ಯಗಳು ಕಾಣಿಸುವವು. ಶಬ್ದಗಳೂ

ಕೇಳಬರುವವು. ಪ್ರಾರಂಭದ ಸಾಧಕನು ಅವುಗಳನ್ನು ತಡೆಯಲಾಗುವದಿಲ್ಲ. ಅದಕ್ಕಾಗಿ ಮೊದಲನೆಯ ಹೆಜ್ಜೆಯಾಗಿ 'ಸವಿಕಲ್ಪವನ್ನೇ ಸ್ವೀಕರಿಸಬೇಕು. ಇದರಲ್ಲಿ ಚಿತ್ತದ ಹೊರಗೆ ದೃಶ್ಯಗಳು ತೋರಿಕೊಳ್ಳುತ್ತಿದ್ದರೂ ಚಿತ್ತಧರ್ಮಗಳಾದ ಕಾಮ-ಸಂಕಲ್ಪ-ಸಂಶಯಗಳು ಇರುವವಾದರೂ ತಾನು ಅವುಗಳಿಗೆ ಅಂಟಿ ಕೊಳ್ಳದವನೆಂದೂ ಅವು ದೃಶ್ಯಗಳಾಗಿದ್ದು ಅನಾತ್ಮವಾಗಿರುವದರಿಂದ ಅವುಗಳ ತೋರಿಕೆಯಿಂದ ತನ್ನ ಸ್ವರೂಪಕ್ಕೇನೂ ಹಾನಿಯಿಲ್ಲವೆಂದೂ ತಾನು ಅಸಾಂಸರಿಯಾದ ಆತ್ಮನೇ, ಚೈತನ್ಯ ಸ್ವರೂಪನೇ - ಎಂದೂ ಚಿಂತಿಸುತ್ತಾ ಇರುವದೇ ದೃಷ್ಯಾನುವಿದ್ಧ ಸಂಕಲ್ಪ ಸಮಾಧಿಯೆನಿಸುವದು. ಅನುವಿದ್ಧ ಎಂದರೆ ಕೂಡಿರುವದು ಎಂದರ್ಥ. ದೃಶ್ಯಗಳು ತೋರಿಸಿಕೊಳ್ಳುತ್ತಿರುವಾಗಲೂ ವಿವೇಕದಿಂದ ತಾನು ದೃಗ್ರೂಪನೆಂದೂ ಅಸಂಗನೆಂದೂ ಚಿಂತಿಸುವದೇ ಇದರ ವಿಶೇಷವು. ಹಾಗೆಯೇ ಚಿತ್ತವನ್ನು ಸಮಾಧಾನಕ್ಕಾಗಿ ಒಳಮುಖವಾಗಿ ಮಾಡಿದಾಗ ದೃಶ್ಯಗಳು ತೋರುವಂತೆಯೇ ಅಂತರಂಗದಲ್ಲಿಯೇ ಶಬ್ದಗಳೂ ಕೇಳಬರುವವು. ಹಾಗೆ ಕೇಳಬಂದರೂ ತಾನು ಶಬ್ದಗಳ ಸಾಕ್ಷಿಯೆಂದೂ ಅವುಗಳ ಸಂಬಂಧವು ತನಗೆ ಇಲ್ಲವೆಂದೂ ಚಿಂತಿಸುತ್ತಿರುವದೇ ಶಬ್ದಾನುವಿದ್ಧ ಸಮಾಧಿಯು. ಹೀಗೆ ಸಮಾಧಿಯನ್ನು ಅಭ್ಯಾಸ ಮಾಡುವಾಗ ವೇದಾಂತದೃಷ್ಟಿಯಿಂದ ಒಂದು ವಿಶೇಷವನ್ನು ಅಳವಡಿಸಿಕೊಳ್ಳಬಹುದು. ಏನೆಂದರೆ ಅಂತರಗಂದಲ್ಲಿ ಕೇಳುತ್ತಿರುವ ಶಬ್ದಗಳನ್ನಾಗಲಿ ಕಾಣಬಹುದಾದ ದೃಶ್ಯಗಳನ್ನಾಗಲೀ ತಡೆಗಟ್ಟದೆ ಸಾಧ್ಯವಾದಷ್ಟು ಮಟ್ಟಿಗೂ ಅವುಗಳನ್ನು ಭಗವನ್ನಾಮಮಯವಾದ ಶಬ್ದವಾಗಿಯೂ ಭಗವಂತನ ದಿವ್ಯರೂಪವಾದ ಆಕಾರವಿಧಗಳಾಗಿಯೂ ಪರಿವರ್ತಿಸಿಕೊಳ್ಳುವದು. ಇದು ಉಪಾಸನೆಯೆನಿಸಿಕೊಳ್ಳುತ್ತದೆ. ಉಪಾಸನೆಗೂ ಸವಿಕಲ್ಪ ಸಮಾಧಿಗೂ ಪರಸ್ಪರ ಸಂಬಂಧವಿದೆ. ಏಕಾಗ್ರವಾದ ಮನಸ್ಸಿನಿಂದ ಭಗವಂತನ ಗೊತ್ತಾದ ರೂಪವೊಂದನ್ನೇ ಚಿಂತಿಸಿದರೆ ಸಗುಣಸಾಕಾರ ಧ್ಯಾನವೆನಿಸುವದು. ಇದು ದೃಢವಾಗಿರುವವರೆಗೂ ಸಮಾಧಿಯು ಎಂದರೆ ಸಮಾಧಾನವು ಇದ್ದೇ ಇರುವದು. ಧ್ರುವನು ಇದಕ್ಕೆ ಉದಾರಹಣೆಯು. ಅವನಿಗೆ ಈ ಸಮಾಧಿಯು ಎಷ್ಟು ದೃಢವಾಗಿತ್ತೆಂದರೆ ಚಿತ್ತದಲ್ಲಿ ನೆಲೆನಿಂತಿದ್ದ ನಾರಾಯಣಮೂರ್ತಿಯು ಏಕಾಗ್ರಧ್ಯಾನದಿಂದ ಹೊರಗೆ ನಿಜವಾಗಿ ನಾರಾಯಣನೇ ಬಂದು ನಿಂತರೂ ಗೊತ್ತಾಗಲಿಲ್ಲ. ಆಗ ನಾರಾಯಣನೇ ಧ್ರುವನ ಅಂತರಂಗಗೋಚರವಾಗಿದ್ದ ಮೂರ್ತಿಯನ್ನು ಮರೆಮಾಡಲು

ಹೀಗೇಕಾಯಿತು ? ಎಂದು ಕಣ್ಣುಬಿಟ್ಟನಂತೆ. ಆಗ ಬಹಿರಂಗದಲ್ಲಿ ನಾರಾಯಣನು ದರ್ಶನವಿತ್ತನು. ಅದನ್ನು ಸಾಕ್ಷಾತ್ಕಾರವೆನ್ನುವರು. ಇವೆಲ್ಲವೂ ಸವಿಕಲ್ಪ ಸಮಾಧಿಯ ಅನುಭವಗಳೆಂದೇ ತಿಳಿಯಬೇಕು.

ಸವಿಕಲ್ಪಶಬ್ದಾನುವಿದ್ಧ ಸಮಾಧಿಯನ್ನು ಹೀಗೂ ಅರ್ಥಮಾಡಬಹುದು. ಹೇಗೆಂದರೆ : ಅಂತರಂಗದಲ್ಲಿ ಶಬ್ದಗಳು ಕೇಳಬರುತ್ತಿರುವಾಗಲೇ ತಾನು ಅಸಂಗನು, ದ್ವೈತರಹಿತನು, ಸ್ವಯಂಪ್ರಕಾಶನು, ಸಚ್ಚಿದಾನಂದಸ್ವರೂಪನೂ ಎಂದು ತನ್ನ ಸ್ವರೂಪವನ್ನೇ ಚಿಂತಿಸುತ್ತಾ ದೃಶ್ಯ ಶಬ್ದಗಳ ತೋರಿಕೆಯನ್ನು ಅನಾದರಮಾಡಿ ತನ್ನ ಆತ್ಮನನ್ನೇ ಚಿಂತಿಸುವದು. ಆಗಲೂ ಆತ್ಮಾನುಸಂಧಾನವಿರುವವರೆಗೂ ಸಮಾಧಿಯೆನಿಸುವದು. ಹೀಗೆ ಸಾಧಕನು ತನ್ನ ಅಂತಃಕರಣದ ಯೋಗ್ಯತಾನುಗುಣವಾಗಿ ಸವಿಕಲ್ಪ ಸಮಾಧಿಯಿಂದ ಸಂಸಾರವನ್ನು ಗೆಲ್ಲಬಹುದಾಗಿದೆ - ಎಂದು ಇಲ್ಲಿ ತಿಳಿಸಿದೆ.

(ಉಪನಿಷತ್ತು)

ಸ್ವಾನುಭೂತಿರಸಾವೇಶಾತ್ ದೃಶ್ಯಶಬ್ದಾನಪೇಕ್ಷಿತಃ ।
ನಿರ್ವಿಕಲ್ಪಸಮಾಧಿಃ ಸ್ಯಾತ್ ನಿವಾತಸ್ಥಿತದೀಪವತ್ ॥

ಹೃದಿ ವಾ ಬಾಹ್ಯದೇಶೇಽಪಿ ಯಸ್ಮಿನ್ ಕಸ್ಮಿಂಶ್ಚ ವಸ್ತುನಿ ।
ಸಮಾಧಿರಾದ್ಯಕ್ ಸನ್ಮಾತ್ರಾ ನಾಮರೂಪಪೃಥಕ್ಕೃತಿಃ ॥

ಸ್ತಬ್ಧೀಭಾವೋ ರಸಾಸ್ವಾದಃ ದ್ವಿತೀಯಃ ಪೂರ್ವವನ್ಮತಃ ।
ಏತೈಃ ಸಮಾಧಿಭಿಃ ಷಡ್ಭಿಃ ನಯೇತ್ ಕಾಲಂ ನಿರಂತರಮ್ ॥

ಈ ಪದ್ಯಗಳಲ್ಲಿ ನಿರ್ವಿಕಲ್ಪಸಮಾಧಿಯ ವಿವರವನ್ನು ಕೊಡಲಾಗಿದೆ. ಯಾವನಿಗೆ ಅಂತರ್ಮುಖಸ್ಥಿತಿಯಲ್ಲಿ ಆತ್ಮಾನುಭವವೇ ದೃಢವಾಗಿ ನೆಲೆನಿಂತು ಆತ್ಮರಸದ ಆಸ್ವಾದನೆಯಿಂದ ಮನಸ್ಸು - ಗಾಳಿಯಿಲ್ಲದ ಜಾಗದಲ್ಲಿರುವ ದೀಪದಂತೆ - ನಿಶ್ಚಲವಾಗಿ ನೆಲೆನಿಂತು ದೃಶ್ಯಗಳನ್ನಾಗಲಿ, ಶಬ್ದಗಳನ್ನಾಗಲಿ - ಗ್ರಹಿಸದೆ ಹೋಗಿಬಿಡುವದೋ ಆ ಸ್ಥಿತಿಯನ್ನು ನಿರ್ವಿಕಲ್ಪ ಸಮಾಧಿಯೆನ್ನುವರು. ಇಂಥ ಅನುಭವವು ಬಂದಮೇಲೆ ಯಾವದಾದರೊಂದು ವಸ್ತುವು ಮನಸ್ಸಿನಲ್ಲೇ ಆಗಲಿ, ಹೊರಗಡೆಯೇ ಆಗಲಿ, ವ್ಯವಹಾರಾವಸ್ಥೆಯಲ್ಲಿ ತೋರಿಕೊಂಡರೆ - ಆ ಕೂಡಲೇ ತಾನು ದೃಗ್ರೂಪನೇ ಎಂಬ ನಿಶ್ಚಯದಿಂದ ನಾಮರೂಪಗಳೊಡನೆ ಮನಸ್ಸಿನ ಸಂಬಂಧವನ್ನು ಕಡಿದುಹಾಕಿ ಕೊಳ್ಳಬೇಕು. ಇದೇ ಪೃಥಕ್ಕರಣವು. ಹೀಗೆ

ಮನಸ್ಸು ಸ್ತಬ್ಧ (ನಿರ್ವ್ಯಾಪಾರ - ನಿರ್ವೃತ್ತಿ) ವಾಗುವದು. ನಿರ್ವಿಕಲ್ಪಸ್ತಬ್ಧೀಭಾವ ಸಮಾಧಿಯೆನಿಸುವದು. ಅಥವಾ ಆತ್ಮರಸಾಸ್ವಾದದಲ್ಲಿಯೇ ನೆಲೆನಿಂತು ಬಿಟ್ಟರೆ ನಿರ್ವಿಕಲ್ಪರಸಾಸ್ವಾದಸಮಾಧಿಯೆನಿಸುವದು. ಹೀಗೆ ಸಮಾಧಿಗಳ ಅವಲಂಬನೆ ಯಿಂದ ಪ್ರಾರಬ್ಧಕರ್ಮವು ಪೂರೈಸುವವರೆಗೂ ತನಗೆ ಅಂಟಿಕೊಂಡಿರುವ ದೇಹಾದಿಗಳೊಡನೆ ಜ್ಞಾನಿಯು ವ್ಯವಹಾರವನ್ನು ಸಾಧಿಸುತ್ತಾ ಕಾಲವನ್ನು ಕಳೆಯಬೇಕು.

ಶಂಕರಭಗವತ್ಪಾದರ ಮತದಂತೆ ಸಮಾಧಿಯೆಂದರೆ ಆತ್ಮನಾಗಿ ನೆಲೆನಿಂತು ಮನಸ್ಸನ್ನು ಅಮನಸ್ಸಾಗಿ ಎಂದರೆ ಆತ್ಮನೇ ಆಗಿ ಕಂಡುಕೊಳ್ಳುವದೇ ಆಗಿದೆ. ಯೋಗ ದರ್ಶನದವರು ದ್ವೈತಿಗಳಾದ್ದರಿಂದ ಮನಸ್ಸನ್ನು ಉಳಿಸಿಕೊಂಡು ಅದರ ವೃತ್ತಿಗಳನ್ನು ಮಾತ್ರ ತಡೆಯುವ ಕ್ರಮವನ್ನು ಯೋಗವೆಂದೂ ವೃತ್ತಿರಹಿತ ಸ್ಥಿತಿಯೇ ಸಮಾಧಿಯೆಂದೂ ತಿಳಿಸಿದ್ದಾರೆ. ಸಾಧಕರಿಗೆ ಯೋಗದರ್ಶನವು ಕೆಲವು ದೂರದವರೆಗೆ ಸಹಾಯಕವೆಂಬುದು ಒಪ್ಪತಕ್ಕದ್ದೇ ಸರಿ. ಆದರೆ ಮನಸ್ಸನ್ನು ವೃತ್ತಿರಹಿತವಾಗಿ ಮಾಡಿದಮೇಲೂ ಅನಂತವಾದ ಕಾಲದಲ್ಲಿ ಕೆಲವು ಸಮಯಾನಂತರ ಅದು ಮತ್ತೆ ಬಹಿರ್ಮುಖವಾಗಿಬಿಡಬಹುದು. ಆಗ ಸಮಾಧಿ ಇಲ್ಲವಾಗಿ ಮುಕ್ತಿಯು ಅನಿತ್ಯವಾಗಿ ಬಿಡುವದೆಂದು ಆಪೇಕ್ಷಿಸುವವರಿಗೆ ಯೋಗದರ್ಶನದಂತೆ ಉತ್ತರವಿಲ್ಲದಂತಾಗುವದು. ಮತ್ತು ಮುಕ್ತಿಯು ಅವಸ್ಥಾಬದ್ಧ (ಸಮಾಧಿಯಲ್ಲಿ ಮಾತ್ರ ಸಿಗತಕ್ಕದ್ದು)ವೆಂದೂ ಆಗಿ ಅನಿತ್ಯವೆಂಬುದು ಗಟ್ಟಿಯಾಗಿಬಿಡುವದು. ಇದರ ಬದಲು ಆತ್ಮಸತ್ಯಾನುಬೋಧದಿಂದ ಮನಸ್ಸನ್ನು ಬಾಧಮಾಡಿ ಅದಿಲ್ಲದಂತೆ ಎಂದರೆ ನದಿಯು ಸಮುದ್ರದಲ್ಲಿ ಒಂದಾದಂತೆ ಆತ್ಮನಲ್ಲೇ ಕರಗಿಸಿ ತಾನೇತಾನಾಗಿ ನೆಲೆನಿಂತಾಗ ಆ ಸ್ಥಿತಿಯು ಅವಸ್ಥೆಯೆನಿಸಿ ಕೊಳ್ಳದೆ ಜೀವನ್ಮುಕ್ತಿಯೇ ಆಗಿ ಪರಿಣಮಿಸುವದು. ಹೀಗೆ ಆದಮೇಲೂ ದೇಹಾದಿಗಳೇನೂ ಬಿದ್ದುಹೋಗಬೇಕಾಗಿಲ್ಲ. ಬಾಧಿತಾನುವೃತ್ತಿಯಿಂದ ಪ್ರಾರಬ್ಧ ಕರ್ಮವು ಪೂರೈಸುವವರೆಗೂ ಮುಂದುವರೆಯಬಹುದು. ಇಂಥ ಜೀವನ್ಮುಕ್ತ ಸ್ಥಿತಿಯನ್ನು ಸಮಾಧಿಯೆಂದು ಹೆಸರಿಸುವದಾದರೆ ಭಗವತ್ಪಾದರ ಕಡೆಯಿಂದ ಆಕ್ಷೇಪಣೆ ಏನೂ ಇಲ್ಲ. ಅದ್ವೈತಸಂಪ್ರದಾಯಪರಿಪಾಲನಾ ಪೂರ್ವಕವಾಗಿ ಬ್ರಹ್ಮನಿಷ್ಠೆಗಿಂತ ಮುಂಚಿನ ಸ್ಥಿತಿಯಲ್ಲಿ ಸಮಾಧಿಯೆಂದರೆ ಧ್ಯಾನ - ನಿಧಿಧ್ಯಾಸನಗಳೆಂದೂ ಬ್ರಹ್ಮನಿಷ್ಠೆಯ ಅನಂತರ ಸಮಾಧಿಯೆಂದರೆ ಆತ್ಮನೇ-ಎಂದೂ ತಿಳಿದುಕೊಂಡಲ್ಲಿ ಸಮನ್ವಯವಾಗುತ್ತದೆ.

(ಉಪನಿಷತ್ತು)

ದೇಹಾಭಿಮಾನೇ ಗಳಿತೇ ವಿಜ್ಞಾತೇ ಪರಮಾತ್ಮನಿ ।
ಯತ್ರ ಯತ್ರ ಮನೋ ಯಾತಿ ತತ್ರ ತತ್ರ ಪರಾಮೃತಮ್ ॥
ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥
ಮಯಿ ಜೀವತ್ವಮೀಶತ್ವಂ ಕಲ್ಪಿತಂ ವಸ್ತುತೋ ನ ಹಿ ।
ಇತಿ ಯಸ್ತು ವಿಜಾನಾತಿ ಸ ಮುಕ್ತೋ ನಾತ್ರ ಸಂಶಯಃ ॥

॥ ಇತ್ಯುಪನಿಷತ್ ॥

ಈ ಪದ್ಯಗಳಲ್ಲಿ 'ಭಿದ್ಯತೇ....' ಎಂಬಿದು ಮುಂಡಕೋಪನಿಷತ್ತಿನಲ್ಲಿದೆ. ಪರಮಾತ್ಮಜ್ಞಾನದಿಂದ ಶರೀರಾಭಿಮಾನವು ಕಳಚಿಹೋದಾಗ ಮನಸ್ಸುಕೂಡ ಬ್ರಹ್ಮದಲ್ಲೇ ಒಂದಾಗಿಬಿಡುವದು. ಅದು ಬಾಧಿತಾನುವೃತ್ತಿಯಿಂದ ಕೆಲವೊಮ್ಮೆ ಬ್ರಹ್ಮನಿಷ್ಠೆಯಿಂದ ಚಲಿತವಾದಂತೆ ಕಂಡಾಗ ಅದು ಎಲ್ಲೆಲ್ಲಿ ಹೋದರೂ ಅಲ್ಲೆಲ್ಲ ಪರಮ ಅಮೃತಸ್ವರೂಪವಾದ ಬ್ರಹ್ಮವೇ ಕಾಣಬರುವದು. ಅಥವಾ ಬ್ರಹ್ಮವನ್ನು ಹೊರತಾಗಿ ಮತ್ತೇನನ್ನೂ ಅದು ಗ್ರಹಿಸಲಾರದಾಗಿಬಿಡುವದು. ಆಗ ಅವಿದ್ಯಾ ವಾಸನೆಗಳ ಕಗ್ಗಂಟಾಗಿದ್ದ ಮನಸ್ಸಿನಲ್ಲಿದ್ದ ಕಾಮಾದಿಗಳ ರೂಪವಾದ ವೃತ್ತಿಗಳೆಲ್ಲವೂ ನಾಶವಾಗಿಬಿಡುವವು. ಅವಿದ್ಯೆಯ ರೂಪಾಂತರವಾದ ಸಂಶಯಗಳೂ ಇಲ್ಲವಾಗಿ ಬಿಡುವವು. ಕರ್ಮವೃತ್ತಿಗಳೂ ಕ್ಷೀಣವಾಗಿಬಿಡುವವು. ಹೀಗೆ ಸಕಲವಿಧವಾದ ಅನರ್ಥಗಳಿಂದಲೂ ಬಿಡುಗಡೆಯುಂಟಾಗಿ ಮುಕ್ತಿಯೇ ಸ್ವರೂಪವಾಗಿ ನೆಲೆನಿಂತುಬಿಡುವದು.

ಕಡೆಯದಾಗಿ ಸರಸ್ವತಿಯು ಋಷಿಗಳನ್ನು ಕುರಿತು ಹೀಗೆಂದಳು : ''ನನ್ನಲ್ಲಿಯೇ ಜೀವಾತ್ಮತ್ವವನ್ನು ಈಶ್ವರಾತ್ಮತ್ವವನ್ನೂ ಕಲ್ಪಿಸಲಾಗಿದೆ. ಜೀವೇಶ್ವರ ಭೇದವಾಗಲಿ, ಈಶ್ವರನು ಆತ್ಮನಿಗಿಂತ ಬೇರೆಯೆಂಬುದಾಗಲಿ ಸರಿಯಲ್ಲ. ಯಾವನು ಹೀಗೆ ತಾನೇ ಈಶ್ವರನೆಂದೂ ಆತ್ಮನಾದ ತಾನೊಬ್ಬನೇ ಎಲ್ಲವೂ ಆಗಿರುವೆನೆಂದೂ ಆತ್ಮನೆಂದರೆ ನಿತ್ಯಶುದ್ಧಬುದ್ಧಮುಕ್ತವಾದ ಬ್ರಹ್ಮವೇ ಎಂದೂ ಅರಿತವನಾಗುವನೋ ಅವನೇ ಮುಕ್ತನು ; ಈ ವಿಷಯದಲ್ಲಿ ಸಂಶಯವಿಲ್ಲ. ಇಂಥ ಮುಕ್ತನಿಗೂ ನನಗೂ ಯಾವ ಭೇದವೂ ಇಲ್ಲ. ಈ ಅರ್ಥದಲ್ಲಿ

ಮುಕ್ತನಾಗಲಿ ಬ್ರಹ್ಮವಾಗಲಿ, ನಾನಾಗಲಿ - ಎಲ್ಲವೂ ಏಕವೇ ; ಅನೇಕವಲ್ಲ '' ಎಂದು ತಿಳಿಸಿರುತ್ತಾಳೆ.

ಮಹಾಸರಸ್ವತಿಯನ್ನು ವೇದಾಂತವೇದ್ಯನಾದ ಔಪನಿಷದಪುರುಷನಾದ ಪರಮಾತ್ಮನಿಗಿಂತ ಅನನ್ಯಳನ್ನಾಗಿಯೇ ಅರಿತುಕೊಳ್ಳುವದೇ ಬ್ರಹ್ಮವಿದ್ಯೆಯು. ಬ್ರಹ್ಮವಿದ್ಯೆಯಲ್ಲಿ ಎಲ್ಲಾ ವಿದ್ಯೆಗಳೂ ಅಡಕವಾಗಿವೆ. ಇದೇ ಅಭಿಪ್ರಾಯದಿಂದಲೇ ಶ್ರೀಶಂಕರಾಚಾರ್ಯರು ಚೈತನ್ಯವಿಶಿಷ್ಟವಾದ ಮನೋವೃತ್ತಿಯೇ ವೇದವೆಂದೂ ಅದು ಚೈತನ್ಯಕ್ಕಿಂತ ಅನನ್ಯವಾದ್ದರಿಂದಲೇ ನಿತ್ಯವೆಂದೂ ತಮ್ಮ ತೈತ್ತರಿಯೋಪನಿಷದ್ಭಾಷ್ಯದಲ್ಲಿ ತಿಳಿಸಿದ್ದಾರೆ. ಇಂಥ ವೇದರೂಪಿಣಿಯಾದ ಮಹಾಶಾರದೆಯೇ ಈ ಉಪನಿಷತ್ತನ ಕೇಂದ್ರವಾಗಿದ್ದಾಳೆ. ವೇದವಿದ್ಯೆಯೆಂಬುದು ಉಳಿದ ವಿದ್ಯೆಗಳಿಗೂ ಉಪಲಕ್ಷಣವಾಗಿದ್ದು ಲೌಕಿಕವಿದ್ಯೆಗಳೂ ಸರಸ್ವತಿಯ ಅಂಶಗಳೇ ಆಗಿರುವವು. ಹೀಗೆ ಸಮಸ್ತ ವಿದ್ಯಾರೂಪಿಣಿಯಾದ ದೇವಿಯನ್ನು ಕುರಿತು ವಿವರಿಸಿರುವ ಈ ಸರಸ್ವತೀರಹಸ್ಯೋಪನಿಷತ್ತು ವಿದ್ಯಾಕಾಮರಾದ ಅಧಿಕಾರಿಗಳಿಗೆಲ್ಲ ಅಮೂಲ್ಯಕೊಡುಗೆಯಾಗಿದೆ. ಇದನ್ನು ಯಥಾಮತಿಯಾಗಿ ವಿವರಿಸಿದ್ದೇನೆ. ಈ ಅಲ್ಪಸೇವೆಯಿಂದ ಪುರಷ ಸರಸ್ವತಿಯೆನಿಸಿದ್ದ ನಮ್ಮ ಪೂಜ್ಯಗುರುಗಳಾದ ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀಮಹಾಸ್ವಾಮಿಗಳು ಸಂತುಷ್ಟರಾಗಿ ಲೇಖಕನನ್ನೂ, ವಾಚಕರನ್ನೂ, ಭಕ್ತವೃಂದವನ್ನೂ ಹರಸಲೆಂದು ಪ್ರಾರ್ಥಿಸುತ್ತೇನೆ.

॥ ಇತಿ ಶ್ರೀ ಸರಸ್ವತೀರಸಹ್ಯೋಪನಿಷತ್ ॥

ಓಂ ತತ್ಸತ್

॥ ಹರಿಃ ಓಮ್ ॥

# ಸರಸ್ವತೀರಹಸ್ಯೋಪನಿಷತ್

## (ಮೂಲಪಾಠ )

ಓಂ॥ ವಾಙ್ಮೇ ಮನಸಿ ಪ್ರತಿಷ್ಠಿತಾ ಮನೋ ಮೇ ವಾಚಿ ಪ್ರತಿಷ್ಠಿತ - ಮಾವಿರಾವೀರ್ಮ ಏಧಿ ವೇದಸ್ಯ ಮ ಆಣೀಸ್ಥಃ ಶ್ರುತಂ ಮೇ ಮಾ ಪ್ರಹಾಸೀರನೇನಾಧೀತೇನಾಹೋರಾತ್ರಾನ್ ಸಂದಧಾಮಿ ಋತಂ ವದಿಷ್ಯಾಮಿ ಸತ್ಯಂ ವದಿಷ್ಯಾಮಿ ತನ್ಮಾಮವತು ತದ್ವಕ್ತಾರಮವತು ಅವತು ಮಾಮವತು ವಕ್ತಾರಮವತು ವಕ್ತಾರಮ್ ॥

ಓಂ ಶಾಂತಿಃ ಶಾಂತಿಃ ಶಾಂತಿಃ

ಓಂ ॥ ಋಷಯೋ ಹ ವೈ ಭಗವನ್ತಮಾಶ್ವಲಾಯನಂ ಸಂಪೂಜ್ಯ ಪಪ್ರಚ್ಛುಃ ಕೇನೋಪಾಯೇನ ತತ್ ಜ್ಞಾನಂ ತತ್ಪದಾರ್ಥಾವಭಾಸಕಂ ಯದುಪಾಸನಯಾ ತತ್ತ್ವಂ ಜಾನಾಸಿ ಭಗವಾನ್ ವದ ॥

ಆಶ್ವಲಾಯನ ಉವಾಚ -

ಸರಸ್ವತೀದಶಶ್ಲೋಕ್ಯಾ ಸಋಚಾ ಬೀಜಮಿಶ್ರಯಾ ।
ಸ್ತುತ್ವಾ ಜಪ್ತ್ವಾ ಪರಾಂ ಸಿದ್ಧಿಮಲಭಂ ಮುನಿಪುಂಗವಾಃ ॥

ಋಷಯ ಊಚುಃ -

ಕಥಂ ಸಾರಸ್ವತಪ್ರಾಪ್ತಿಃ ಕೇನ ಧ್ಯಾನೇನ ಸುವ್ರತ ।
ಮಹಾಸರಸ್ವತೀ ಯೇನ ತುಷ್ಟಾ ಭಗವತೀ ವದ ॥

ಸ ಹೋವಾಚಾಶ್ವಲಾಯನಃ -

ಓಂ॥ ಅಸ್ಯ ಶ್ರೀ ಸರಸ್ವತೀದಶಶ್ಲೋಕೀ ಮಹಾ ಮನ್ತ್ರಸ್ಯ । ಅಹಮಾಶ್ವಲಾಯನ ಋಷಿಃ । ಅನುಷ್ಟುಪ್ ಛಂದಃ । ಶ್ರೀವಾಗೀಶ್ವರೀ ದೇವತಾ । ಯದ್ವಾಗಿತಿ ಬೀಜಮ್ । ದೇವೀಂ ವಾಚಮಿತಿ ಶಕ್ತಿಃ । ಪ್ರಣೋ ದೇವೀತಿ ಕೀಲಕಮ್ । ವಿನಿಯೋಗಸ್ತತ್ಪ್ರೀತ್ಯರ್ಥೇ । ಶ್ರದ್ಧಾಮೇಧಾಪ್ರಜ್ಞಾಧಾರಣಾವಾಗ್ದೇವತಾ ಮಹಾಸರಸ್ವತೀತ್ಯೇತೈರಂಗನ್ಯಾಸಃ ॥

ನೀಹಾರಹಾರಘನಸಾರಸುಧಾಕರಾಭಾಂ
ಕಲ್ಯಾಣದಾಂ ಕನಕಚಂಪಕದಾಮಭೂಷಾಮ್ ।
ಉತ್ತುಂಗಪೀನಕುಚಕುಂಭಮನೋಹರಾಂಗೀಂ
ವಾಣೀಂ ನಮಾಮಿ ಮನಸಾ ವಚಸಾಂ ವಿಭೂತ್ಯೈ ॥

ಓಂ॥ ಪ್ರಣೋ ದೇವೀತ್ಯಸ್ಯ ಮಂತ್ರಸ್ಯ । ಭರದ್ವಾಜ ಋಷಿಃ । ಗಾಯತ್ರೀ ಛಂದಃ । ಶ್ರೀಸರಸ್ವತೀ ದೇವತಾ । ಪ್ರಣವೇನ ಬೀಜಶಕ್ತಿಕೀಲಕಂ । ಇಷ್ಟಾರ್ಥೇ ವಿನಿಯೋಗಃ । ಮಂತ್ರೇಣ ನ್ಯಾಸಃ ॥

ಯಾ ವೇದಾಂತಾರ್ಥತತ್ತ್ವೈಕಸ್ವರೂಪಾ ಪರಮಾರ್ಥತಃ ।
ನಾಮರೂಪಾತ್ಮನಾ ವ್ಯಕ್ತಾ ಸಾ ಮಾಂ ಪಾತು ಸರಸ್ವತೀ ।

ಓಂ ॥ ಪ್ರಣೋದೇವೀ ಸರಸ್ವತೀ ವಾಜೇಭಿರ್ವಾಜಿನೀವತೀ ।
ಧೀನಾಮವಿತ್ರ್ಯವತು ॥೧॥

ಓಂ ॥ ಆನೋ ದಿವ ಇತಿ ಮಂತ್ರಸ್ಯ । ಅತ್ರಿ ಋಷಿಃ । ತ್ರಿಷ್ಟುಪ್ ಛಂದಃ । ಸರಸ್ವತೀ ದೇವತಾ । ಹ್ರೀಮಿತಿ ಬೀಜಶಕ್ತಿಕೀಲಕಮ್ । ಇಷ್ಟಾರ್ಥೇ ವಿನಿಯೋಗಃ । ಮಂತ್ರೇಣ ನ್ಯಾಸಃ ॥

ಯಾ ಸಾಂಗೋಪಾಂಗವೇದೇಷು ಚತುರ್ಷ್ವೇಕೈವ ಗೀಯತೇ ।
ಅದ್ವೈತಾ ಬ್ರಹ್ಮಣಃ ಶಕ್ತಿಃ ಸಾ ಮಾಂ ಪಾತು ಸರಸ್ವತೀ ॥

ಓಂ॥ ಹ್ರೀಂ। ಆನೋ ದಿವೋ ಬೃಹತಃ ಪರ್ವತಾದಾ ಸರಸ್ವತೀ
ಯಜತಾಗಂತು ಯಜ್ಞಮ್ । ಹವಂ ದೇವೀ ಜಜುಷಾಣಾ
ಘೃತಾಚೀ ಶಗ್ಮಾಂ ನೋ ವಾಚಮುಶತೀ ಶೃಣೋತು ॥೨॥

ಓಂ॥ ಪಾವಕಾ ನ ಇತಿ ಮಂತ್ರಸ್ಯ । ಮಧುಚ್ಛಂದಾ ಋಷಿಃ । ಗಾಯತ್ರೀ ಛಂದಃ । ಸರಸ್ವತೀ ದೇವತಾ । ಶ್ರೀಮಿತಿ ಬೀಜಶಕ್ತಿಕೀಲಕಮ್ । ಇಷ್ಟಾರ್ಥೇ ವಿನಿಯೋಗಃ । ಮಂತ್ರೇಣ ನ್ಯಾಸಃ ॥

ಯಾ ವರ್ಣಪಾದವಾಕ್ಯಾರ್ಥಸ್ವರೂಪೇಣೈವ ವರ್ತತೇ ।
ಅನಾದಿನಿಧನಾನಂತಾ ಸಾ ಮಾಂ ಪಾತು ಸರಸ್ವತೀ ॥

ಓಂ ॥ ಶ್ರೀಂ। ಪಾವಕಾ ನಸ್ಸರಸ್ವತೀ ವಾಜೇಭಿರ್ವಾಜಿನೀವತೀ ।
ಯಜ್ಞಂ ವಷ್ಟು ಧಿಯಾ ವಸುಃ ॥೩॥

ಓಂ ॥ ಚೋದಯಿತ್ರೀತಿ ಮಂತ್ರಸ್ಯ । ಮಧುಚ್ಛಂದಾ ಋಷಿಃ । ಗಾಯತ್ರೀ ಚ್ಛಂದಃ। ಸರಸ್ವತೀ ದೇವತಾ । ಕ್ಲೂಮಿತಿ ಬೀಜಶಕ್ತಿಕೀಲಕಮ್ । ಇಷ್ಟಾರ್ಥೇ ವಿನಿಯೋಗಃ । ಮಂತ್ರೇಣ ನ್ಯಾಸಃ ॥

ಅಧ್ಯಾತ್ಮಮಧಿದೈವಂ ಚ ದೇವಾನಾಂ ಸಮ್ಯಗೀಶ್ವರೀ ।
ಪ್ರತ್ಯಗಾಂತೇ ವದಂತೀ ಯಾ ಸಾ ಮಾಂ ಪಾತು ಸರಸ್ವತೀ ॥

ಓಂ ॥ ಕ್ಲೂಂ । ಚೋದಯಿತ್ರೀ ಸೂನೃತಾನಾಂ ಚೇತಂತೀ
ಸುಮತೀನಾಮ್ । ಯಜ್ಞಂ ದಧೇ ಸರಸ್ವತೀ ॥ ೪ ॥

ಓಂ ॥ ಮಹೋ ಅರ್ಣೇತಿ ಮಂತ್ರಸ್ಯ । ಮಧುಚ್ಛಂದಾ ಋಷಿಃ । ಗಾಯತ್ರೀ ಛಂದಃ । ಸರಸ್ವತೀ ದೇವತಾ । ಸೌರಿತಿ ಬೀಜಶಕ್ತಿಕೀಲಕಮ್ । ಇಷ್ಟಾರ್ಥೇ ವಿನಿಯೋಗಃ । ಮಂತ್ರೇಣ ನ್ಯಾಸಃ ॥

ಅಂತರ್ಯಾಮ್ಯಾತ್ಮನಾ ವಿಶ್ವಂ ತ್ರೈಲೋಕ್ಯಂ ಯಾ ನಿಯಚ್ಛತಿ ।
ರುದ್ರಾದಿತ್ಯಾದಿರೂಪಸ್ಥಾ ಸಾ ಮಾಂ ಪಾತು ಸರಸ್ವತೀ ॥

ಓಂ ॥ ಸೌಃ। ಮಹೋ ಅರ್ಣಃ ಸರಸ್ವತೀ ಪ್ರಚೇತಯತಿ ಕೇತುನಾ ।
ಧಿಯೋ ವಿಶ್ವಾ ವಿರಾಜತಿ ॥ ೫ ॥

ಓಂ ॥ ಚತ್ವಾರಿ ವಾಗಿತಿ ಮಂತ್ರಸ್ಯ । ಉಚಥ್ಯಪುತ್ರ ಋಷಿಃ । ತ್ರಿಷ್ಟುಪ್ ಛಂದಃ । ಸರಸ್ವತೀ ದೇವತಾ । ಐಮಿತಿ ಬೀಜಶಕ್ತಿಕೀಲಕಂ । ಇಷ್ಟಾರ್ಥೇ ವಿನಿಯೋಗಃ । ಮಂತ್ರೇಣ ನ್ಯಾಸಃ ॥

ಯಾ ಪ್ರತ್ಯಗ್‌ದೃಷ್ಟಿಭಿರ್ಜೀವೈರ್ವ್ಯಜ್ಯಮಾನಾನುಭೂಯತೇ ।
ವ್ಯಾಪಿನೀ ಜ್ಞಪ್ತಿರೂಪೈಕಾ ಸಾ ಮಾಂ ಪಾತು ಸರಸ್ವತೀ ॥

ಓಂ ॥ ಐಂ। ಚತ್ವಾರಿ ವಾಕ್ ಪರಿಮಿತಾ ಪದಾನಿ ತಾನಿ ವಿದುರ್ಬ್ರಾ -
ಹ್ಮಣಾ ಯೇ ಮನೀಷಿಣಃ । ಗುಹಾ ತ್ರೀಣಿ ನಿಹಿತಾ ನೇಂಗ -
ಯಂತಿ ತುರೀಯಂ ವಾಚೋ ಮನುಷ್ಯಾ ವದಂತಿ ॥ ೬॥

ಓಂ॥ ಯದ್ವಾಗ್ವದಂತೀತಿ ಮಂತ್ರಸ್ಯ । ಭಾರ್ಗವಋಷಿಃ । ತ್ರಿಷ್ಟುಪ್ ಛಂದಃ । ಸರಸ್ವತೀ ದೇವತಾ । ಕ್ಲೀಮಿತಿ ಬೀಜಶಕ್ತಿಕೀಲಕಮ್ । ಇಷ್ಟಾರ್ಥೇ ವಿನಿಯೋಗಃ । ಮಂತ್ರೇಣ ನ್ಯಾಸಃ ॥

ನಾಮಾಜಾತ್ಯಾದಿಭಿರ್ಭೇದೈರಷ್ಟಧಾ ಯಾ ವಿಕಲ್ಪಿತಾ
ನಿರ್ವಿಕಲ್ಪಾತ್ಮನಾಽವ್ಯಕ್ತಾ ಸಾ ಮಾಂ ಪಾತು ಸರಸ್ವತೀ ॥

ಓಂ॥ ಕ್ಲೀಂ। ಯದ್ವಾಗ್ವದಂತ್ಯವಿಚೇತನಾನಿ ರಾಷ್ಟ್ರೀ ದೇವಾನಾಂ ನಿಷಸಾದ ಮಂದ್ರಾ। ಚತಸ್ರ ಊರ್ಜಂ ದುದುಹೇ ಪಯಾಂಸಿ ಕ್ವ ಸ್ವಿದಸ್ಯಾಃ ಪರಮಂ ಜಗಾಮ ॥ ೭ ॥

ಓಂ॥ ದೇವೀಂ ವಾಚಮಿತ್ಯಸ್ಯ ಮಂತ್ರಸ್ಯ । ಭಾರ್ಗವ ಋಷಿಃ । ತ್ರಿಷ್ಟುಪ್ ಛಂದಃ। ಸರಸ್ವತೀ ದೇವತಾ । ಸೌರಿತಿ ಬೀಜಶಕ್ತಿಕೀಲಕಮ್ । ಇಷ್ಟಾರ್ಥೇ ವಿನಿಯೋಗಃ । ಮಂತ್ರೇಣ ನ್ಯಾಸಃ ॥

ವ್ಯಕ್ತಾವ್ಯಕ್ತಗಿರಃ ಸರ್ವೇ ವೇದಾದ್ಯಾ ವ್ಯಾಹರಂತಿ ಯಾಮ್ ।
ಸರ್ವಕಾಮದುಘಾ ಧೇನುಃ ಸಾ ಮಾಂ ಪಾತು ಸರಸ್ವತೀ ॥

ಓಂ ॥ ಸೌಃ। ದೇವೀಂ ವಾಚಮಜನಯನ್ತ ದೇವಾಸ್ತಾಂ ವಿಶ್ವರೂಪಾಃ ಪಶವೋ ವದಂತಿ। ಸಾ ನೋ ಮಂದ್ರೇಷಮೂರ್ಜಂ ದುಹಾನಾ ಧೇನುರ್ವಾಗಸ್ಮಾನುಪಸುಷ್ಟುತೈತು ॥ ೮ ॥

ಓಂ ॥ ಉತತ್ವ ಇತಿ ಮಂತ್ರಸ್ಯ । ಬೃಹಸ್ಪತಿರ್ ಋಷಿಃ । ತ್ರಿಷ್ಟುಪ್ ಛಂದಃ । ಸರಸ್ವತೀ ದೇವತಾ । ಸಮಿತಿ ಬೀಜಶಕ್ತಿಕೀಲಕಮ್ । ಇಷ್ಟಾರ್ಥೇ ವಿನಿಯೋಗಃ । ಮಂತ್ರೇಣ ನ್ಯಾಸಃ ॥

ಯಾಂ ವಿದಿತ್ವಾಖಿಲಂ ಬಂಧಂ ನಿರ್ಮಥ್ಯಾಖಿಲವರ್ತ್ಮನಾ ।
ಯೋಗೀ ಯಾತಿ ಪರಂ ಸ್ಥಾನಂ ಸಾ ಮಾಂ ಪಾತು ಸರಸ್ವತೀ ॥

ಓಂ॥ ಸಂ। ಉತತ್ವಃ ಪಶ್ಯನ್ನದದರ್ಶ ವಾಚಮುತತ್ವಃ ಶೃಣ್ವನ್ ನ ಶೃಣೋತ್ಯೇನಾಮ್ । ಊತೋ ತ್ವಸ್ಮೈ ತನ್ವಾಂ ವಿಸಸ್ರೇ ಜಾಯೇವ ಪತ್ಯ ಉಶತೀ ಸುವಾಸಾಃ ॥ ೯ ॥

## ಮೂಲಪಾಠ

ಓಂ|| ಅಂಬಿತಮೇ ನದೀತಮೇ ಇತ್ಯಸ್ಯ ಮಂತ್ರಸ್ಯ । ಗೃತ್ಸಮದ ಋಷಿಃ । ಅನುಷ್ಟುಪ್ ಛಂದಃ । ಸರಸ್ವತೀ ದೇವತಾ । ಐಮಿತಿ ಬೀಜಶಕ್ತಿಕೀಲಕಂ । ಇಷ್ಟಾರ್ಥೇ ವಿನಿಯೋಗಃ । ಮಂತ್ರೇಣ ನ್ಯಾಸಃ ॥

ನಾಮರೂಪಾತ್ಮಕಂ ಸರ್ವಂ ಯಸ್ಯಾಮಾವೇಶ್ಯ ತಾಂ ಪುನಃ ।
ಧ್ಯಾಯಂತಿ ಬ್ರಹ್ಮರೂಪೈಕಾ ಸಾ ಮಾಂ ಪಾತು ಸರಸ್ವತೀ ॥

ಓಂ|| ಐಂ| ಅಂಬಿತಮೇ ನದೀತಮೇ ದೇವಿತಮೇ ಸರಸ್ವತೀ ।
ಅಪ್ರಶಸ್ತಾ ಇವ ಸ್ಮಸಿ ಪ್ರಶಸ್ತಿಮಂಬ ನಸ್ಕೃಧಿ ॥೧೦॥

ಚತುರ್ಮುಖಮುಖಾಂಭೋಜವನಹಂಸ ವಧೂರ್ಮಮ ।
ಮಾನಸೇ ರಮತಾಂ ನಿತ್ಯಂ ಸರ್ವಶುಕ್ಲಾ ಸರಸ್ವತೀ ॥

ನಮಸ್ತೇ ಶಾರದಾದೇವಿ ಕಾಶ್ಮೀರಪುರವಾಸಿನಿ ।
ತ್ವಾಮಹಂ ಪ್ರಾರ್ಥಯೇ ನಿತ್ಯಂ ವಿದ್ಯಾದಾನಂ ಚ ದೇಹಿ ಮೇ ॥

ಅಕ್ಷಸೂತ್ರಾಂಕುಶಧರಾ ಪಾಶಪುಸ್ತಕಧಾರಿಣೀ ।
ಮುಕ್ತಾಹಾರಸಮಾಯುಕ್ತಾ ವಾಚಿ ತಿಷ್ಠತು ಮೇ ಸದಾ ॥

ಕಂಬುಕಂಠೀ ಸುತಾಮ್ರೋಷ್ಠೀ ಸರ್ವಾಭರಣಭೂಷಿತಾ ।
ಮಹಾಸರಸ್ವತೀದೇವೀ ಜಿಹ್ವಾಗ್ರೇ ಸನ್ನಿವೇಶ್ಯತಾಂ ॥

ಯಾ ಶ್ರದ್ಧಾ ಧಾರಣಾ ಮೇಧಾ ವಾಗ್ದೇವೀ ವಿಧಿವಲ್ಲಭಾ ।
ಭಕ್ತಜಿಹ್ವಾಗ್ರಸದನಾ ಶಮಾದಿಗುಣದಾಯಿನೀ ॥

ನಮಾಮಿ ಯಾಮಿನೀನಾಥರೇಖಾಲಂಕೃತಕುಂತಲಾಮ್ ।
ಭವಾನೀಂ ಭವಸಂತಾಪನಿರ್ವಾಪಣಸುಧಾನದೀಮ್ ॥

ಯಃ ಕವಿತ್ವಂ ನಿರಾತಂಕಂ ಭುಕ್ತಿಂ ಮುಕ್ತಿಂ ಚ ವಾಂಛತಿ ।
ಸೋಽಭ್ಯರ್ಚ್ಯೈನಾಂ ದಶಶ್ಲೋಕ್ಯಾ ನಿತ್ಯಂ ಸ್ತೌತಿ ಸರಸ್ವತೀಮ್ ॥

ತಸ್ಯೈವಂ ಸ್ತುವತೋ ನಿತ್ಯಂ ಸಮಭ್ಯರ್ಚ್ಯ ಸರಸ್ವತೀಮ್ ।
ಭಕ್ತಿಶ್ರದ್ಧಾಭಿಯುಕ್ತಸ್ಯ ಷಣ್ಮಾಸಾತ್ ಪ್ರತ್ಯಯೋ ಭವೇತ್ ॥

ತತಃ ಪ್ರವರ್ತತೇ ವಾಣೀ ಸ್ವೇಚ್ಛಯಾ ಲಲಿತಾಕ್ಷರಾ ।
ಗದ್ಯಪದ್ಯಾತ್ಮಕೈಃ ಶಬ್ದೈರಪ್ರಮೇಯೈರ್ವಿವಕ್ಷಿತೈಃ ।
ಅಶ್ರುತೋ ಬುಧ್ಯತೇ ಗ್ರಂಥಃ ಪ್ರಾಯಃ ಸಾರಸ್ವತಃ ಕವಿಃ ॥

ಸಾ ಹೋವಾಚ ಸರಸ್ವತೀ –

ಆತ್ಮವಿದ್ಯಾ ಮಯಾ ಲಬ್ಧಾ ಬ್ರಹ್ಮಣೈವ ಸನಾತನೀ ।
ಬ್ರಹ್ಮತ್ವಂ ಮೇ ಸದಾ ನಿತ್ಯಂ ಸಚ್ಚಿದಾನಂದರೂಪತಃ ॥

ಪ್ರಕೃತಿತ್ವಂ ತತಃ ಸೃಷ್ಟಂ ಸತ್ತ್ವಾದಿಗುಣಸಾಮ್ಯತಃ ।
ಸತ್ಯೇವಾಭಾತಿ ಚಿಚ್ಛಾಯಾ ದರ್ಪಣೇ ಪ್ರತಿಬಿಂಬವತ್ ॥

ತೇನ ಚಿತ್ಪ್ರತಿಬಿಂಬೇನ ತ್ರಿವಿಧಾ ಭಾತಿ ಸಾ ಪುನಃ ।
ಪ್ರಕೃತ್ಯವಚ್ಛಿನ್ನತಯಾ ಪುರುಷತ್ವಂ ಪುನಶ್ಚ ಮೇ ॥

ಶುದ್ಧಸತ್ವಪ್ರಧಾನಾಯಾಂ ಮಾಯಾಯಾಂ ಬಿಂಬಿತೋ ಹ್ಯಜಃ ।
ಸತ್ವಪ್ರಧಾನಾ ಪ್ರಕೃತಿರ್ಮಾಯೇತಿ ಪ್ರತಿಪಾದ್ಯತೇ ॥

ಸಾ ಮಾಯಾ ಸ್ವವಶೋಪಾಧಿಸ್ಸರ್ವಜ್ಞಸ್ಯೇಶ್ವರಸ್ಯ ಹಿ ।
ವಶ್ಯಮಾಯತ್ವಮೇಕತ್ವಂ ಸರ್ವಜ್ಞತ್ವಂ ಚ ತಸ್ಯ ತು ॥

ಸಾತ್ವಿಕತ್ವಾತ್ ಸಮಷ್ಟಿತ್ವಾತ್ ಸಾಕ್ಷಿತ್ವಾಜ್ಜಗತಾಮಪಿ ।
ಜಗತ್ಕರ್ತುಮಕರ್ತುಂ ವಾ ಚಾನ್ಯಥಾ ಕರ್ತುಮೀಶತೇ ।
ಯಸ್ತು ಈಶ್ವರ ಇತ್ಯುಕ್ತಃ ಸರ್ವಜ್ಞತ್ವಾದಿಭಿರ್ಗುಣೈಃ ॥

ಶಕ್ತಿದ್ವಯಂ ಹಿ ಮಾಯಾಯಾಃ ವಿಕ್ಷೇಪಾಪ್ರತಿರೂಪಕಮ್ ।
ವಿಕ್ಷೇಪಶಕ್ತಿರ್ಲಿಂಗಾದಿಬ್ರಹ್ಮಾಂಡಾಂತಂ ಜಗತ್ಸೃಜೇತ್ ॥

ಅಂತರ್ದೃಗ್‌ದೃಶ್ಯಯೋರ್ಭೇದಂ ಬಹಿಶ್ಚ ಬ್ರಹ್ಮಸರ್ಗಯೋಃ ।
ಆವೃಣೋತ್ಯಪರಾ ಶಕ್ತಿಃ ಸಾ ಸಂಸಾರಸ್ಯ ಕಾರಣಮ್ ॥

ಸಾಕ್ಷಿಣಃ ಪುರತೋ ಭಾತಂ ಲಿಂಗದೇಹೇನ ಸಂಯುತಮ್ ।
ಚಿತಿಛಾಯಾಸಮಾವೇಶಾದ್ ಜೀವಃ ಸ್ಯಾದ್ವ್ಯಾವಹಾರಿಕಃ ॥

ಅಸ್ಯ ಜೀವತ್ವಮಾರೋಪಾತ್ ಸಾಕ್ಷಿಣ್ಯಪ್ಯವಭಾಸತೇ ।
ಆವೃತೌ ತು ವಿನಿಷ್ಟಾಯಾಂ ಭೇದಾಭಾವೇ ಪ್ರಯಾತಿ ತತ್ ॥

ತಥಾ ಸರ್ಗಬ್ರಹ್ಮಣೋಶ್ಚ ಭೇದಮಾವೃತ್ಯ ತಿಷ್ಠತಿ ।
ಯಾ ಶಕ್ತಿಸ್ತದ್ವಶಾದ್ ಬ್ರಹ್ಮ ವಿಕೃತತ್ವೇನ ಭಾಸತೇ ॥

ಅತ್ರಾಪ್ಯಾವೃತಿನಾಶೇನ ವಿಭಾತಿ ಬ್ರಹ್ಮಸರ್ಗಯೋಃ ।
ಭೇದಸ್ತಯೋರ್ವಿಕಾರಃ ಸ್ಯಾತ್ ಸರ್ಗೇಣ ಬ್ರಹ್ಮಣಿ ಕ್ವಚಿತ್ ॥

ಅಸ್ತಿ ಭಾತಿ ಪ್ರಿಯಂ ರೂಪಂ ನಾಮ ಚೇತ್ಯಂಶಪಂಚಕಮ್ ।
ಆದ್ಯತ್ರಯಂ ಬ್ರಹ್ಮರೂಪಂ ಜಗದ್ರೂಪಂ ತತೋದ್ವಯಮ್ ॥

ಉಪೇಕ್ಷ್ಯ ನಾಮರೂಪೇ ದ್ವೇ ಸಚ್ಚಿದಾನಂದತತ್ಪರಃ ।
ಸಮಾಧಿಂ ಸರ್ವದಾ ಕುರ್ಯಾತ್ ಹೃದಯೇ ವಾಽಥವಾ ಬಹಿಃ ॥

ಸವಿಕಲ್ಪೋ ನಿರ್ವಿಕಲ್ಪಃ ಸಮಾಧಿರ್ದ್ವಿವಿಧೋ ಹೃದಿ ।
ದೃಶ್ಯಶಬ್ದಾನುಭೇದೇನ ಸವಿಕಲ್ಪಃ ಪುನರ್ದ್ವಿಧಾ ॥

ಕಾಮಾದ್ಯಾಶ್ಚಿತ್ತಗಾ ದೃಶ್ಯಾಸ್ತತ್ಸಾಕ್ಷಿತ್ವೇನ ಚೇತನಮ್ ।
ಧ್ಯಾಯೇತ್ ದೃಶ್ಯಾನುವಿದ್ಧೋಽಯಂ ಸಮಾಧಿಸ್ಸವಿಕಲ್ಪಕಃ ॥

ಅಸಂಗಃ ಸಚ್ಚಿದಾನಂದಃ ಸ್ವಪ್ರಭೋ ದ್ವೈತವರ್ಜಿತಃ ।
ಅಸ್ಮೀತಿ ಶಬ್ದ ವಿದ್ಧೋಽಯಂ ಸಮಾಧಿಸ್ಸವಿಕಲ್ಪಕಃ ॥

ಸ್ವಾನುಭೂತಿರಸಾವೇಶಾತ್ ದೃಶ್ಯಶಬ್ದಾನಪೇಕ್ಷಿತಃ ।
ನಿರ್ವಿಕಲ್ಪಸಮಾಧಿಃ ಸ್ಯಾತ್ ನಿವಾತಸ್ಥಿತದೀಪವತ್ ॥

ಹೃದಿ ವಾ ಬಾಹ್ಯದೇಶೇಽಪಿ ಯಸ್ಮಿನ್ ಕಸ್ಮಿಂಶ್ಚ ವಸ್ತುನಿ ।
ಸಮಾಧಿರಾದ್ಯಕ್ ಸನ್ಮಾತ್ರಾ ನಾಮರೂಪಪೃಥಕ್ಕೃತಿಃ ॥

ಸ್ತಬ್ಧೀಭಾವೋ ರಸಾಸ್ವಾದಃ ದ್ವಿತೀಯಃ ಪೂರ್ವವನ್ಮತಃ ।
ಏತೈಃ ಸಮಾಧಿಭಿಃ ಷಡ್ಭಿಃ ನಯೇತ್ ಕಾಲಂ ನಿರಂತರಮ್ ॥

ದೇಹಾಭಿಮಾನೇ ಗಳಿತೇ ವಿಜ್ಞಾತೇ ಪರಮಾತ್ಮನಿ ।
ಯತ್ರ ಯತ್ರ ಮನೋ ಯಾತಿ ತತ್ರ ತತ್ರ ಪರಾಮೃತಮ್ ॥

ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥

ಮಯಿ ಜೀವತ್ವಮೀಶತ್ವಂ ಕಲ್ಪಿತಂ ವಸ್ತುತೋ ನ ಹಿ ।
ಇತಿ ಯಸ್ತು ವಿಜಾನಾತಿ ಸ ಮುಕ್ತೋ ನಾತ್ರ ಸಂಶಯಃ ॥

॥ ಇತ್ಯುಪನಿಷತ್ ॥

॥ ಹರಿಃ ಓಮ್ ॥

॥ ಇತಿ ಶ್ರೀಸರಸ್ವತೀರಹಸ್ಯೋಪನಿಷತ್ ಸಮಾಪ್ತಾ ॥

ರಕ್ಷಾಪುಟದಿಂದ ಮುಂದುವರೆದಿದೆ.

ಸಂಕ್ಷೇಪವಾಗಿದೆ. (ನಾಲ್ಕನೆಯ ಮುದ್ರಣ: 1999 ಪು. ಕ್ರೌನ್ 4+22)

**8.** ಶ್ರೀರಾಮಹೃದಯ: ಅಧ್ಯಾತ್ಮ ರಾಮಾಯಣದ ಮೊದಲನೆಯ ಸರ್ಗದ ಭಾಗವು ಮೂಲ ಸಮೇತ ಇದರಲ್ಲಿದೆ. ಸೀತಾದೇವಿಯೂ, ಶ್ರೀರಾಮನೂ ಹನುಮಂತನಿಗೆ ಮಾಡಿದ ತತ್ತ್ವೋಪದೇಶವಿದು. ರಾಮಭಕ್ತರಿಗೆ ಅನುಸಂಧಾನಕ್ಕೆ ತಕ್ಕ ಗ್ರಂಥ. ಪಾಠಾಂತರ ಸಹಿತ ಮೂಲ, ಅರ್ಥ, ಟಿಪ್ಪಣಿ, ಸಾರಾಂಶ ಇಷ್ಟೂ ಇವೆ. (ಮೂರನೆಯ ಮುದ್ರಣ: 1980 (ಪು. ಕ್ರೌನ್ 22)

**9.** ಭಗವಚ್ಚರಣ ಸ್ತೋತ್ರ: ಶ್ರೀ ಬ್ರಹ್ಮಾನಂದ ಸ್ವಾಮಿಗಳವರ ಕೃತಿ. ಅಧ್ಯಾತ್ಮ ತತ್ತ್ವವನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳಬೇಕೆನ್ನುವವರು ಯಾವ ಯಾವ ಸಾಧನಗಳನ್ನು ಅಳವಡಿಸಿಕೊಡಬೇಕೆಂಬು ದನ್ನೂ, ಪ್ರತ್ಯೇಕಿಸುವ ಸಣ್ಣ ಪ್ರಕರಣವಿದು. ಸಾಧಕರಿಗೆ ಅಮೂಲ್ಯವಾದದ್ದು. ಮೂಲಶ್ಲೋಕಗಳು, ಭಾವಾರ್ಥ ವಿವರಣೆ- ಇಷ್ಟೂ ಇವೆ. (ನಾಲ್ಕನೆಯ ಮುದ್ರಣ: 1989 ಪು. ಕ್ರೌನ್ 4+60)

**10.** ಗಣೇಶಾಷ್ಟಕ: ಗಣೇಶ್ ಪುರಾಣದಿಂದ ಆರಿಸಿದ ಸ್ತೋತ್ರ ಪ್ರಪಂಚವೆಲ್ಲವೂ ಬ್ರಹ್ಮವೇ ಎಂಬ ಸಿದ್ಧಾಂತವನ್ನು ಮನೋಹರ ರೀತಿಯಿಂದ ವಿವರಿಸಿರುವ ಈ ಸ್ತೋತ್ರಕ್ಕೆ ತಿಳಿಗನ್ನಡದ ಭಾವಾರ್ಥವನ್ನೂ ವಿವರಣೆಯನ್ನೂ ಜೋಡಿಸಿದೆ. (ಮೂರನೆಯ ಮುದ್ರಣ: 1998. ಕ್ರೌನ್ 4+25)

**11.** ಶ್ರೀರಾಮಗೀತೆ ಮತ್ತು ವಾಗ್ದೇವೀ ಸ್ತೋತ್ರ: ಅಧ್ಯಾತ್ಮರಾಮಾಯಣದಿಂದ ಆರಿಸಿದ ಭಾಗವಿದ್ದು ಶ್ರೀರಾಮನು ಲಕ್ಷ್ಮಣನಿಗೆ ಮಾಡಿದ ಅಮೋಘವಾದ ಉಪದೇಶವು ಇದರಲ್ಲಿದೆ. ಇದರಲ್ಲಿ ಮಹಾವಾಕ್ಯ ವಿಚಾರವೂ, ಪರಮಾತ್ಮನಲ್ಲಿ ಪ್ರಪಂಚವನ್ನೆಲ್ಲ ಲಯಗೊಳಿಸಿಕೊಳ್ಳುವ ಸಾಧನಕ್ರಮವೂ ಉಕ್ತವಾಗಿದೆ. ಜ್ಞಾನಕ್ಕೆ ಭಕ್ತಿಯೇ ಸಾಧನವೆಂದೂ ಪ್ರತಿಪಾದಿಸಿದೆ. ವಾಗ್ದೇವಿ ಸ್ತೋತ್ರವನ್ನು ಪ್ರತಿದಿನವೂ ಕೀರ್ತನೆ ಮಾಡುವದರಿಂದ ಮನಸ್ಸಿನಲ್ಲಿ ಹರ್ಷವೂ, ಭಗವಂತನಲ್ಲಿ ಅನುರಾಗವೂ ಉಂಟಾಗುವದು. ಪರಮ ಪುರುಷಾರ್ಥಕ್ಕೆ ಇದೇ ನಿಚ್ಚಣಿಕೆಯು.

(ಮೂರನೆಯ ಮುದ್ರಣ 1999 ಪು. ಕ್ರೌನ್ 10+44)

**12.** ದಕ್ಷಿಣಾಮೂರ್ತಿಸ್ತೋತ್ರ: ಸಿದ್ಧಾಂತ ಪ್ರಧಾನವಾದ ಈ ಸ್ತೋತ್ರದಲ್ಲಿ ಗುರುಮೂರ್ತಿಯಾದ ಪರಮೇಶ್ವರನ ತತ್ತ್ವವನ್ನು ಹತ್ತು ಶ್ಲೋಕಗಳಲ್ಲಿ ವರ್ಣಿಸಿರುವದನ್ನು ಶ್ರೀಶ್ರೀಗಳವರು ತಮ್ಮ ವಿಸ್ತಾರವಾದ ಕನ್ನಡ ವಿವರಣೆಯಲ್ಲಿ ಅಂಗೈನಲ್ಲಿರುವ ನೆಲ್ಲಿಯಕಾಯಿಯಂತೆ ಸುಸ್ಪಷ್ಟವಾಗಿ ಪ್ರತಿಪಾದಿಸಿರುತ್ತಾರೆ. ಆತ್ಮತತ್ತ್ವ ಜಿಜ್ಞಾಸುಗಳಿಗೆ ಇದೊಂದು ಕಾಮಧೇನುವಂತಿದೆ

(ನಾಲ್ಕನೆಯ ಮುದ್ರಣ: 1992 ಡೆಮ್ಮಿ 4+72)

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ**

ಅ.ಪ್ರ.ಕಾ. ಹೊಳೇನರಸೀಪುರ
ಹಾಸನ ಜಿಲ್ಲಾ 573211
ದೂರವಾಣಿ: 08175-273820

ಅ.ಪ್ರ.ಕಾ. 68, 2ನೇ ಬ್ಲಾಕ್
ತ್ಯಾಗರಾಜನಗರ, ಬೆಂಗಳೂರು-28
ದೂರವಾಣಿ: 080-26765548



## ವೇ || ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳ ಕಿರುಪರಿಚಯ

ಶ್ರೀ ಕೃಷ್ಣಯಜುರ್ವೇದ ಸಲಕ್ಷಣ ಘನಾಂತ ಸ್ಮಾರ್ತಪ್ರಯೋಗ ಉಭಯ ವಿದ್ವಾನ್ ದಿ|| ಶೃಂಗೇರಿ ಶ್ರೀಕಂಠಘನಪಾಠಿಗಳವರು ಮತ್ತು ಕಮಲಮ್ಮನವರ ಸೀಮಂತ ಪುತ್ರರಾದ ಶ್ರೀ **ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳು** ತಾ|| 2-6-1928ರಲ್ಲಿ ಜನಿಸಿದರು. ಒಂಭತ್ತನೆಯ ವಯಸ್ಸಿನಲ್ಲಿಯೇ ಬ್ರಹ್ಮಚರ್ಯಾ ಶ್ರಮವನ್ನು ಸ್ವೀಕರಿಸಿ ತಂದೆಯವರಿಂದಲೇ ವೇದಾಧ್ಯಯನ ಕಾಲೋಚಿತ ಭಾಗಗಳನ್ನು ಅಭ್ಯಾಸ ಮಾಡಿದರು, 14ನೆಯ ವಯಸ್ಸಿನಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಅದೇ ಸಂದರ್ಭದಲ್ಲಿ ಪಿತೃವಿಯೋಗವಾದ್ದರಿಂದ ಆಂಗ್ಲವಿದ್ಯಾಭ್ಯಾಸದಿಂದ ನಿವೃತ್ತರಾಗಿ ಬೇಲೂರಿನಲ್ಲಿ ಸಂಸ್ಕೃತಪಾಠಶಾಲೆಗೆ ಸೇರಿ ನಾಲ್ಕು ವರ್ಷಗಳ ಕಾಲ ಸಂಸ್ಕೃತಾಭ್ಯಾಸ ಮಾಡಿ ಚಂಪೂ ನಾಟಕ (ಸಾಹಿತ್ಯ) ಪರೀಕ್ಷೆಯಲ್ಲಿ ಪ್ರಥಮದರ್ಜೆಯಲ್ಲಿ ಉತ್ತೀರ್ಣರಾದರು. ಅನಂತರ 1947ರಲ್ಲಿ ಹೊಳೆನರಸೀಪುರಕ್ಕೆ ಬಂದು ಅಧ್ಯಾತ್ಮವಿದ್ಯಾನಿಲಯಕ್ಕೆ ಸೇರಿ ಐದು ವರ್ಷಗಳ ಕಾಲ ಶಾಂಕರ ವೇದಾಂತಾಧ್ಯಾಯನವನ್ನು ಶ್ರೀ **ಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳವರ** ಸನ್ನಿಧಿಯಲ್ಲಿ ಅಭ್ಯಾಸಮಾಡಿ 1952ರಲ್ಲಿ **ಅಧ್ಯಾತ್ಮವಿದ್ಯಾಪ್ರವೀಣ** ಎಂಬ ಪ್ರಶಸ್ತಿಯನ್ನು ಪಡೆದರು. ಅನಂತರ ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿಯೇ ಪಂಡಿತರಾಗಿ ನೇಮಿಸಲ್ಪಟ್ಟು ಪಾಠ ಪ್ರವಚನಗಳು, ಉಪನ್ಯಾಸಗಳು ಹಾಗೂ ಸಂಸ್ಥೆಯ ಆಡಳಿತ ವಿಭಾಗದಲ್ಲಿಯೂ ಸೇವೆಯನ್ನು ಸಲ್ಲಿಸುತ್ತಾ ಈಗಲೂ ಸಂಸ್ಥೆಯಲ್ಲಿಸೇವಾತತ್ಪರರಾಗಿದ್ದಾರೆ.

ಅಧ್ಯಾತ್ಮಪ್ರಕಾಶಕಾರ್ಯಾಲಯದ ಸಂಸ್ಥಾಪಕರಾದ ಪೂಜ್ಯ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು 1975ರಲ್ಲಿ ಬ್ರಹ್ಮೀಭೂತರಾದ ಮೇಲೆ ಇವರು ''ಅಧ್ಯಾತ್ಮಪ್ರಕಾಶ'' ಮಾಸಪತ್ರಿಕೆಯ ಸಂಪಾದಕರೂ, ಲೇಖಕರೂ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಜೊತೆಗೆ ಅಧ್ಯಾತ್ಮಗ್ರಂಥಗಳ ಬರಹಗಾರರೂ ಪ್ರಕಾಶಕರೂ ಆಗಿ ಸೇವೆ ಸಲ್ಲಿಸುತ್ತಾ ಪ್ರಧಾನಕಾರ್ಯಾಲಯದಲ್ಲಿಯೇ ಕಳೆದ 52 ವರ್ಷಗಳಿಂದಲೂ ಸೇವಾ ನಿರತರಾಗಿದ್ದಾರೆ. ಶ್ರೀ ಶ್ರೀಗಳವರ ಕಾಲಾನಂತರ ವೇದ, ಪುರಾಣ ಮತ್ತು ವೇದಾಂತಗಳ ಮೇಲೆ ಸುಮಾರು 30 ಗ್ರಂಥಗಳನ್ನು ಬರೆದು ಕಾರ್ಯಾಲಯದ ಮೂಲಕ ಪ್ರಕಟಿಸಿದ್ದಲ್ಲದೆ, **ಬ್ರಹ್ಮಸೂತ್ರಶಾಂಕರ ಭಾಷ್ಯ, ಶ್ರೀಮದ್ಭಗವದ್ಗೀತಾ ಭಾಷ್ಯ, ಮಹಾನಾರಾಯಣೋಪನಿಷತ್ತು**ಗಳ ಮೇಲೆ ಪ್ರವಚನಗಳನ್ನೂ ನೀಡಿದ್ದಾರೆ. ಇವುಗಳೆಲ್ಲವೂ ಧ್ವನಿಸುರಳಿ / ಸಿ.ಡಿ.ಗಳಲ್ಲಿ ಅಡಕವಾಗಿದ್ದು ಜನಪ್ರಿಯವಾಗಿವೆ ಮತ್ತು ಕಾರ್ಯಾಲಯದಲ್ಲಿಮಾರಾಟಕ್ಕೆ ದೊರೆಯುತ್ತವೆ.